ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೩೮
ವಿಚಾರ ಸಾಹಿತ್ಯಮಾಲೆ – ೭೧
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಅರವಿಂದರ ಬೋಧನೆಗಳು

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ

ಮೂಲ ಸಂಪಾದಕರು

**ಆರ್. ಆರ್. ದಿವಾಕರ್**

**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ

**ಲೀಲಾವತಿ ಮುನ್ಷಿ** – ಅಧ್ಯಕ್ಷೆ

**ಕೆ. ಕೆ. ಬಿರ್ಲಾ** – ಸದಸ್ಯರು

**ಎಸ್. ಜಿ. ನೇವಾತಿಯ** – ಸದಸ್ಯರು

**ಜಿ. ಎಚ್. ದವೆ** – ಸದಸ್ಯರು

**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**
(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ಅರವಿಂದರ ಬೋಧನೆಗಳು

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I ೮೯–೧


ಮೂಲ

**ಎಂ. ಪಿ. ಪಂಡಿತ್**

ಅನುವಾದ

**ಡಾ. ಎಚ್. ಜಿ. ಸತೀಶ್ ಪ್ರಸಾದ್**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Aravindara Bodhanegalu:** Kannada translation of *Teachings of Sri Aurobindo* : **M. P. Pandit;** Kannada translation by **Dr. H. G. Satish Prasad;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 54. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxii + ೫೪
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ।। ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೩೩೪೨೭೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು - ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ-ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ-ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ-ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ-ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**'ಕನಕದಾಸರ ಕೃತಿ'**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ **'ಕಾವೇರಿ ನ್ಯಾಯಾಧಿಕರಣದ ತೀರ್ಪಿ'**ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ **'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ'** ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

# ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಎಂ.ಪಿ. ಪಂಡಿತ್ ಅವರ *Teachings of Sri Aurobindo* ಎಂಬ ಪುಸ್ತಕದ ಕನ್ನಡ ಅನುವಾದ. ಇದನ್ನು 'ಅರವಿಂದರ ಬೋಧನೆಗಳು' ಎಂಬ ಹೆಸರಿನಲ್ಲಿ ಡಾ. ಎಚ್. ಜಿ. ಸತೀಶ್ ಪ್ರಸಾದ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



# ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



# ಪ್ರಸ್ತಾವನೆ

ಅತಿ ಪುರಾತನ ಕಾಲದಿಂದಲೂ ದಿವ್ಯಜ್ಞಾನಿಗಳ, ಪುಣ್ಯಪುರುಷರ, ಋಷಿ ಮುನಿಗಳ, ಚಿಂತಕರ ಕನಸು ಪರಿಪೂರ್ಣ ಸಮಾಜದಲ್ಲಿ ಪರಿಪೂರ್ಣ ಮನುಷ್ಯ. ಪ್ರಸ್ತುತ ಮಾನವನು ಅಪರಿಪೂರ್ಣನಾಗಿದ್ದು, ತನ್ನಲ್ಲಿ ಮತ್ತು ತನ್ನ ಸಹಚರರಲ್ಲಿ ಪ್ರಗತಿಪರ ಪರಿಪೂರ್ಣತೆಯನ್ನು ಸಾಧಿಸಬೇಕು ಮತ್ತು ಸಾಧಿಸುತ್ತಾನೆ. ಮನಸ್ಸು ಮತ್ತು ಇಂದ್ರಿಯಗಳ ಸಂಕುಚಿತ ಗಡಿಗಳನ್ನು ದಾಟಿ ತನ್ನ ಸ್ವಂತ ಪ್ರಜ್ಞೆಯನ್ನು ಅಭಿವೃದ್ಧಿಪಡಿಸಿಕೊಳ್ಳುವುದರಿಂದ ಅವನು ಇದನ್ನು ಮಾಡಬಹುದು. ಏಕೆಂದರೆ ಒಬ್ಬನ ಪ್ರಜ್ಞೆಯೇ ಅವನ ಪರಿಪೂರ್ಣತೆ ಅಥವಾ ಅಪರಿಪೂರ್ಣತೆಯನ್ನು ನಿಶ್ಚಯಿಸುತ್ತದೆ.

ವೇದಕಾಲದ ಋಷಿಮುನಿಗಳು ರಿತಮ್ ಜ್ಯೋತಿಯ ಬಗ್ಗೆ ಮಾತನಾಡಿದ್ದಾರೆ, ಸತ್ಯದ ಬೆಳಕನ್ನು ಹೊಂದುವುದರಿಂದ ಮನುಷ್ಯನು ಅಮರತ್ವ, ಪರಮಶ್ರೇಷ್ಠ ಜ್ಞಾನ, ಶಕ್ತಿ ಮತ್ತು ಆನಂದದಲ್ಲಿ ಬೆಳೆಯುತ್ತಾನೆ. ಹಾಗೆಯೇ ಉಪನಿಷತ್ತುಗಳ ಋಷಿಗಳೂ ಸಹ ಮಹಸ್ ಅಂದರೆ ಮನಸ್ಸಿನ ಕ್ಷೇತ್ರಕ್ಕೆ ಸಂಬಂಧಿಸಿದ ವಿಜ್ಞಾನವು ಮನುಷ್ಯನನ್ನು ಜ್ಞಾನ ಮತ್ತು ಸ್ವಾತಂತ್ರ್ಯದ ಭವ್ಯತೆಯೆಡೆಗೆ ಕೊಂಡೊಯ್ಯುತ್ತದೆ ಎಂದು ಉಲ್ಲೇಖಿಸಿದ್ದಾರೆ. ಆಧುನಿಕ ಯುಗದಲ್ಲಿ ಶ್ರೀ ಅರವಿಂದೋರವರು ಮತ್ತು ಮಾತೆಯವರು ಈ ಪ್ರಾಚೀನ ನಂಬಿಕೆಯನ್ನು ಪುನರುಜ್ಜೀವನಗೊಳಿಸಿ, ಮಾನವನ ಅದೃಷ್ಟವು ತನ್ನೆಲ್ಲಾ ಬಹುಲ್ಯದಲ್ಲಿ, ಮಾನವೀಯತೆಯ ಪರಿಪೂರ್ಣತೆಯಲ್ಲಿ ಅರಳುತ್ತಿರುವುದನ್ನು ಗ್ರಹಿಸಿ ಉನ್ನತ ಜ್ಞಾನವು ಅಭಿವೃದ್ಧಿಯಾಗುವ ಅನಿವಾರ್ಯವಾದ ಫಲಿತಾಂಶದಿಂದ, ಒಂದು ಆಧ್ಯಾತ್ಮಿಕ ಸತ್ಯ–ಶಕ್ತಿ ಮನಸ್ಸಿನ ಆಧಿಪತ್ಯಕ್ಕಿಂತ ಮೇಲಿನದು– ಉನ್ನತ ಮನಸು, ಭೂಮಿಯಲ್ಲಿ ಈ ಸತ್ಯ ಪ್ರಜ್ಞೆಯನ್ನು ಸ್ಥಾಪಿಸುವ ಮತ್ತು ಕಾರ್ಯ ನಿರ್ವಹಿಸುವ ಕಾಲವು ಹತ್ತಿರ ಬರುವಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಎಲ್ಲಾ ಉನ್ನತ ಬೋಧನೆಗಳ ಮೂಲತತ್ವಗಳನ್ನು ಬಹಿರಂಗಗೊಳಿಸುವ ಪ್ರಯತ್ನವಲ್ಲದೆ, ಈ ಜ್ಞಾನದ ಸತ್ಯಗಳನ್ನೂ, ಮನುಷ್ಯ, ಪ್ರಕೃತಿ ಮತ್ತು ದೇವರ ಪ್ರಾಮುಖ್ಯತೆಯನ್ನು ವಿಶದವಾಗಿ ವಿವರಿಸುವ ಪ್ರಯತ್ನವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ.

**ಎಂ. ಪಿ. ಪಂಡಿತ್**

Blank



## ಪರಿವಿಡಿ

ಮುನ್ನುಡಿ v
ಸಂದೇಶ vii
ಹಾರೈಕೆ viii
ಪ್ರಾಸ್ತಾವಿಕ ನುಡಿ ix
ಪೀಠಿಕೆ xi
ಅರಿಕೆ xiv
ಕುಲಪತಿಗಳ ಪ್ರಸ್ತಾವನೆ xv
ಪ್ರಸ್ತಾವನೆ xvii

೧. ತತ್ತ್ವಜ್ಞಾನ ೧
೨. ಯೋಗ ೮
೩. ದೈವೀಮಾತೆ ೧೬
೪. ಸಾಮಾಜಿಕ ಅಭಿವೃದ್ಧಿಯ ಮನೋಭಾವ ೨೩
೫. ಮನುಕುಲದ ಒಗ್ಗಟ್ಟಿನ ಆದರ್ಶ ೩೦
೬. ವೇದದ ರಹಸ್ಯ ೩೬
೭. ಉಪನಿಷತ್ತುಗಳು ೪೩
೮. ಭಗವದ್ಗೀತೆ ೪೯

Blank



# ಅರವಿಂದರ ಬೋಧನೆಗಳು

Blank

# ೧. ತತ್ತ್ವಜ್ಞಾನ

ಪ್ರತಿಯೊಬ್ಬ ಚಿಂತಕ, ಜಾಗೃತಾವಸ್ಥೆಯಲ್ಲಿ ಈ ಜೀವನದ ಅರ್ಥವೇನು? ಎಂದು ತನ್ನನ್ನೇ ತಾನು ಕೇಳಿಕೊಳ್ಳುತ್ತಾನೆ. ಅಥವಾ ಜೀವನಕ್ಕೆ ಏನಾದರೂ ಅರ್ಥವಿದೆಯೆ? ಈ ಪ್ರಪಂಚ ಏನು? ಅದು ಹೇಗೆ ಉಂಟಾಯಿತು? ಅದರ ಗತಿ ಎತ್ತ ಸಾಗಿದೆ? ಮತ್ತು ಮನುಷ್ಯ ಯಾರು? ಅವನಿಗೊಂದು ಭೂತಕಾಲವಿತ್ತೆ? ಅವನಿಗೊಂದು ಭವಿಷ್ಯವಿದೆಯೆ? ಮಾನವನ ವರ್ತಮಾನದ ಮಹತ್ವವೇನು?

ಈ ಮೇಲಿನ ಹಲವು ಪ್ರಶ್ನೆಗಳಿಗೆ ಅನೇಕರು ಈ ಹಿಂದೆಯೇ ಉತ್ತರಿಸಿದ್ದಾರಾದರೂ ಆ ಉತ್ತರಗಳು ಭಿನ್ನವಾಗಿಯೂ ಪರಸ್ಪರ ವಿರೋಧಾಭಾಸದಿಂದ ಕೂಡಿಯೂ ಇರುತ್ತಿದ್ದವು. ಈ ವಿಶ್ವವು ಸರ್ವಶಕ್ತನಾದ ಭಗವಂತನ ಸೃಷ್ಟಿಯೆಂದು ಹೇಳಲಾಗುತ್ತದೆ. ಎಲ್ಲಾ ಜೀವಿಗಳನ್ನೂ ತನ್ನ ಆಜ್ಞೆಯೊಂದರ ಮೂಲಕ ಸೃಷ್ಟಿಸಿದ ಭಗವಂತ ನ್ಯಾಯದ ದಂಡವನ್ನು ಕೈಲಿ ಹಿಡಿದುಕೊಂಡೇ ಆ ಜೀವಿಗಳನ್ನೆಲ್ಲಾ ಆಳುತ್ತಾನೆ. ಅವನು ಒಳ್ಳೆಯವರಿಗೆ ಆನಂದದ ಬಹುಮಾನವನ್ನು ನೀಡಿದರೆ ದುಷ್ಟರಿಗೆ ಅತೀವ ಕಷ್ಟಗಳನ್ನು ನೀಡಿ ಶಿಕ್ಷಿಸುತ್ತಾನೆ. ಇದೆಲ್ಲವೂ ಹಾಗೆಯೇ ಮುಂದುವರಿದುಕೊಂಡು ಹೋಗುತ್ತಿದ್ದು ಒಂದು ದಿನ ಅವನಿಗೆ ಸಾಕೆನಿಸಿದಾಗ ಈ ಸಾಮ್ರಾಜ್ಯವನ್ನು ಕರಗಿಸಿಬಿಡುತ್ತಾನೆ.

ಇನ್ನು ಕೆಲವರ ಅಭಿಪ್ರಾಯದ ಪ್ರಕಾರ ದೇವರಿಲ್ಲ. ದೇವರೆಂಬುದು ಮನುಷ್ಯನ ಕಲ್ಪನೆಯಲ್ಲಿ ರೂಪುಗೊಂಡಂತಹ ಕಟ್ಟುಕತೆ. ವಿಶ್ವವು ಸ್ವಯಂ ಅಸ್ತಿತ್ವದಲ್ಲಿರುವುದು. ಎಲ್ಲವೂ ಮೂಲಧಾತು (ಪಂಚಮಹಾಭೂತಗಳು) ಹಾಗೂ ಶಕ್ತಿ ಇವುಗಳ ನಡುವಿನ ಕ್ರಿಯೆ ಮತ್ತು ಪ್ರತಿಕ್ರಿಯೆಗಳ ಪರಿಣಾಮ ಸ್ವರೂಪ; ಪ್ರತಿಯೊಂದು ವಿಧವು ಅಸ್ತಿತ್ವಕ್ಕೆ ಬರುವುದು ಮತ್ತು ಅಸ್ತಿತ್ವವನ್ನು ಕಳೆದುಕೊಳ್ಳುವುದು ಭೌತಿಕ ಧಾತುಗಳ ಸಂಯೋಜನೆ ಮತ್ತು ವಿಯೋಜನೆಯೆಂಬ ಯಾಂತ್ರಿಕ ಪರಿಣಾಮದಿಂದ. ಪ್ರಜ್ಞೆಯೊಂದೇ ಭೌತಿಕ ಜೀವಿಯ ಇಂದ್ರಿಯಗೋಚರ ವಸ್ತುವಾಗಿದೆ. ಭೂತಕಾಲ ಅಥವಾ ಭವಿಷ್ಯ ಕಾಲವೆಂಬುದಿಲ್ಲವೇ ಇಲ್ಲ; ವರ್ತಮಾನವಷ್ಟೇ ಸತ್ಯ ಮತ್ತು ಅದನ್ನು ಸದುಪಯೋಗ ಪಡಿಸಿಕೊಳ್ಳುವುದರಲ್ಲೇ ಜಾಣತನವಿದೆ.

ಇಲ್ಲ, ಈ ವಿಶ್ವವೂ ವಾಸ್ತವವಲ್ಲ ಎಂಬುದು ಇನ್ನೂ ಕೆಲವರ ಅಭಿಮತ. ಇಲ್ಲಿ ಎಲ್ಲವೂ ಕ್ಷಣಕ್ಷಣಕ್ಕೂ ಬದಲಾಗುವ ಕ್ಷಣಿಕ ಅಥವಾ ನಶ್ವರ ಸಂಗತಿಗಳಾಗಿವೆ; ಇಲ್ಲಿ ಮನುಷ್ಯ ಚಲಿಸುತ್ತಿರುವ ಭಾವನೆಗಳ ನದಿ ಮತ್ತು ಅಭಿಪ್ರಾಯಗಳ ಕಂತೆ; ಈ ಸರಣಿಯು ಎಂದೂ ಕೊನೆಗೊಳ್ಳದ ಆಸೆ ಆಕಾಂಕ್ಷೆಯಿಂದ ಪ್ರೇರೇಪಿಸಲ್ಪಟ್ಟು ನಡೆಯುತ್ತಿರುತ್ತದೆ. ಯಾವಾಗ ಈ ಆಧಾರವು ಬಿಟ್ಟು ಹೋಗುವುದೋ ಆಗ ಪ್ರವಾಹ ಹರಿಯುವಿಕೆಯು ಸ್ಥಗಿತಗೊಳ್ಳುವುದು. ಶಾಶ್ವತವಾದ ಸತ್ಯವೆಂಬುದು ಇಲ್ಲವೇ ಇಲ್ಲ. ನಿಜವಾಗಿ ಅಸ್ತಿತ್ವದಲ್ಲಿರುವ ಒಂದೇ ಸಂಗತಿಯೆಂದರೆ ಸೊನ್ನೆ ಅಥವಾ ಶೂನ್ಯ.

ಮಾನವನ ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರುವ ಇನ್ನೊಂದು ಅಭಿಪ್ರಾಯವೂ ಇದೆ. ಅದರ ಪ್ರಕಾರ ಪರಮಶ್ರೇಷ್ಠವಾದ ಸತ್ಯಸ್ಥಿತಿ ಅಥವಾ ವಾಸ್ತವಿಕತೆಯೊಂದಿದೆ; ಅದುವೆ ಸಂಪೂರ್ಣವಾಗಿ ವಿವರಿಸಲಾಗದ, ಅದ್ವಿತೀಯವಾದ "ಬ್ರಹ್ಮ" – ವಿಶ್ವದ ಎಲ್ಲಾ ಸೃಷ್ಟಿಗಳಿಗಿಂತಲೂ ಉತ್ಕೃಷ್ಟವಾದುದಾಗಿದ್ದು, ಅದೊಂದೇ ಸತ್ಯ, ಉಳಿದುದೆಲ್ಲವೂ ಮಿಥ್ಯ. ಈ ವಿಶ್ವವು ಬ್ರಹ್ಮನಿಂದ ಅಸ್ತಿತ್ವಕ್ಕೆ ಬಂದಿರುವ ಭಾರಿ ನೆರಳಿನಾಟ ಅಥವಾ ತನ್ನ ಸ್ವಶಕ್ತಿಯಾದ ಮಾಯೆಯಿಂದ ಹೆಣೆಯಲ್ಪಟ್ಟಿರುವ ಭ್ರಮಾಲೋಕವಾಗಿದೆ. ಹೀಗಾಗಿ ಈ ಪ್ರಪಂಚವೆಂಬ ಅದ್ಭುತ ನಾಟಕರಂಗದ ಮೇಲೆ, ಅದರಲ್ಲಿರುವ ಜೀವಜಂತುಗಳೆಲ್ಲಾ ನೆರಳಿನಂತಹ ಪಾತ್ರಧಾರಿಗಳು. ಪ್ರತಿಯೊಬ್ಬರೂ ಈ ಸತ್ಯವನ್ನು ಎಷ್ಟು ಬೇಗ ಅರಿಯುತ್ತಾರೋ ಅಥವಾ ನಿಜ ಹೇಳುವುದಾದರೆ, ತಮ್ಮ ಜೀವನದಲ್ಲಿ ಈ ಸತ್ಯದ ಅಭಾವವನ್ನು ತಿಳಿದು ಏಕಮೇವ ಸತ್ಯವನ್ನು ಹಿಂಬಾಲಿಸುತ್ತಾರೋ ಅಷ್ಟು ಒಳ್ಳೆಯದು.

ಹಾಗೆಯೇ ಈ ದೃಷ್ಟಿಕೋನದಲ್ಲಿ ಕೆಲವು ಮಾರ್ಪಡುಗಳೂ ಕಂಡುಬಂದಿದ್ದು, ಅದೂ ಸಹ ವಿಶ್ವ ಮತ್ತು ಜೀವನದ ಬಗ್ಗೆ ಒಂದು ಅಪೂರ್ಣವಾದ ವಾಸ್ತವಿಕತೆಯನ್ನಷ್ಟೇ ನೀಡುತ್ತದೆ; ಏನೇ ಹೇಳಿದರೂ ಇದೂ ಸಹ ಕಟ್ಟಕಡೆಗೆ ಅಸ್ತಿತ್ವದಲ್ಲಿರುವ ವಿಶ್ವಕ್ಕೆ ಕನಿಷ್ಠ ಯೋಗ್ಯತೆಯನ್ನೇ ನೀಡುತ್ತದೆ. ಹೆಚ್ಚು ಕಡಿಮೆ ಯಾವಾಗಲೂ ಈ ಜೀವನಕ್ಕೆ ಅಸ್ಥಿರತೆ ಮತ್ತು ಅಸತ್ಯಗಳೆರಡೂ ಜೋತು ಬಿದ್ದಿರುತ್ತವೆ. ಯಾರಾದರೂ ಒಪ್ಪಿಕೊಳ್ಳಲೇಬೇಕಾದುದೆಂದರೆ ಸಂಪೂರ್ಣವಾಗಿ ಅಸತ್ಯವಲ್ಲದಿದ್ದರೂ ಕನಿಷ್ಟತಮವಾದ ಒಂದು ಚಟುವಟಿಕೆಯು ವ್ಯಕ್ತಿಯೊಬ್ಬನನ್ನು ತುಮುಲದ ಸ್ಥಿತಿಯಿಂದ ಹೊರತಂದು ಕಟ್ಟಕಡೆಗೆ ಸತ್ಯ ಮತ್ತು ಶಾಶ್ವತದೆಡೆಗೆ ಕೊಂಡೊಯ್ಯುತ್ತದೆ.

ಶ್ರೀ ಅರವಿಂದೋ ಅವರಿಗೆ ವಿಶ್ವವು ಒಂದು ಭ್ರಮೆಯಾಗಲಿ ಅಥವಾ ಆಧಾರರಹಿತ ಕ್ಷಣಿಕ ವಸ್ತುವಾಗಲಿ ಅಲ್ಲ. ಇಲ್ಲಿ ಎಲ್ಲವೂ ವಾಸ್ತವ; ನೀವು, ನಾನು, ನಮ್ಮ ಸುತ್ತಲೂ ನಾವು ನೋಡುವ ಪ್ರತಿಯೊಂದು ತುಣುಕೂ ಸಹ ವಾಸ್ತವದಷ್ಟೇ



ವಾಸ್ತವ. ಏಕೆಂದರೆ ಎಲ್ಲವೂ ಸಹ ಬ್ರಹ್ಮನಿಂದಲೆ ಸೃಷ್ಟಿಸಲ್ಪಟ್ಟಿದ್ದು. ಅದೊಂದೇ ಏಕಮೇವ ಸತ್ಯವಾಗಿದೆ.

## ೨

ಈ ಉಪದೇಶಾಮೃತವು ಆರಂಭವಾಗುವುದು ನಮ್ಮ ಹಿಂದಿನ ಋಷಿ ಮುನಿಗಳ ಅನುಭವ ಜ್ಞಾನವಾದ ವೇದಾಂತದಿಂದ, ಅದರಲ್ಲಿ ಬರುವ ಪರಿಪೂರ್ಣವಾದ, ಅನಂತವಾದ ಮತ್ತು ನಿಶ್ಚಯಿಸಲಾಗದ ಪರಮಶ್ರೇಷ್ಠ ಸತ್ಯದಿಂದ. ಅದುವೇ ಅನನ್ಯವಾದ, ಪರಿಪೂರ್ಣವಾದ ಮತ್ತು ಏಕಮೇವ ಸತ್ಯವಾದ ಬ್ರಹ್ಮ. ಸಕಲವೂ ಬ್ರಹ್ಮನಲ್ಲಿ ಅಡಕವಾಗಿರುತ್ತದೆ. ಬ್ರಹ್ಮನಿಂದ ಹೊರತಾದುದು ಯಾವುದೂ ಇಲ್ಲ. ಎಲ್ಲವೂ ಬ್ರಹ್ಮನಿಂದಲೇ ವ್ಯಕ್ತಗೊಳ್ಳುವಂತದ್ದಾಗಿರುತ್ತದೆ; ಎಲ್ಲವೂ ಬ್ರಹ್ಮನಲ್ಲಿಯೇ ಇರುತ್ತದೆ; ಆದುದರಿಂದಲೇ ಸಕಲವೂ ಬ್ರಹ್ಮನಷ್ಟೇ ಸತ್ಯ.

ವಾಸ್ತವವಾಗಿ ಹೇಳುವುದಾದರೆ ಕಲ್ಪನಾತೀತವಾದ, ಹೇಳಲು ಬಾರದಂತಹ, ವ್ಯಾಖ್ಯಾನಿಸಲಾಗದಂತಹ ಉತ್ಕೃಷ್ಟವಾದಂತಹದ್ದಾಗಿದೆ. ಅದೇ ಪರಮಶ್ರೇಷ್ಠ ಸತ್ಯ. ಆದರೆ ಅದು ಅಷ್ಟು ಏಕಾಂಗಿಯಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಎಲ್ಲ ಸಾರಸತ್ವವನ್ನು ಹಿಡಿದಿಟ್ಟುಕೊಂಡಿರುವಂತಹ ಈ ಸತ್ಯದ ಪರಮಶ್ರೇಷ್ಠವಾದ ಅಸ್ತಿತ್ವವು ತಾನೇ ತಾನಾಗಿ ವ್ಯಕ್ತವಾಗುವುದನ್ನು "ಸತ್" ಎನ್ನುತ್ತಾರೆ. ಕೇವಲ ಅಸ್ತಿತ್ವದಲ್ಲಿರುವುದಷ್ಟೆ ಅಲ್ಲದೆ, ತನ್ನ ಬಗ್ಗೆಯೇ ಪರಿಣಾಮಕಾರಿಯದ ಜ್ಞಾನವನ್ನು ಹೊಂದಿರುವ, ಕ್ರಿಯಾತ್ಮಕವಾದ ಅರಿವಿನಿಂದ ಕೂಡಿರುವ ಪ್ರಜ್ಞಾ ಬಲವನ್ನು "ಚಿತ್" ಎನ್ನುತ್ತಾರೆ. ಹಾಗೆಯೇ ಪ್ರಜ್ಞೆಯಿಂದೊಡಗೂಡಿದ ನೈಸರ್ಗಿಕ ಅಸ್ತಿತ್ವವು ಸಂಪೂರ್ಣ ಆನಂದದಿಂದಿರುವುದಕ್ಕೆ "ಆನಂದ" ಎನ್ನುತ್ತಾರೆ. ಅಸ್ತಿತ್ವ–ಜ್ಞಾನ–ಅತ್ಯಾನಂದಗಳು ಅತ್ಯುಚ್ಚ ಸ್ಥಾನದಲ್ಲಿದ್ದು, ಇಂದ್ರಿಯದಿಂದ ಗ್ರಹಿಸಲ್ಪಡುವ ಸತ್ಯವು ಸಮತೋಲನದಿಂದಿದ್ದು, ತಾನೇ ತಾನಾಗಿ ವ್ಯಕ್ತವಾಗುತ್ತದೆ.

ಹಾಗಾದರೆ ಬ್ರಹ್ಮ ವ್ಯಕ್ತವಾಗುವುದು ಅಥವಾ ಪ್ರಕಟಗೊಳ್ಳುವುದಾದರೂ ಏಕೆ? ವಿವರಿಸಲಾಗದಂತಹ ಸ್ಥಿರ ಸ್ಥಿತಿಯಿಂದ ಪರಿಪೂರ್ಣವಾಗಿ ತಿರುಗಿ ಚಲನೆಯತ್ತ ಮುಖಮಾಡಿ ತನ್ನಲ್ಲಿ ಇಲ್ಲದೇ ಇರುವಂತಹ ಯಾವುದನ್ನು ಅವನು ಅನ್ವೇಷಿಸುತ್ತಿದ್ದಾನೆ? ಬ್ರಹ್ಮನು ವ್ಯಕ್ತವಾಗುವುದು ಯಾವುದೇ ಬಯಕೆಯಿಂದಲ್ಲ. ಆದರೆ ಸ್ವಯಂ ದಿವ್ಯದರ್ಶನಕ್ಕಾಗಿ, ಅತ್ಯಾನಂದವೆಂಬ ಭಾವನೆಯನ್ನು ಸ್ವತಃ ಹರಡುವ ಸಲುವಾಗಿ. ಈ ಆನಂದವೇ ಅನಂತವಾದ ಚಲನೆ ಮತ್ತು ಬದಲಾವಣೆಯನ್ನು ಉಂಟುಮಾಡುತ್ತಾ ಸರಳವಾಗಿ ಹೊರಸೂಸುತ್ತದೆ. ಆನಂದವೇ ಬುನಾದಿ, ಆನಂದವೇ ಚಲನೆ ಮತ್ತು ಆನಂದವೇ ವ್ಯಕ್ತವಾಗುವ ಗುರಿ. ಎಲ್ಲಾ ಸೃಷ್ಟಿಯೂ ಬ್ರಹ್ಮನ ಅತ್ಯಾನಂದವೆಂಬ

ಪ್ರವಾಹದ ತರಂಗಗಳು. ಇದೇ ವೇದಸೂಕ್ತಿಗಳ ಸಂಪೂರ್ಣ ಅರ್ಥ, ಎಲ್ಲವೂ ಬ್ರಹ್ಮ– ಸರ್ವಂ ಖಲ್ವಿದಂ ಬ್ರಹ್ಮ.

ಆದುದರಿಂದಲೆ ಈ ವಿಶ್ವವು ಬ್ರಹ್ಮನೆಂಬ ಪರಮಸತ್ಯದ ವ್ಯಕ್ತರೂಪವಾಗಿದೆ. ಬ್ರಹ್ಮನ ವ್ಯಕ್ತ ರೂಪವೆಂದರೆ ದಿವ್ಯದರ್ಶನ, ಸ್ವಾಭಾವಿಕವಾದ ಎಲ್ಲವೂ ಬ್ರಹ್ಮನಲ್ಲಿ ಸಹಜವಾಗಿ ಅಂತರ್ಗತವಾಗಿರುವುದು– ಅಸ್ತಿತ್ವ, ಪ್ರಜ್ಞೆ, ಬಲ ಮತ್ತು ಅತ್ಯಾನಂದ ಇವೆಲ್ಲವೂ ಬ್ರಹ್ಮತ್ವಕ್ಕೆ ಸಂಬಂಧಪಟ್ಟ ಶಬ್ದಗಳೇ ಆಗಿವೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಪರಿಪೂರ್ಣವಾದ ಬ್ರಹ್ಮನು ಸ್ವ–ಅಸ್ತಿತ್ವ, ಸ್ವ–ಜ್ಞಾನ, ಸ್ವ–ಶಕ್ತಿ ಮತ್ತು ಸ್ವ–ಆನಂದಗಳೆಂಬ ಅಪರಿಮಿತ ಭಾವಗಳೊಂದಿಗೆ ಪೂರ್ಣ ಸಮೃದ್ಧನಾಗಿ ವ್ಯಕ್ತಗೊಳ್ಳುತ್ತಾನೆ.

ಸೃಷ್ಟಿ ಕ್ರಿಯೆಯ ಉದ್ದೇಶವೇ ಇದು ಎನ್ನುತ್ತಾರೆ ಶ್ರೀ ಅರವಿಂದರು; ಈ ವಿಶ್ವವಿರುವುದೇ ಅನಂತ ಅಸ್ತಿತ್ವದ ಪರಿಪೂರ್ಣ ದಿವ್ಯದರ್ಶನಕ್ಕಾಗಿ, ಸಂಪೂರ್ಣ ಪ್ರಜ್ಞೆ–ಬಲ ಮತ್ತು ಸೃಷ್ಟಿಕರ್ತನ ಭಗವಂತನ ಅಪರಿಮಿತ ಆನಂದಕ್ಕಾಗಿ. ಸೃಷ್ಟಿಯ ಪ್ರತಿಯೊಂದು ಜೀವಿಯೂ ಈ ಉದ್ದೇಶಕ್ಕಾಗಿಯೇ ಗೌಪ್ಯವಾಗಿ ನಿಯಂತ್ರಿಸಲ್ಪಡುತ್ತದೆ; ಆದರೆ ಮನುಷ್ಯನಿಗೆ ಮಾತ್ರ ಈ ವಿಷಯದ ಕುರಿತಾದ ತಿಳುವಳಿಕೆ ಇದೆ ಮತ್ತು ಸೃಷ್ಟಿಕರ್ತನ ಉದ್ದೇಶವನ್ನು ಈಡೇರಿಸಲು ಅವನು ಶ್ರಮ ವಹಿಸುತ್ತಾನೆ.

೩

ಸಚ್ಚಿದಾನಂದ ಅಸ್ತಿತ್ವವು ತರಾತುರಿಯಲ್ಲಿ ನೇರವಾಗಿ ಭೂಮಿಯಲ್ಲಿ ಉಂಟಾಗುವುದಿಲ್ಲ. ಅದು ವ್ಯಕ್ತವಾಗುವ ಪ್ರಕ್ರಿಯೆಯು ಸಾವಕಾಶವಾಗಿ ಸಂಭವಿಸುವಂತಹದ್ದಾಗಿದೆ. ಸೃಷ್ಟಿಕರ್ತ ಬ್ರಹ್ಮನು ಸ್ವಯಂ ತೆರೆದುಕೊಳ್ಳುವುದು ಹಲವು ಪದರಗಳಲ್ಲಿ; ಒಂದು ಕ್ರಮದಲ್ಲಿ ಹಂತಹಂತವಾಗಿ ಅವತರಣವಾಗುತ್ತಾ, ಪ್ರತಿ ಅನುಕ್ರಮವೂ ಹಿಂದಿನದಕ್ಕಿಂತ ಕಡಿಮೆ ಸೂಕ್ಷ್ಮವೂ ಹಾಗೂ ಹೆಚ್ಚು ಗಾಢವೂ, ಘನವೂ ಆಗುತ್ತಾ ಭೌತಿಕ ಅಸ್ತಿತ್ವದ ವಿಸ್ತಾರವನ್ನು ತಲುಪುತ್ತದೆ. ಇವುಗಳೇ ಏಳು ಸಮಕ್ಷೇತ್ರಗಳು, ವೇದದ ಸಪ್ತಪಾದಗಳು ಅಥವಾ ಏಳು ಸ್ಥಾನಗಳು, ಭಗವಂತನು ವ್ಯಕ್ತವಾಗುವ ಸಪ್ತಧಮನಿಗಳು. ಸತ್, ಚಿತ್, ಆನಂದ, ವಿಜ್ಞಾನಗಳ ಕ್ಷೇತ್ರಗಳು, ಸತ್ಯ–ಜ್ಞಾನಗಳ ಕ್ಷೇತ್ರವಾಗಿದ್ದು, ಪ್ರಕಾಶಮಾನವಾದ ಸೂರ್ಯನ ಹತ್ತು ನೂರು ಕುದುರೆಗಳು ಒಂದುಗೂಡಿದಂತಾಗುತ್ತದೆ; ಮನಸ್ಸು, ಜೀವನ, ಭೌತಿಕ ದ್ರವ್ಯ, ಭೌತಿಕ ಪ್ರಪಂಚಗಳ ಕ್ಷೇತ್ರಗಳನ್ನು ವಿಶ್ವ ಪುರುಷನ ಪಾದ ಅಥವಾ ಪಾದಾಭ್ಯಾಂ ಪೃಥ್ವಿ ಎಂದು ಸಮಂಜಸವಾಗಿಯೆ ವಿವರಿಸಲಾಗಿದೆ.

ಗಮನಿಸಬೇಕಾದ ಅಂಶವೆಂದರೆ, ಈ ಅವರೋಹಣವಾಗುವ ಜ್ಞಾನ ಅಂದರೆ ಬ್ರಹ್ಮ, ಪ್ರತಿಯೊಂದು ಹಂತದಲ್ಲೂ ತಾನೇತಾನಾಗಿ ವಿಸ್ತೃತಗೊಳ್ಳುತ್ತಾ ಬೇರೆಯದೇ



ಆದ ಸೂತ್ರ ರೂಪದಲ್ಲಿ ವ್ಯಕ್ತವಾಗುತ್ತ, ಪ್ರತಿ ಹಂತದಲ್ಲೂ ವ್ಯವಸ್ಥಿತವಾಗಿ ಪ್ರತ್ಯೇಕ ಮೂಲತತ್ವವನ್ನು ಸಂಸ್ಥಾಪಿಸುತ್ತಾ ತಾನೇ ತಾನಾಗಿ ವ್ಯಕ್ತವಾಗುತ್ತಾನೆ. ಹಾಗಾಗಿಯೇ ಪ್ರತಿ ಕ್ರಮದಲ್ಲೂ ಸರ್ವಸ್ವತಂತ್ರವಾಗಿ ಚಲನಶಕ್ತಿಯಿಂದ ಕಾರ್ಯ ನಿರ್ವಹಿಸುತ್ತಾ ದೈವಿಕ ಉದ್ದೇಶಕ್ಕಾಗಿ ಜ್ಞಾನದ ಮೂಲತತ್ವವು ಕ್ರಿಯಾತ್ಮಕವಾಗಿರುತ್ತದೆ. ಪರಮ ಶ್ರೇಷ್ಠ ಅಸ್ತಿತ್ವ, ಜ್ಞಾನಬಲ ಮತ್ತು ಆನಂದ, ಸತ್ಯ–ಜ್ಞಾನದ ಕ್ಷೇತ್ರ ಮತ್ತು ಮನಸ್ಸಿನ ಕ್ಷೇತ್ರ (ಇವೆರಡರ ನಡುವಿನ ಮಧ್ಯಂತರ ಕ್ಷೇತ್ರ) ಹಾಗೂ ಜೀವನ ಕ್ಷೇತ್ರಗಳು ಹೀಗೆ ಉಂಟಾಗಿ ದೈವತ್ವದ ಜಾನ, ಶಕ್ತಿ ಮತ್ತು ಅನಂತತೆಯು ಹಲವು ಸ್ತರಗಳಲ್ಲಿ ವ್ಯಕ್ತವಾಗಲು ಕಾರ್ಯಕ್ಷೇತ್ರ ಮತ್ತು ಬಲವನ್ನು ಒದಗಿಸುತ್ತದೆ.

ಹಾಗೆಯೇ ಭೂಮಿಯ ಮೇಲೆಯೂ ಸಹ ಭೌತಿಕ ದ್ರವ್ಯದ ಕ್ಷೇತ್ರದಲ್ಲಿ ಸೃಜನಾತ್ಮಕ ಸತ್ಯವು ತಾನೇತಾನಾಗಿ ವ್ಯಕ್ತವಾಗಲು ಪ್ರಯತ್ನಿಸುತ್ತದೆ. ನಿಜ, ಸಂಘಟನೆಯ ಪ್ರತಿ ವಿಷಯ, ಪ್ರತಿ ಪರಿಸ್ಥಿತಿಯು ವಾಸ್ತವಿಕತೆಯ ಸ್ವಪ್ರಭುತ್ವದ ವಿಶೇಷ ಗುಣಗಳಿಗೆ ವಿರುದ್ಧವಾಗಿಯೇ ಇರುತ್ತದೆ. ಸಂಪೂರ್ಣ ಸ್ವನಿರಾಕರಣೆಯಿಂದಾಗಿ ವಾಸ್ತವಿಕತೆಯು ಜಟಿಲತೆಯ ತುಟ್ಟತುದಿಯನ್ನು ತಲುಪುತ್ತದೆ. ಅತಿ ಕನಿಷ್ಠ ಘಟಕವು ಅತ್ಯಂತ ಸೂಕ್ಷ್ಮವಾದ ಮತ್ತು ಮಿತಿಯುಳ್ಳದ್ದಾಗಿದ್ದು, ಯಥಾರ್ಥವಾದ ವಿವೇಚನಾಶಕ್ತಿ, ಅದರ ಸ್ವಭಾವ ಹಾಗೂ ಜಡತ್ವಗಳು ಸೃಷ್ಟಿಕ್ರಿಯೆಯ ಈ ಕ್ರಮದ ಆರಂಭವಾಗಿರುತ್ತದೆ. ದೈವತ್ವವು ತನ್ನ ಅಸ್ತಿತ್ವದ ಸಂಪೂರ್ಣ ವೈಭವವನ್ನು ಪ್ರಕಾಶಪಡಿಸುವಾಗಿನ ಪರಿಸ್ಥಿತಿಯು ಅದರ ಅತಿ ಮಹತ್ವ ಗುಣದ ತದ್ವಿರುದ್ಧವಾದುದೇ ಆಗಿರುತ್ತದೆ.

ಈ ಉದ್ದೇಶಕ್ಕಾಗಿ ನಡೆಯುವ ಕಾರ್ಯವಿಧಾನವನ್ನು ಶ್ರೀ ಅರವಿಂದರವರು ಕರೆಯುವುದು "ಆಧ್ಯಾತ್ಮಿಕ ವಿಕಸನ" ಎಂದು– ವರ್ಧಿಸುವ ವಿಕಾಸಕ್ರಿಯೆ ಮತ್ತು ಚೈತನ್ಯ ಅಥವಾ ಪ್ರಜ್ಞೆಯ ಬೆಳವಣಿಗೆಯು ಪ್ರತಿಯೊಂದು ವಿಧದ ಸೃಷ್ಟಿ ಕ್ರಿಯೆಯಲ್ಲೂ ಅಡಗಿರುತ್ತದೆ. ಈ ಪ್ರಜ್ಞೆಯ ಆವರಣವು ಅತ್ಯುನ್ನತ ಸ್ಥಿತಿಗೇರಿದ್ದು ತಾನೇ ತಾನಾಗಿ ಭೌತದ್ರವ್ಯದ ಗಟ್ಟಿಯಾದ ಗುಂಪುಗಳಲ್ಲಿ ಒಟ್ಟುಗೂಡಿ, ಹುದುಗಿಕೊಂಡಿರುವ ಸ್ಥಿತಿಯಲ್ಲಿದ್ದು, ಅದು ಈಗ ಸ್ವಂತವಾಗಿ ಹೊರಹೊಮ್ಮುವ, ಆರೋಹಣ ಕ್ರಮದಲ್ಲಿ ತನ್ನನ್ನು ತಾನು ಸ್ಥಾಪಿಸಿಕೊಳ್ಳಲು, ಪ್ರತಿ ಹಂತದಲ್ಲೂ ಸಶರೀರವಾಗಲು ಹಾಗೂ ವ್ಯಕ್ತವಾಗಲು ಸೂಕ್ತವಾದಂತಹ ವಾಹಕವನ್ನು ಅನ್ವೇಷಿಸುತ್ತಿರುತ್ತದೆ. ಈ ಪ್ರಕಾರ ನಿರ್ಜೀವ ವಸ್ತುಗಳಿಂದ ಸಾವಕಾಶವಾಗಿ ಜೀವಜಂತುಗಳ ಪ್ರಜ್ಞೆಯು ವಿಕಸಿತವಾಗುವ ಪ್ರಾರಂಭಿಕ ಕಂಪನಗಳು ಗೋಚರವಾಗತೊಡಗುತ್ತವೆ; ಇದನ್ನನುಸರಿಸಿ ಕಡಿಮೆ ಪ್ರಾಚೀನವಾದ ಹಾಗೂ ಪೂರ್ಣವಾಗಿ ವಿಕಸಿತವಾದ, ಪ್ರಜ್ಞೆಯು ಹೆಚ್ಚು ಸ್ಪಷ್ಟವಾದ ಜೀವ ಪ್ರಭೇದಗಳು ಕಾಣಿಸಿಕೊಂಡವು. ಪ್ರಜ್ಞೆಯುಳ್ಳ ಜೀವವೈವಿಧ್ಯಗಳು ಹೊರಬರಲು, ಜೀವಕ್ಷೇತ್ರದಲ್ಲಿ ಮೊದಲೇ ಇದ್ದಂತಹ ನೈಸರ್ಗಿಕ ಒತ್ತಡವು ಪ್ರಮುಖವಾದ ಪಾತ್ರವನ್ನು ವಹಿಸಿತೆಂಬುದನ್ನು ನಾವು ಗಮನಿಸಬೇಕು. ಭೂಮಿಯ ಮೇಲೆ ಜೀವ ಮೂಲತತ್ವ

ಸಂಘಟನೆಯ ಬೆಳವಣಿಗೆಯಿಂದ ಇನ್ನೂ ಹೆಚ್ಚಿನ ಪ್ರಜ್ಞೆಯ ಮೂಲತತ್ವ ಅಂದರೆ ಜಾಗೃತ ಮತ್ತು ಸ್ವ–ಅರಿವಿನ ಶಕ್ತಿಯಿರುವ ಪ್ರಜ್ಞೆ ಅಥವಾ ಮನಸ್ಸು ನಿಧಾನವಾಗಿ ಕಾಣಿಸಿಕೊಂಡಿತು. ಜೀವನದಲ್ಲಿರುವಂತೆಯೇ ಇಲ್ಲಿಯೂ ಸಹ ಪ್ರಕೃತಿಯ ಸ್ಥಿತ್ಯಂತರಕ್ಕೆ ಮೊದಲೇ ಇದ್ದಂತಹ ಮನೋಕ್ಷೇತ್ರದಿಂದ ಸಹಾಯವಾಯಿತು.

ಮಾನಸಿಕ ಮೂಲತತ್ವದ ಆಗಮನದಿಂದ ಆಧ್ಯಾತ್ಮಿಕ ವಿಕಸನವೆಂಬ ಕ್ರಿಯೆಯು ಒಂದು ಸ್ಥಿತ್ಯಂತರಕ್ಕೆ ಬರುತ್ತದೆ. ಅಲ್ಲಿಯವರೆಗೆ ವಿಕಸನ ಕ್ರಿಯೆಯು ಹೆಚ್ಚು ಕಡಿಮೆ ಯಾಂತ್ರಿಕವಾಗಿ, ಯಾವುದೇ ಜ್ಞಾನ ಅಥವಾ ಪ್ರತಿಕ್ರಿಯೆ ವ್ಯಕ್ತಪಡಿಸುವಂತಹ ಸಹಕಾರ, ವಿಕಸನವಾಗುತ್ತಿರುವ ಘಟಕಗಳಾದ ಸಸ್ಯಗಳಿಂದಾಗಲಿ ಅಥವಾ ಪ್ರಾಣಿಗಳಿಂದಾಗಲಿ ಆಗಿರುವುದಿಲ್ಲ. ಈಗ ಪ್ರಕೃತಿಯು ಒಂದು ಜೊತೆಗಾರನನ್ನು ಕಂಡುಕೊಳ್ಳುತ್ತದೆ. ಸ್ವ–ಜ್ಞಾನವೆಂಬ ಪರಿಣಾಮಕಾರಿಯಾದ ಧೀಃಶಕ್ತಿಯ ಬೆಳವಣಿಗೆಯ ಆರಂಭವು ಒಂದು ಹೊಸ ವಿಷಯವನ್ನು ಕಾರ್ಯರೂಪಕ್ಕೆ ತರುತ್ತದೆ. ಮನುಷ್ಯನಲ್ಲಿ ವಿಕಸನ ಕ್ರಿಯೆಯು ಸ್ವಯಂ ತಿಳುವಳಿಕೆಯುಳ್ಳದ್ದಾಗಿದ್ದು, ಅದರ ಶಕ್ತಿಯ ಅರಿವು ಸಹ ಇರುತ್ತದಲ್ಲದೆ, ಅದರ ಸ್ವಬೆಳವಣಿಗೆಗೆ ಮತ್ತು ಸ್ವವಿಸ್ತರಣೆಗೆ ಬೇಕಾದ ಅಗತ್ಯಗಳು ಮತ್ತು ಸಾಧ್ಯತೆಗಳ ಅರಿವೂ ಸಹ ಇರುತ್ತದೆ. ಸ್ಪಷ್ಟವಾಗಿ ಹೇಳುವುದಾದರೆ ಇದುವರೆಗೆ ಪೂರ್ಣವಾಗಿ ವಿಕಸಿಸಿರುವ ಮತ್ತು ಸ್ಥಾಪಿತವಾಗಿರುವ ಜ್ಞಾನ ಬಲವು ಸೀಮಿತವಾಗಿರುವುದು ವ್ಯಕ್ತವಾಗುತ್ತದೆ; ವಿಕಸಿತವಾಗಿರುವ ಪರಮಶ್ರೇಷ್ಠ ಜ್ಞಾನವು ಪರಿಪೂರ್ಣವಾಗಿ ವ್ಯಕ್ತವಾಗಲು ಅಂತಿಮ ಮಾಧ್ಯಮವಾಗಿರಲಾರದು.

ಮನಸ್ಸು ಪರಿಪೂರ್ಣವಾಗಿ ವಿಕಸನವಾಗಿರುವುದಿಲ್ಲ. ಕಠಿಣಕರ ಹಾಗೂ ಉದ್ದೇಶಿತವಾದ ಅದರ ಕಾರ್ಯ ನಿರ್ವಹಿಸುವ ವಿಧಾನವು ಸ್ಪಷ್ಟವಾಗಿ ನ್ಯೂನತೆ ಮತ್ತು ಲೋಪದೋಷಗಳ ಗುಣಲಕ್ಷಣಗಳು ಅದರ ಆಳ್ವಿಕೆಯಲ್ಲಿ ಕಂಡು ಬರುವುದರಿಂದ ಸಚ್ಚಿದಾನಂದವು ಭೂಮಿಯ ಮೇಲೆ ನೇರವಾಗಿ ವ್ಯಕ್ತವಾಗಲು ಕಲುಷಿತವಾಗದ ಪ್ರಭಾವವು ಉಪಯೋಗವಾಗುವುದಿಲ್ಲ. ಈ ಕೆಲಸಕ್ಕಾಗಿಯೆ ಬೇರೊಂದು ಶಕ್ತಿ ಇದೆಯೆಂದು ಶ್ರೀ ಅರವಿಂದೋ ಅವರು ಘೋಷಿಸುತ್ತಾರೆ. ಅದುವೇ ಸಂಪೂರ್ಣವಾಗಿ ವಿಕಸಿತವಾಗಿರುವ ಮಾನವನ ಮನಸ್ಸಿಗಿಂತಲೂ ಉನ್ನತವಾದ ಮೂಲತತ್ವ– ಉನ್ನತ ಮನಸ್ಸು ಎಂದು ಕರೆಯಬಹುದಾದ, ಈ ಸೃಷ್ಟಿ ಕ್ರಿಯೆಯ ಆರಂಭದಲ್ಲಿಯೇ ಇದ್ದಂತಹ ಕ್ಷೇತ್ರವೆನ್ನಬಹುದಾದ ಇದು ಮೊಟ್ಟಮೊದಲಿನ ಸತ್ಯ–ಜ್ಞಾನವಾಗಿದ್ದು ಸತ್ಯದ ಪ್ರತಿಯೊಂದು ವಿಧದ ನೇರ ಅಧೀನಕ್ಕೊಳಪಟ್ಟಿದ್ದು, ಪ್ರಯೋಜನಕಾರಿಯಾಗುವ ಶಕ್ತಿಯನ್ನು ಹೊಂದಿದ್ದು, ಉಪನಿಷತ್ ಎಂಬ ವಿಜ್ಞಾನವಾಗಿದೆ. ಈ ಸ್ವಜ್ಞಾನ ಮತ್ತು ಸ್ವಪರಿಣಾಮಕಾರಿಯಾದ ಶಕ್ತಿಗಳ ಮೂಲತತ್ವಗಳನ್ನು ಗಳಿಸಲು, ಒಳಗಿನಿಂದಲೇ ಆಹ್ವಾನಿಸುವ ಮತ್ತು ಸ್ಥಾಪಿತವಾಗಿರುವ ಭೂಮಿ–ಪ್ರಕೃತಿಯ ಮಹತ್ವಾಕಾಂಕ್ಷೆಯ ಜ್ಞಾನ ಇವುಗಳ



ನೆರವೇರಿಕೆಗಾಗಿ ವರ್ತಮಾನ ಪ್ರಯತ್ನವೇ ಮಾನವನ ವಿಕಸನವು ಪ್ರಜ್ಞಾಪೂರ್ವಕವಾಗಿ ಮತ್ತು ಅರೆ ಪ್ರಜ್ಞಾವಸ್ಥೆಯಲ್ಲಿ ಒಂದು ಬಿಂದುವಿನಲ್ಲಿ ಕೂಡುವುದಾಗಿದೆ.

ಯಾವಾಗ ಈ ಅತ್ಯುನ್ನತ ಶಕ್ತಿ, ರಚನಾತ್ಮಕ ಸತ್ಯದ ಅತಿಮಾನುಷ ಜ್ಞಾನವನ್ನು ಗಳಿಸಿ, ಸಿದ್ಧಿಸಿಕೊಳ್ಳುವುದೋ, ವಿಕಸನ ಕ್ರಿಯೆಯಲ್ಲಿ ಅತ್ಯುನ್ನತ ಸ್ಥಾನವನ್ನು ಗಳಿಸಿ, ಅದನ್ನು ಆಳುವ ಮೂಲತತ್ವಗಳು ಕಾರ್ಯನಿರ್ವಹಿಸುವಾಗ, ಈ ವಿಶ್ವದ ಗುಣಲಕ್ಷಣವಾದ ಅರ್ಧ ಬೆಳಕು ಮತ್ತು ಅರ್ಧ ಶಕ್ತಿಗಳು ಬದಲಾಗಲು ತೊಡಗಿ ಭಗವಂತನ ಪರಿಪೂರ್ಣವಾದ ದಿವ್ಯದರ್ಶನವಾಗಲು ಪ್ರಾರಂಭವಾಗುವುದು. ಈ ಸಾಧ್ಯತೆಯನ್ನು ಯಥಾರ್ಥಗೊಳಿಸುವುದೇ ಮಾನವನ ಪ್ರಯತ್ನವಾಘಿದೆ. ಪ್ರಕೃತಿಯ ಅಗ್ರಸ್ಥಾನದಲ್ಲಿರುವ, ಪರಿಪೂರ್ಣವಾಗಿ ವಿಕಸಿತವಾದ ಜೀವಿಯಾಗಿ ಪ್ರಕೃತಿ ಮಾತೆಯ ಕಷ್ಟದ ಕ್ಷಣಗಳಲ್ಲಿ ಬುದ್ಧಿಪೂರ್ವಕ ನಿರ್ದೇಶನ ನೀಡುತ್ತಾ ತನ್ನ ಪ್ರಯೋಜನ ಕಾರಿಯಾದ ಸಹಯೋಗದೊಡನೆ ನಿಯಮಿತ ಗುರಿಯನ್ನು ತಲುಪಲು ಸೂಕ್ಷ್ಮವಾಗಿ ಕಾರ್ಯ ನಿರ್ವಹಿಸುವನು.

ಇದೇ ಶ್ರೀ ಅರವಿಂದೋರವರ ಯೋಗದ ಗುರಿ ಮತ್ತು ತಾತ್ಪರ್ಯ.

* * * *

# ೨. ಯೋಗ

ಮಾನವನಿಗೆ ಸಾಮಾನ್ಯವಾಗಿ ಅವನ ಬಗ್ಗೆಯೇ ಅವನಿಗೆ ತಿಳುವಳಿಕೆ ಇರುವುದು ಬಹಳ ಕಡಿಮೆ. ಯೋಚಿಸುವ ಮತ್ತು ಕಾರ್ಯ ನಿರ್ವಹಿಸುವ ಮನಸ್ಸು, ಕಾರ್ಯಪ್ರವೃತ್ತನಾಗುವಂತೆ ಮಾಡುವ ಮತ್ತು ಆಧಾರವಾಗಿರುವ ಜೀವಚೈತನ್ಯ ಹಾಗೂ ಮನಸ್ಸು ಮತ್ತು ಜೀವ ಇವೆರಡನ್ನೂ ಒಳಗೊಂಡ ಭೌತಿಕ ಶರೀರ, ಇವುಗಳಷ್ಟೇ ಅವನಿಗೆ ತಿಳಿದಿರುವುದು. ಆದರೆ ಇದೆಲ್ಲಾ ಅವನ ಹೊರ ಅಸ್ತಿತ್ವ; ಒಂದು ಸಣ್ಣ ಭಾಗ. ಅವನಿಗೆ ಇದಕ್ಕಿಂತ ದೊಡ್ಡದಾದ ಆಂತರಿಕ ಅಸ್ತಿತ್ವವೊಂದಿದ್ದು, ವಾಸ್ತವವಾಗಿ ಹೇಳುವುದಾದರೆ ಬಾಹ್ಯ ಅಸ್ತಿತ್ವವು ಅದರ ಮುಂದುವರಿದ ಭಾಗವಾಗಿದೆ.

ಜ್ಞಾನದ ಸಾಧನ ಮತ್ತು ಕಾರ್ಯವಿಧಾನಗಳು ಪರಿಮಿತವಾಗಿರುವ ಸಾಮಾನ್ಯ ಮನಸ್ಸಿನ ಹಿಂದೆ ಹೆಚ್ಚಿನ ಸಾಮರ್ಥ್ಯ ಮತ್ತು ವಿಪುಲ ವ್ಯಾಪ್ತಿಯುಳ್ಳ ಆಂತರಿಕ ಮನಸ್ಸೊಂದಿದೆ. ಪ್ರತಿಬಂಧಿಸಲ್ಪಟ್ಟು ತನ್ನನ್ನೊಳಗೊಂಡಂತೆ ನಿಗ್ರಹಿಸಲ್ಪಟ್ಟಿರುವ ಜೀವದ ಹಿಂದೆ ಹೆಚ್ಚು ಸ್ವಾತಂತ್ರ್ಯವಾದ ಮತ್ತು ಕ್ರಿಯಾತ್ಮಕವಾದ ಆಂತರಿಕ ಜೀವವೊಂದಿದೆ. ಹಾಗೆಯೇ ಸ್ಪಷ್ಟವಾಗಿ ಸುತ್ತುವರಿಯಲ್ಪಟ್ಟಿರುವ ಪ್ರಾಕೃತಿಕ ರಚನೆಗೆ ಅನುಗುಣವಾಗಿ ವಿಶಾಲ ವ್ಯಾಪ್ತಿಯುಳ್ಳ ಸೂಕ್ಷ್ಮ ಭೌತಿಕ ಶರೀರವೊಂದಿದೆ. ಇವು ಮೂರೂ, ಒಳಗಿನ ಮನಸ್ಸು, ಅತಿ ಮಹತ್ವದ ಒಳಗಿನ ಚೈತನ್ಯ ಹಾಗೂ ಒಳಗಿನ ಪ್ರಕೃತಿ– ಉಪನಿಷತ್ತಿನ ಮನೋಮಯ ಪುರುಷ, ಪ್ರಾಣಮಯ ಪುರುಷ ಮತ್ತು ಅನ್ನಮಯ ಪುರುಷ– ಒಟ್ಟಾಗಿ ಮಾನವನ ಆಂತರಿಕ ಅಸ್ತಿತ್ವವನ್ನು ಉಂಟುಮಾಡುತ್ತದೆ. ಇವುಗಳಿಗೆ ಜೀವ ವಿಕಾಸದ ಪ್ರಕ್ರಿಯೆಯಲ್ಲಿ ಆಧಾರವಾಗಿರುವ ಚೈತನ್ಯವೇ ಅಂತರಾತ್ಮ. ಇದು ದೈವಿಕ ಜ್ಯೋತಿಯ ಬೆಳಕಿನ ಕಿಡಿ. ಮಾನವನ ದೈವಿಕ ಅಸ್ತಿತ್ವದ ಅತಿ ಒಳಗಿನ ಆವರಣವಾದ ಅಂತರಾತ್ಮದ ಸುತ್ತಲೇ ಅವನ ಉಳಿದ ಅಸ್ತಿತ್ವಗಳು ಕೇಂದ್ರೀಕೃತವಾಗಿದ್ದು, ಅವನ ಯಾತ್ರೆಯಲ್ಲಿ ಅತಿ ಮಹತ್ವದ ಪಾತ್ರ ವಹಿಸುತ್ತದೆ. ಶ್ರೀ ಅರವಿಂದೋರವರು ಇದನ್ನು ಆಧ್ಯಾತ್ಮಿಕ ಪುರುಷ ಅಥವಾ ಚೈತ್ಯಪುರುಷ (ಶುದ್ಧ ಜ್ಞಾನ ಸ್ವರೂಪ) ಎಂದು ಕರೆದಿರುವುದು ಉಚಿತವಾಗಿದೆ. ಹೃದಯದ ಒಳಗೂಡಿನಲ್ಲಿ ಸ್ಥಿತವಾಗಿರುವ ಇದನ್ನು 'ಹೃದಯೇ ಗುಹ್ಯಮ್' ಎನ್ನುವರು– ದೈಹಿಕ ಹೃದಯವಲ್ಲ, ಹೃದಯ ಕೇಂದ್ರದ ಹಿಂಭಾಗದಲ್ಲಿ ಸ್ಥಿತವಾಗಿರುತ್ತದೆ.



ಬಾಹ್ಯರೂಪದ ಅಸ್ತಿತ್ವಕ್ಕೆ ಹೋಲಿಸಿದರೆ, ಈ ಒಳಗಿನ ಅಸ್ತಿತ್ವದ ಶಕ್ತಿ ಮತ್ತು ಸಾಮರ್ಥ್ಯಗಳು ಅಪರಿಮಿತವಾಗಿಯೂ ಹಾಗೂ ವಿಸ್ತೃತವಾಗಿಯೂ ಇರುತ್ತದೆ. ಇದನ್ನು ಹೊರತಂದು ಪರಿಣಾಮಕಾರಿಯಾಗಿ ಮುಂಚೂಣಿಗೆ ಬರುವಂತೆ ಮಾಡುವುದರಿಂದ ಮಾನವನು ಹೆಚ್ಚು ಪ್ರಯೋಜನಕಾರಿ ಹೌದೋ ಅಲ್ಲವೊ ಎಂಬುದು ತಿಳಿಯುತ್ತದೆ. ಜ್ಞಾನ, ಶಕ್ತಿ, ಸೌಂದರ್ಯ ಮತ್ತು ಆನಂದ ಇವುಗಳ ನಿಜವಾದ ಚಲನೆಯು ಇಲ್ಲಿಂದಲೇ ಆರಂಭವಾಗುವುದು; ಆದರೆ ಹೊರ ಅಸ್ತಿತ್ವವು ಪರಿಮಿತವಾಗಿದ್ದಲ್ಲಿ ಕುಗ್ಗಿಯೂ, ತೆಳ್ಳಗಾಗಿಯೂ ಭಾವದಲ್ಲಿ ವಿರೂಪಗೊಂಡೂ ಇರುತ್ತದೆ. ಈ ಅಸ್ತಿತ್ವದ ಒಳಗಿನ ಶ್ರೇಣಿಯನ್ನು ತೆರೆದು ಅದರ ಶಕ್ತಿ ಸಾಮರ್ಥ್ಯಗಳು ಹೆಚ್ಚು ವಿಶದವಾಗುವಂತೆ ಮಾಡಿ, ಮಾನವನು ಹೆಚ್ಚು ಪರಿಪೂರ್ಣನಾಗುವಂತೆ ಮಾಡಲು ಯೋಗದ ಕೆಲವು ನಿರ್ದಿಷ್ಟ ಮನೋವೈಜ್ಞಾನಿಕ ಅಭ್ಯಾಸಗಳಿಂದ ಸಾಧ್ಯ ಎಂದು ಶ್ರೀ ಅರವಿಂದೋರವರು ತಮ್ಮ ಬೋಧನೆಯಲ್ಲಿ ತಿಳಿಸಿದ್ದಾರೆ.

## ೨

ಅಸ್ತಿತ್ವದ ಬಾಹ್ಯಾಡಂಬರಕ್ಕೆ ಮನಸೋತ ಮಾನವ, ತನ್ನನ್ನೇ ತಾನು ಅರಿತುಕೊಂಡಿರುವುದಿಲ್ಲ. ಹೀಗೆ ಅರಿತುಕೊಳ್ಳಲು ಸ್ವಬೋಧವುಳ್ಳವರಾಗಬೇಕು. ಕೇವಲ ಹೊರಗಷ್ಟೇ ನೋಡಿಕೊಳ್ಳುವುದನ್ನು ನಿಲ್ಲಿಸಿ ಆಂತರಿಕವಾಗಿ ದೃಷ್ಟಿಹರಿಸಲು ಪ್ರಾರಂಭಿಸಬೇಕು. ಸಮೀಪ ಮತ್ತು ದೂರ ಹೀಗೆ ಎಲ್ಲಾ ಕಡೆ ಹರಡಿಹೋಗಿರುವ ತನ್ನ ಪ್ರಜ್ಞೆಯೆಂಬ ನೂಲುಗಳನ್ನು ಒಟ್ಟುಗೂಡಿಸಿ, ಎಲ್ಲವನ್ನು ಹತ್ತಿರಕ್ಕೆ ಎಳೆದು ತನ್ನೊಳಗೆ ಒಂದುಗೂಡಿಸಿಕೊಳ್ಳಬೇಕು. ಕೇಂದ್ರೀಕರಣ ಕ್ರಿಯೆಗೆ ಹೃದಯ ಭಾಗವು ಅತ್ಯುತ್ತಮ ಕೇಂದ್ರವಾಗಿದೆ. ಹೊರಹೋಗುವ ಶಕ್ತಿಗಳು ತಮ್ಮ ಸಾಂಪ್ರದಾಯಿಕ ಏಕಾಗ್ರತೆ ಮತ್ತು ಪ್ರಜ್ಞೆಯಿಂದ ಹಿಂದೆ ಸರಿದು ಅಂತರ್ಮುಖಿಯಾಗಿ ಹರಿದು ನಿಜವಾದ ಮೂಲಸ್ಥಾನದತ್ತ– ಹೃದಯದ ಗವಿಯಲ್ಲಿರುವ ಆತ್ಮ ಅಥವಾ ಆಧ್ಯಾತ್ಮಿಕ ಪುರುಷನತ್ತ– ಹರಿಯುತ್ತದೆ. ಇವನ ಆಧಾರದಿಂದ ಅವ್ಯಕ್ತ ಅಥವಾ ಸುವ್ಯಕ್ತವಾಗಿರುವ ಮಾನವನ ತ್ರಿವಿಧ ವ್ಯಕ್ತರೂಪಗಳು ತಮ್ಮ ಅಸ್ತಿತ್ವಕ್ಕಾಗಿ ಅವಲಂಬಿತವಾಗಿರುತ್ತವೆ. ಮನಸ್ಸಿನ ಪಟ್ಟು ಬಿಡದ ಪ್ರಯತ್ನ ಹಾಗೂ ದಿವ್ಯದರ್ಶನದ ಹೆಬ್ಬಯಕೆಯಿಂದ ಮಾನವನಿಗೆ ದಿವ್ಯ ಅನುಭೂತಿಯ ನಡುವೆ ತನ್ನಷ್ಟಕ್ಕೆ ತಾನು ಬರಲು ಸಾಧ್ಯವಾಗುತ್ತದೆ ಹಾಗೂ ಸತತ ತೆರೆದುಕೊಂಡು ಮನಃಪೂರ್ವಕ ಶರಣಾಗತನಾಗಿ, ತನ್ನದೆಲ್ಲವನ್ನೂ ಅದರ ಪ್ರಭಾವಕ್ಕೆ ಮತ್ತು ಹಿಡಿತಕ್ಕೆ ಬಿಟ್ಟು, ತನ್ನ ಜೀವನ ಹಾಗೂ ಕಾರ್ಯಪ್ರವೃತ್ತಿಯನ್ನು ರೂಪಿಸಲು ಹಾಗೂ ತಿದ್ದಿ ಒಳಗಿನ ಚೈತನ್ಯದಂತೆ ಆಕಾರ ಕೊಡಲು ಸಾಧ್ಯವಾಗುತ್ತದೆ. ವೈಯಕ್ತಿಕ ವಿಕಸನದಲ್ಲಿ ಆಧ್ಯಾತ್ಮಿಕ ಪುರುಷನು ನಿಜವಾಗಿಯೂ ದೈವತ್ವದ ಪ್ರತಿನಿಧಿಯಾಗಿದ್ದು, ಪೂರ್ಣವಾಗಿ, ಸಿದ್ಧಿಸಿಕೊಂಡಾಗ ಅದು ಅವನಿಗೆ ದೈವತ್ವದೊಂದಿಗೆ

ಗುರುತಿಸಿಕೊಳ್ಳಲು ಅಗತ್ಯವಾದ ಸ್ವಂತಿಕೆಯನ್ನು ಪ್ರಕಟಿಸುತ್ತದೆ. ಮಾನವನಿಗೆ ಆಂತರಿಕವಾಗಿ ತನ್ನೊಳಗಿರುವ ಕೇಂದ್ರವನ್ನು ತಲುಪಲು, ಆಧ್ಯಾತ್ಮಿಕ ತಳಹದಿ ಮತ್ತು ಶಿಸ್ತುಗಳ ನೆರವಿನಿಂದ ತನ್ನ ಬುನಾದಿಯನ್ನು ಕಂಡುಹಿಡಿಯಲು ಹಾಗೂ ಭದ್ರಗೊಳಿಸಿಕೊಳ್ಳಲು, ದೈವಿಕ ವ್ಯಕ್ತಿಯ ವರ್ಗ ಮಾಡಲಾಗದ ಶಕ್ತಿಗಳಾದ ನಿರ್ಮಲತ್ವ, ಸೌಂದರ್ಯ, ಸಾಮರಸ್ಯ ಮತ್ತು ಆನಂದಗಳನ್ನು ಸ್ವಯಂ ಪ್ರೇರಿತವಾಗಿ ವ್ಯಕ್ತ ಮಾಡುವ ಸ್ವತಂತ್ರವಾದ ಸಾಧನವಾಗಿ ಶ್ರೀ ಅರವಿಂದರ ಯೋಗವು ಮೊದಲ ನಿರ್ಣಾಯಕ ಹೆಜ್ಜೆಯಾಗಿದೆ– ಇದುವೇ ಆಂತರಿಕ ದೈವತ್ವದ ಅರಿವು.

ಆಂತರಿಕ ದೈವತ್ವದೊಡನೆ ಗುರುತಿಸಿಕೊಂಡಾಗಿದೆ. ಆದರೆ ಅದಷ್ಟೇ ಸಾಲದು. ಬಾಹ್ಯ ದೈವತ್ವದೊಡನೆಯೂ ಗುರುತಿಸಿಕೊಳ್ಳಲು ಸಹ ಸಾಧ್ಯವಾಗಬೇಕು. ವ್ಯಕ್ತಿಗೆ ವ್ಯಕ್ತವಾಗುವ ದೈವತ್ವವು ವಿಶ್ವದಲ್ಲಿಯೂ ಸಹ ವ್ಯಕ್ತವಾಗುತ್ತದೆ. ಅದು ಕೇವಲ ಒಂದು ವಿಸ್ತೃತವಾದ ಪ್ರಕಟಣೆಯಾಗಿರುತ್ತದೆ.[೨] ನನ್ನ ಅಸ್ತಿತ್ವವೆಂಬ ಸತ್ಯವು ನನ್ನ ನೆರೆಯವನ ಅಸ್ತಿತ್ವವೆಂಬ ಸತ್ಯವಿಲ್ಲದೆ ಪರಿಪೂರ್ಣವಾಗುವುದಿಲ್ಲ. ನನ್ನ ವಿಶ್ವವನ್ನು ಪರರ ವಿಶ್ವದಿಂದ ಬೇರ್ಪಡಿಸುವುದು ಅಜ್ಞಾನವೆಂಬ ಗೋಡೆ. ಈ ಅಡೆತಡೆ ನಿವಾರಣೆಯಾಗಬೇಕಲ್ಲದೇ ನನ್ನಲ್ಲಿರುವ ದೈವತ್ವದ ಅನ್ಯತೆ ಹಾಗೂ ಎಲ್ಲರಲ್ಲಿರುವ ದೈವತ್ವವನ್ನು ಪ್ರತ್ಯಕ್ಷೀಕರಿಸಬೇಕು.

ಮಾನವನು ತಾನೇತಾನಾಗಿ ಬೆಳೆಯುವುದನ್ನು ಕಲಿಯಬೇಕು, ತನ್ನ ಪ್ರಜ್ಞೆಯ ವ್ಯಾಪ್ತಿಯನ್ನು ವಿಸ್ತರಿಸಿ ವಿಶ್ವದಲ್ಲಿ ಹೆಚ್ಚು ಹೆಚ್ಚು ಆವರಿಸಿಕೊಳ್ಳಬೇಕು. ಒಬ್ಬ ವ್ಯಕ್ತಿಯು ಯಾವುದೇ ಹಂತದಿಂದ ಇದನ್ನು ಆರಂಭಿಸಬಹುದು. ಮನೋದಿಗಂತವನ್ನು ವಿಸ್ತರಿಸುವುದರೊಂದಿಗೆ ಅಥವಾ ಹೃದಯದಲ್ಲಿ ಸ್ಥಿತವಾಗಿರುವ ಜಾಗೃತ ಆಧ್ಯಾತ್ಮಿಕ ಕೇಂದ್ರದಿಂದ ಸಹಾನುಭೂತಿ, ಪ್ರೇಮ ಮತ್ತು ಸಾಮರಸ್ಯಗಳನ್ನು ಹೊರಸೂಸುವುದ ರಿಂದಲೂ ಆರಂಭಿಸಬಹುದು. ಬಾಹ್ಯ ಪ್ರಕೃತಿಯ ಪರಿಮಿತ ಹಿಡಿತದಿಂದ ತಾನೇ ತಾನಾಗಿ ಮುಕ್ತಗೊಳ್ಳುವ ಜ್ಞಾನದ ದೆಸೆಯಿಂದ ಸ್ವವಿಸ್ತರಣೆಯೆಂಬ ಕ್ರಿಯೆಯ ಆಳವನ್ನು ಹಾಗೂ ಶಕ್ತಿಯನ್ನು ಪಡೆದುಕೊಳ್ಳುತ್ತಾ, ದೊಡ್ಡದಾದ ಪ್ರಜ್ಞೆಯಾಗಿ ಬೆಳೆದು ಪರಿಣಾಮಕಾರಿಯಾದ ಹಾಗೂ ಘನ ಗಂಭೀರವಾದ ಅಸ್ತಿತ್ವವನ್ನು ಪಡೆದು, ಶ್ರೇಷ್ಠತೆಗೆ ಸಹಜವಾಗಿ ತಾನೇ ತಾನಾಗಿ ಹೆಚ್ಚು ಹೆಚ್ಚು ವಿಸ್ತಾರಗೊಳ್ಳುತ್ತಾ ಅಂತಿಮವಾಗಿ ವ್ಯಕ್ತಿಯಲ್ಲಿ ವಿಶ್ವಪ್ರಜ್ಞೆಯೊಡನೆ ಅತ್ಯುನ್ನತ ಸ್ಥಿತಿಗೇರುತ್ತದೆ. ಆನಂತರವಷ್ಟೆ ವ್ಯಕ್ತಿಗೆ ಇತರರೊಡನೆ ನಿಜವಾದ ಏಕೀಭಾವ ಹೊಂದಿದ ಅನುಭಾವವಾಗುತ್ತದೆ. ದೈವಿಕವಾದ ನಾನು ಹಾಗೂ ದೈವಿಕವಾದ ಈ ವಿಶ್ವ ಒಂದೇ ಆಗಿ ಕಂಡುಬರುತ್ತದೆ; ನಿಜವಾಗಿಯೂ ನಾನೇ ಎಲ್ಲವೂ 'ಅಹಂ ಇವ ಇದಂ ಸರ್ವಂ'.[೩] ಇದು ಎರಡನೇ ಹೆಜ್ಜೆ: ವಿಶ್ವ ದೈವಿಕತೆಯ ಅರಿವು.



ವ್ಯಕ್ತಿಯಲ್ಲಿರುವ ದೈವಿಕತೆ ಹಾಗೂ ವಿಶ್ವದಲ್ಲಿರುವ ದೈವಿಕತೆಗಳೆರಡೂ ಒಂದೇ ಎಂದು ಅರಿವಿಗೆ ಬರುತ್ತದೆ. ಏಕೆಂದರೆ ಇವೆರಡೂ ಒಂದೇ ದೈವಿಕತೆಯಿಂದ ವ್ಯಕ್ತವಾಗಿ ಉಚ್ಚ ಮಟ್ಟದಲ್ಲಿದ್ದು, ವೈಯಕ್ತಿಕ ಮತ್ತು ಪ್ರಾಪಂಚಿಕ ಎಂದು ಕರೆಯಲಾಗುತ್ತದೆ. ಈ ಪರಮಶ್ರೇಷ್ಠವಾದ ದೈವಿಕತೆಯೇ ವೈಯಕ್ತಿಕಗೊಂಡು ತಾನೇ ವ್ಯಕ್ತಿಯ ದೈವಿಕತೆಯಾಗಿ ಪರಿವರ್ತನೆಗೊಂಡು ಆತನ ಅಸ್ತಿತ್ವವನ್ನು ಎತ್ತಿ ಹಿಡಿಯುತ್ತದೆ: ಇದೇ ಉಚ್ಚ ಮಟ್ಟದ ದೈವಿಕತೆಯು ತಾನೇ ಸ್ವತಃ ಪ್ರಾಪಂಚಿಕ ದೈವಿಕತೆಯಾಗಿ ಸೂತ್ರರೂಪದಲ್ಲಿ ರೂಪುಗೊಂಡು ಎಲ್ಲದರ ಅಸ್ತಿತ್ವದಲ್ಲಿ ಬುನಾದಿಯಾಗಿರುತ್ತದೆ. ಆದುದರಿಂದ ವೈಯಕ್ತಿಕದ ಸ್ವಯಂ ಹಾಗೂ ಪ್ರಾಪಂಚಿಕದ ಸ್ವಯಂ ಇವೆರಡರ ಉತ್ಪತ್ತಿಯೂ ಒಂದೇ ರೀತಿಯಾಗಿ ಆಗಿರುತ್ತದೆ. ಹಾಗಾಗಿ ಶ್ರೀ ಅರವಿಂದೋರವರ ಯೋಗವು ಸಂಪೂರ್ಣವಾಗಿ ದೈವಿಕತೆಯನ್ನು ಆವರಿಸಿಕೊಂಡು ವ್ಯಕ್ತಗೊಳ್ಳುವ ಸಲುವಾಗಿ, ಸಹಜವಾಗಿಯೇ ತನ್ನ ಗುರಿಯಲ್ಲಿ ಉಚ್ಚ ಮಟ್ಟದ ದೈವಿಕತೆಯ ಶಾಂತಿ, ಆನಂದ, ಜ್ಞಾನ ಮತ್ತು ಶಕ್ತಿಗಳ ಅನಂತ ಸಂಗಮವನ್ನು ಒಳಗೊಂಡಿದೆ.

ಶರೀರ, ಜೀವ ಮತ್ತು ಮನಸ್ಸು ಇವು ಮಾನವನ ಅಸ್ತಿತ್ವದ ವರ್ತಮಾನದ ಸೂತ್ರಗಳು. ನಾವು ನಮ್ಮ ಪ್ರಜ್ಞೆಯ ಮೂಲಕ ಇವುಗಳ ಎಲ್ಲೆಯನ್ನು ಮೀರಿ ಬೆಳೆಯಬೇಕಾಗಿರುವುದೊಂದೇ ದಾರಿ.[೪] ನಮ್ಮೊಳಗೆ ಮುಚ್ಚಿಕೊಂಡಿರುವ ಉನ್ನತ ಶ್ರೇಣಿಗಳನ್ನು ತೆರೆಯಬೇಕು. ಯೋಚಿಸುವ ಮನಸ್ಸಿನ ಮೇಲೆ ಪ್ರಜ್ಞೆಯ ಹಲವು ಸ್ತರಗಳಿದ್ದು, ಇವುಗಳಿಗೆ ತಮ್ಮದೇ ಆದ ನಿರ್ದಿಷ್ಟ ಶಕ್ತಿಗಳಿರುತ್ತವೆ. ಈ ಅಸ್ತಿತ್ವದ ಕ್ಷೇತ್ರಗಳನ್ನು ಪರಿಣಾಮಕಾರಿಯಾಗಿ ರೂಪಿಸಿ, ಪ್ರಜ್ಞೆಗೆ ಈ ಉನ್ನತ ಮಟ್ಟಗಳಿಗೆ ಏರುವಂತೆ ತರಬೇತುಗೊಳಿಸಿ, ಅವುಗಳ ಶಕ್ತಿಗಳಿಗೆ ತಮ್ಮ ಕೆಲಸವನ್ನು ಸ್ವಾಭಾವಿಕವಾಗಿ ನಿರ್ವಹಿಸುವಂತೆ ಮಾಡುವುದು– ಜ್ಞಾನ, ಚಿತ್ತ ಮತ್ತು ಅತ್ಯಾನಂದ ಇವುಗಳ ಶಕ್ತಿಯು ಹೆಚ್ಚುಹೆಚ್ಚಾಗಿ, ಔನ್ನತ್ಯದಲ್ಲಿ ಆತ್ಮದ "ಸ್ವಂತಮನೆ" ಅಥವಾ ಸ್ವಧಾಮದ ಹತ್ತಿರ ವ್ಯಕ್ತವಾಗುತ್ತದೆ. ಇದೇ ಸಮಯದಲ್ಲಿ ವ್ಯಕ್ತಿಯ ಅಸ್ತಿತ್ವದಲ್ಲಿರುವ ಪರಿಣಾಮಕಾರಿಯಾದ ಭಾಗಗಳನ್ನು ಸಹ ಮೇಲೆತ್ತಿ ಒಳಬರುತ್ತಿರುವ ಆಧ್ಯಾತ್ಮಿಕ ಶಕ್ತಿಯ ಬೆಳಕಿಗೆ ಒಡ್ಡಬೇಕು.

ನಮ್ಮ ಪ್ರಜ್ಞೆಯ ಚೈತನ್ಯದ ಔನ್ನತ್ಯಕ್ಕೆ ಏರುವ ಹಾಗೂ ನಮ್ಮ ಉನ್ನತ ಪ್ರಜ್ಞೆಯು ತನ್ನೆಲ್ಲಾ ಸ್ವಾಭಾವಿಕವಾದ ಶಕ್ತಿಗಳೊಂದಿಗೆ ವ್ಯಕ್ತಿಯಲ್ಲಿ ನೆಲೆಗೊಳ್ಳಲು ಮಾಡುವ ಅವರೋಹಣ ಈ ಎರಡೂ ಕ್ರಿಯೆಗಳು ಏಕಾಗ್ರತೆ, ಸಂಕಲ್ಪ ಮತ್ತು ವಾಂಛೆ ಇವುಗಳ ಶಿಸ್ತಿಗೊಳಪಟ್ಟು ನಡೆಯುತ್ತದೆ. ಯಾರೇ ಆದರೂ ಒಂದು ಕೊನೆಯವರೆಗೂ ಶಿರಸ್ಸಿನಲ್ಲಿ ಕೇಂದ್ರೀಕರಿಸಿಕೊಳ್ಳಬಹುದು ಅಥವಾ ಸಂಪೂರ್ಣ ಶೀಘ್ರ ಗ್ರಹಣಶಕ್ತಿಯಿಂದ ಧ್ಯಾನ ಮಾಡಬಹುದು ಅಥವಾ ನೇರವಾಗಿ ಹೃದಯ ಮಂದಿರಕ್ಕೆ ಹೋಗಿ ಉನ್ನತ ಶಕ್ತಿಯ ಸಾಕ್ಷಾತ್ಕಾರಕ್ಕಾಗಿ ಪ್ರಾರ್ಥಿಸಿಕೊಳ್ಳಬಹುದು.

ಸಾಧನ ಯಾವುದೇ ಇರಲಿ, ದೈವತ್ವದ ಆಧ್ಯಾತ್ಮಿಕ ಶಕ್ತಿಯ ಸಾಕ್ಷಾತ್ಕಾರಕ್ಕೆ ಹೆಚ್ಚು ಹೆಚ್ಚು ತೆರೆದುಕೊಳ್ಳುವ, ಆದರಿಂದ ಭಗವಂತನ ಗುಣಲಕ್ಷಣಗಳಲ್ಲಿ ಹೆಚ್ಚೆಚ್ಚು ಅಂತರ್ಗತವಾಗುವುದೇ ಗುರಿಯಾಗಿರುತ್ತದೆ. ದೈವಿಕ ಪ್ರಜ್ಞೆಯ ಪ್ರತಿಯೊಂದು ಉನ್ನತ ದಿವ್ಯದರ್ಶನದಲ್ಲಿಯೂ ಅದು ಅನಾವರಣಗೊಳ್ಳುವಾಗ ತನ್ನದೇ ಗುಣಲಕ್ಷಣಗಳ ಛಾಪನ್ನು ಮಾನವನ ಮೇಲೆ ಒತ್ತಿ ತನ್ನೊಳಗೆ ಬಂಧಿಸಿಕೊಳ್ಳುತ್ತದೆ. ಇದು ಹಂತಹಂತವಾಗಿ ಪ್ರಗತಿಯಾಗುವ ಕ್ರಮ: ಆರೋಹಣ (ಏರುವಿಕೆ), ಅವರೋಹಣ (ಇಳಿಯುವಿಕೆ), ಅನುಕಲನ (ಒಟ್ಟಿಗೆ ಕೂಡಿಸುವಿಕೆ) ಇವುಗಳೆಲ್ಲಾ ಅಂತಿಮವಾಗಿ ಮಾನವನನ್ನು ದೈವತ್ವದಲ್ಲಿ ಲೀನಗೊಳಿಸಲು ಸಫಲವಾಗುತ್ತವೆ. ಆದರೆ ಮಾನವ ಸ್ವಭಾವವು ದೈವಿಕ ಸ್ವಭಾವವಾಗಿ ಪರಿವರ್ತನೆಗೊಳ್ಳುವ ಈ ಕೊನೆಯ ಪೂರ್ಣತೆಯ ಹಂತದಲ್ಲಿ, ಮಾನವನು ದೇವಮಾನವನಾಗಿ ಪರಿವರ್ತನೆಗೊಳ್ಳುವಲ್ಲಿ ದೈವತ್ವದ ಸಾಕ್ಷಾತ್ ಶಕ್ತಿಯೇ ಪರಿಣಾಮಕಾರಿಯಾಗಿದ್ದು, ಪರಮಶ್ರೇಷ್ಠ ಜ್ಞಾನದ ಉನ್ನತ ಸೂತ್ರಗಳು, ಜ್ಞಾನ ಮತ್ತು ಚಿತ್ತಗಳ ಕ್ರಿಯಾತ್ಮಕ ಶಕ್ತಿಗಳು ಎಲ್ಲಾ ಸಾಕ್ಷಾತ್ಕಾರದ ಮುಂಚೂಣಿಯಲ್ಲಿರುತ್ತಿದ್ದು, ಶ್ರೀ ಅರವಿಂದ ಅವರಿಂದ ಪರಮಶ್ರೇಷ್ಠ ಮನಸ್ಸೆಂದು ಕರೆಯಲ್ಪಟ್ಟಿದೆ. ಮಾನವನು ಪೂರ್ಣ ವಿಕಸನವಾಗಿರುವ ಆಧ್ಯಾತ್ಮಿಕತೆಯ ಮೂಲಕ ಉನ್ನತ ಮಾನಸಿಕ ಪ್ರಜ್ಞೆಯನ್ನು ಹೊಂದುವುದೇ ಯೋಗದ ಮೂರನೆಯ ಹಾಗೂ ಅತ್ಯುನ್ನತವಾದ ಸಿದ್ಧಿಯಾಗಿದೆ.

ಯಾವಾಗಲೂ ಈ ಮೂರು ಸಿದ್ಧಿಗಳು ಒಂದರನಂತರ ಒಂದರಂತೆ ಅನುಕ್ರಮವಾಗಿ ಬರುವುದಿಲ್ಲ. ಹಾಗೆಯೇ ಆಗಬೇಕೆಂದೇನೂ ಇಲ್ಲ. ಸಾಮಾನ್ಯವಾಗಿ ಮನದೊಲವಿಗೆ ಯಾವುದು ಹೆಚ್ಚು ಸಹಜವೋ ಅದು ಮೊದಲು ಬಂದು ನಂತರ ಉಳಿದವು ಹಿಂಬಾಲಿಸುವವು. ಅವುಗಳೆಲ್ಲಾ ಸಾಮಾನ್ಯವಾಗಿ ಒಂದೇ ಸಮಯದಲ್ಲಿ ಬೆಳೆಯುತ್ತಾ, ಪರಸ್ಪರ ಕಾರ್ಯ ಮಾಡುತ್ತಾ ಒಂದನ್ನೊಂದು ಪ್ರೋತ್ಸಾಹಿಸುತ್ತಿರುತ್ತವೆ; ಒಂದರ ಪ್ರಗತಿಯ ಚಲನೆಯು ಸ್ತಬ್ಧವಾದ ನಂತರ ಇನ್ನೊಂದು ಅದರ ಜಾಗಕ್ಕೆ ಬರುವಂತೆ ಕಂಡುಬರುತ್ತದಾದರೂ, ಕೊನೆಯಲ್ಲಿ ಅವೆಲ್ಲವೂ ಒಂದು ಬಿಂದುವಿನಲ್ಲಿ ಸೇರಿ ಸಂಪೂರ್ಣವಾಗಿ ಪ್ರತ್ಯಕ್ಷೀಕರಿಸಲ್ಪಟ್ಟಿರುತ್ತದೆ.

## ೩

ಯಾವುದೇ ಮಹತ್ವದ ಸಾಧನೆಯನ್ನು ಮಾರ್ಗದರ್ಶಕರ ಸಹಾಯವಿಲ್ಲದೆ ಕೈಗೊಳ್ಳಲು ಸಾಧ್ಯವಿಲ್ಲ ಮತ್ತು ವಿಶೇಷವಾಗಿ ಕಷ್ಟಕರವಾದ ಹಾದಿಯಲ್ಲಿ ಸಾಗುವ, ವಿಸ್ತಾರವಾದ ಗುರಿಯನ್ನು ಹೊಂದಿರುವ ಈ ರೀತಿಯ ಯುಗಾಧ್ಯಯನದಲ್ಲಿ ಮಾರ್ಗದರ್ಶನ ಮಾಡಲು ಸಲಹೆ ನೀಡಲು ಗುರುವೊಬ್ಬರು ಇರುವುದು ಅತ್ಯಗತ್ಯ. ಯಾರು ಶಿಷ್ಯರು ತಿಳಿಯಲು ಅಪೇಕ್ಷಿಸುವ ಸತ್ಯದ ಕ್ರಿಯಾತ್ಮಕತೆಯನ್ನು ತನ್ನೊಳಗೆ



ಸಿದ್ಧಿಸಿಕೊಂಡಿರುತ್ತಾರೆಯೋ ಹಾಗೂ ಶಿಷ್ಯರಿಗೆ ತಿಳಿಹೇಳಲು ಸಮರ್ಥರಿರುತ್ತಾರೋ ಅಂತಹವರನ್ನು ಗುರುಗಳು ಅಥವಾ ಶಿಕ್ಷಕರೆನ್ನಬಹುದು. ತಾನು ಸಿದ್ಧಿಸಿಕೊಂಡಿರುವ ಜ್ಞಾನವೆಂಬ ಶಕ್ತಿಯನ್ನು ಗುರುವಾದವನು ತನ್ನ ಶಿಷ್ಯನಿಗೆ ಮೌನವಾಗಿ ಅಥವಾ ಪದಗಳ ಮೂಲಕ ಧಾರೆ ಎರೆಯಲು ಆರೋಪಿಸುತ್ತಾನೆ. ಹಾಗೂ ಈ ಶಕ್ತಿಯೇ ಸಾಧನೆಯ ಸಾಧ್ಯತೆ ಮತ್ತು ಸಾಮರ್ಥ್ಯವಾಗಿ ಕಾರ್ಯ ನಿರ್ವಹಿಸುತ್ತದೆ. ಇದುವೇ ದೈವಿಕ ಶಕ್ತಿ– ನಿಜ ಹೇಳುವುದಾದರೆ ಗುರುವಿನ ಬಲವೇ ಶಕ್ತಿ. ಗುರುವಿನಲ್ಲಿರುವ ನಿಜವಾದ ಪ್ರಜ್ಞಾಶಕ್ತಿಯು ವ್ಯಕ್ತವಾಗಿ ಕಲಿಯುವ ಪ್ರಯತ್ನದಲ್ಲಿರುವ ಶಿಷ್ಯನಿಗೆ ಎದುರಾಗುವ ಎಲ್ಲಾ ಎಡರು–ತೊಡರುಗಳಲ್ಲಿ ಆಧಾರವಾಗಿರುತ್ತದೆ.

ಪ್ರತಿಯೊಬ್ಬನೂ ನಿಸ್ಸಂಶಯವಾಗಿ ತನ್ನ ಸ್ವಂತ ಕೊಡುಗೆಯನ್ನು ನೀಡಲೇಬೇಕು. ಸತ್ಯ ಪಥಕ್ಕಾಗಿ ಅವನಿಗೆ ಭಾವೋದ್ದೀಪಿತ ಹೆಬ್ಬಯಕೆ ಅಥವಾ ವಾಂಛೆ ಇರಲೇಬೇಕು. ಅವನ ಕೇಂದ್ರ ಭಾಗವಷ್ಟೆ ಅಲ್ಲದೆ, ಪೂರ್ಣ ವ್ಯಕ್ತಿಯೇ ಅದರೆಡೆಗೆ ತಿರುಗಿ ಹಿರಿಯಾಸೆಯೆಂಬ ಜ್ಯೋತಿಯನ್ನು ಬೆಳಗಬೇಕು. ಈ ಜ್ಯೋತಿಯು ಉರಿಯುತ್ತಲೇ ಇರಬೇಕು.

ಈ ವಾಂಛೆಯನ್ನು ಬಲಹೀನಗೊಳಿಸಲು ಹವಣಿಸುವ ಎಲ್ಲವನ್ನೂ ಸತತ ನಿರಾಕರಿಸಬೇಕಲ್ಲದೆ ಆದರ್ಶಕ್ಕೆ ಸಮರ್ಪಿಸಿಕೊಂಡಿರುವ ಮನಸ್ಸು ಸಹ ನಿತ್ರಾಣಗೊಳ್ಳಬಾರದು. ನೈತಿಕತೆಯ ಅಥವಾ ಧಾರ್ಮಿಕ ಹಿನ್ನೆಲೆಯಲ್ಲಿ ಯಾವುದೇ ಸಂಗತಿಗಳನ್ನು ಸ್ವೀಕರಿಸುವುದಾಗಲೀ ಅಥವಾ ನಿರಾಕರಿಸುವುದಾಗಲೀ ಮಾಡಬಾರದು. ಅದಕ್ಕಿರುವುದು ಒಂದೇ ಅಳತೆಗೋಲು: ಯಾವುದು ನಮ್ಮೊಳಗಿನ ಬೆಳವಣಿಗೆಗೆ ಸಹಾಯ ಮಾಡುವುದೋ ಅದನ್ನು ಸ್ವೀಕರಿಸಬೇಕು ಹಾಗೂ ಯಾವುದು ಬೆಳವಣಿಗೆಯನ್ನು ನಿಧಾನಗೊಳಿಸುವುದೋ ಅದನ್ನು ನಿರಾಕರಿಸಬೇಕು. ಆದರೆ ಯಾರೂ ಸಹ ಮುಂಚಿತವಾಗಿಯೇ ಈ ನಿರಾಕರಣೆ ಮತ್ತು ವರ್ಜನೆಯೆಂಬ ಕ್ರಿಯೆಯಲ್ಲಿ ಅತಿ ಹೆಚ್ಚಾಗಿ ತೊಡಗಿಕೊಳ್ಳಬಾರದು. ನಿರ್ಮಲತ್ವ, ಶಾಂತಿ ಮತ್ತು ಜ್ಞಾನವೆಂಬ ಧನಾತ್ಮಕ ಲಾಭಕ್ಕಾಗಿ ಪ್ರಯತ್ನಿಸಬೇಕು ಹಾಗೂ ಯಾವಾಗ ಇವೆಲ್ಲವೂ ಬಯಸುವವನ ಆಸೆ ಮತ್ತು ಕರೆಗೆ ಓಗೊಟ್ಟು ಅವನೊಳಗೆ ಬಂದು ನೆಲೆಸುವವೋ ಆಗ ಅವುಗಳ ವಿರೋಧಿ ಗುಣಗಳೆಲ್ಲಾ ಹೊರದೂಡಲ್ಪಡುವವು.

ಜೊತೆಜೊತೆಗೆ, ದೈವಿಕ ಶಕ್ತಿಗೆ ತಾನಾಗಿ ಶರಣಾಗತನಾಗುವುದನ್ನು ಮಾನವನು ಕಲಿಯಬೇಕು. ಏಕೆಂದರೆ ವ್ಯಕ್ತಿಯೊಳಗೆ ಸ್ಥಾಪಿಸಲ್ಪಟ್ಟಿರುವ ಉನ್ನತ ಪ್ರಜ್ಞೆಯ ಸಾಧನೆಯ ಅಗತ್ಯಗಳಿಗನುಗುಣವಾಗಿ ಪರಿಣಾಮಕಾರಿಯಾಗಿ ರೂಪಗೊಳ್ಳಬೇಕಾಗುವುದು. ಅವಿಧೇಯ ಅಥವಾ ಹಟಮಾರಿ ಭಾಗಗಳು ಶಿಸ್ತಿಗೊಳಪಟ್ಟು, ಉನ್ನತ ಜ್ಯೋತಿಯ ಪ್ರಕಾಶವನ್ನು ಗಳಿಸಿದ ಭಾಗಗಳನ್ನು ಹಿಂಬಾಲಿಸಬೇಕು; ಮನಸ್ಸು ಮತ್ತು ಹೃದಯಗಳು ಮಾನವನೊಳಗಿರುವ ಮಾರ್ಗದರ್ಶಿಯ ಅಥವಾ ವ್ಯಕ್ತಿರೂಪದಲ್ಲಿರುವ ಗುರುಗಳ

ಧ್ವನಿಗೆ ಹೊಂದಿಕೊಳ್ಳಬೇಕು. ಈ ಯೋಗದಲ್ಲಿ ಸಂಪೂರ್ಣ ಶರಣಾಗತಿಯ ಪಾತ್ರವು ವೈಯಕ್ತಿಕ ಪ್ರಯತ್ನ ಹಾಗೂ ಸಂಕಲ್ಪಗಳ ನಿರಾಕರಣೆ ಅಲ್ಲ. ಬದಲಿಗೆ ಅವುಗಳ ಉನ್ನತ ಸಾಮರ್ಥ್ಯಗಳನ್ನು ಹೆಚ್ಚಿಸಿ ದೈವಿಕತೆಯ ಮನಸ್ಸು ಮತ್ತು ಶಕ್ತಿಗಳಲ್ಲಿ ತಾನೇ ತಾನಾಗಿ ಐಕ್ಯಗೊಳ್ಳುವುದಾಗಿದೆ.

ಈ ಪ್ರಯತ್ನ ಆಂತರಿಕವಾಗಷ್ಟೇ ಅಲ್ಲ; ಬಾಹ್ಯ ಭಾಗವೂ ತನ್ನ ಪಾಲು ಕೊಡುವುದಿದೆ. ಯೋಗದ ಗುರಿಯು ಸಂಪೂರ್ಣ ಮಾನವನ ಏಳಿಗೆ ಹಾಗೂ ಪರಿವರ್ತನೆಯನ್ನುಂಟುಮಾಡುವುದಾಗಿದೆ– ಕೇವಲ ಆತನ ಆತ್ಮದ ವಿವೇಚನೆಯಷ್ಟೇ ಅಲ್ಲ. ಆದುದರಿಂದ ಮಾನವನ ಎಲ್ಲಾ ಭಾಗಗಳನ್ನು ವಶಪಡಿಸಿಕೊಂಡು, ಶುದ್ಧ ಮಾಡಿ ಯೋಗದಲ್ಲಿ ಪಾಲುಗೊಳ್ಳುವಂತೆ ಮಾಡುವುದಾಗಿದೆ. ಆಂತರಿಕ ಬೆಳವಣಿಗೆಗೆ ಇವುಗಳೆಲ್ಲಾ ಹೊಂದಿಕೊಳ್ಳಬೇಕು. ಯೋಚಿಸುವ ಮನಸ್ಸನ್ನು ಅಭಿವೃದ್ಧಿಪಡಿಸಿ ಜ್ಞಾನದ ಹಾದಿಯಲ್ಲಿ ಬೆಳೆಯಲು ಹಾಗೂ ತನ್ನಷ್ಟಕ್ಕೆ ಬೆಳಗಲು ಸಹಾಯ ಮಾಡಬೇಕು; ಭಾವನೆಯನ್ನು ಉದ್ರೇಕಗೊಳಿಸುವ ಭಾಗಗಳು ವಿಶೇಷವಾಗಿ ಹೃದಯವನ್ನು ಹಲವು ಪಾರ್ಶ್ವಗಳಿಂದ ಅರಳುವ ಪರಮಶ್ರೇಷ್ಠ ಪ್ರೇಮಿಯ ಪ್ರೇಮವೆಂಬ ಭಾವನೆಗಳಿಗೆ ಕೇಂದ್ರಸ್ಥಾನವಾಗಲು ಜೋಪಾನ ಮಾಡಬೇಕು. ಜೀವನವನ್ನು ದೈವತ್ವದ ಇಷ್ಟಕ್ಕನು ಗುಣವಾಗಿ ಐಕ್ಯಗೊಳಿಸಬೇಕು, ವೈಯಕ್ತಿಕ ಗುರಿ ಹಾಗೂ ಬಯಕೆಗಳನ್ನು ಸಂಪೂರ್ಣವಾಗಿ ನಿರಾಕರಿಸಿ, ದೈವತ್ವಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕು; ವಾಸ್ತವವಾಗಿ ಶರೀರವನ್ನು ಶಿಸ್ತಿಗೊಳಪಡಿಸಿ, ಪರಿಶುದ್ಧಗೊಳಿಸಿ ಭಗವಂತನ ವಾಸಸ್ಥಾನವಾಗಿ ಅಭಿವೃದ್ಧಿಗೊಳಿಸಿಕೊಳ್ಳಬೇಕು.

ಸಮಗ್ರ ಯೋಗವನ್ನು ಕಠಿಣ ಪರಿಶ್ರಮದಿಂದ ಕಲಿಯುವವನು ಭಗವಂತನ ಅನುಗ್ರಹದಲ್ಲಿ ನಂಬಿಕೆಯನ್ನಿಡಬೇಕು. ಈ ಪರಿಶ್ರಮವು ವಾಸ್ತವವಾಗಿ ಎರಡು ಪದರಗಳನ್ನು ಹೊಂದಿರುತ್ತದೆ: ವೈಯಕ್ತಿಕ ಪ್ರಯತ್ನ ಹಾಗೂ ಅನುಗ್ರಹದ ಕಾರ್ಯ. ಪ್ರಾರಂಭದಲ್ಲಿ– ಗಣನೀಯ ಸಮಯದಲ್ಲಿ– ಮುಖ್ಯವಾಗಿ ವ್ಯಕ್ತಿಯ ಪ್ರಯತ್ನ ಮತ್ತು ಈ ಸಾಧ್ಯತೆಯ ಮೂಲಕ ಉಂಟಾಗುವ ಅನುಗ್ರಹದ ಕಾರ್ಯಗಳು; ಯಾವಾಗ ವ್ಯಕ್ತಿಯು ಶರಣಾಗನಾಗಲು ಕಲಿತು ದೈವಿಕತೆಯ ಕೈಗಳಲ್ಲಿ ತನ್ನನ್ನೇ ತಾನು ಒಪ್ಪಿಸಿಕೊಳ್ಳುತ್ತಾನೋ ಆಗ ವೈಯಕ್ತಿಕ ಹೆಣಗಾಟವು ನಿಧಾನವಾಗಿ, ಕೊನೆಗೊಂಡು ಅದರ ಜಾಗದಲ್ಲಿ ಉನ್ನತವಾದ ಶಕ್ತಿಯ ಸ್ವ–ಪರಿಪೂರ್ಣತೆಯು ಉಂಟಾಗಿ, ಕಾರ್ಯನಿರ್ವಹಿಸುತ್ತಿರುವ ದೈವಿಕತೆಯ ಶಕ್ತಿಯು ನೇರವಾಗಿ ಸಾಧನೆಯನ್ನು ಕೈಗೆತ್ತಿಕೊಳ್ಳುವ ಸ್ಥಿತಿ ಉಂಟಾಗುತ್ತದೆ ಮತ್ತು ಈ ಕಾರ್ಯ ನಡೆಯುವುದು ಅತ್ಯಗತ್ಯವಾಗಿದೆ. ಈ ಯೋಗದ ಕೇಂದ್ರ ಗುರಿಯು ಸ್ವನಾಶ, ನಿರ್ವಾಣವಲ್ಲ, ವ್ಯಕ್ತಿಯ ದೃಢವಾದ ಮನಸ್ಸು ಮತ್ತು ಏಕಾಗ್ರತೆಯಿಂದ ಹೊಂದಬಹುದಾದಂತಹದು ಅಥವಾ ತಪಸ್ಸಿನಿಂದ ಮತ್ತು ಮಾರ್ಗದರ್ಶಿ ಅನುಗ್ರಹದ



ಮೇಲಿನ ನಂಬಿಕೆಯಿಂದ ಪಡೆಯಬಹುದಾದಂತಹ ಸ್ವ ಅರಿವಿನ ಸ್ಥಿತಿಯಾಗಲಿ ಅಲ್ಲ; ಇಲ್ಲಿಯ ಗುರಿಯು ಅಸ್ತಿತ್ವದಲ್ಲಿರುವ ಮಾನವನನ್ನು ಸಂಪೂರ್ಣವಾಗಿ ಅವಿಭಜಿತ ಹಾಗೂ ಅವಿಭಾಜ್ಯವಾದ ಚೈತನ್ಯದ ಎತ್ತರಕ್ಕೇರಿಸಿ ಅದನ್ನು ಪುನರ್ನಿಮಿಸಿ, ಸ್ವಭಾವವನ್ನು ಸಮಗ್ರ ದೈವಿಕ ಸತ್ಯದ ಸಂಜ್ಞೆಗೊಳಪಡಿಸುವು ದಾಗಿದ್ದು, ಇದು ಎಷ್ಟೇ ಪರಿಶ್ರಮಪೂರ್ಣವಾಗಿ ಮತ್ತು ಸದೃಢವಾಗಿದ್ದರೂ ಮನುಷ್ಯ ಪ್ರಯತ್ನದಿಂದ ಅಸಾಧ್ಯ. ಈ ಸರ್ವೋತ್ತಮವಾದುದನ್ನು ಸ್ವಭಾವ ಸಿದ್ಧವಾದ ಜ್ಞಾನ–ಮನಸ್ಸು, ಪ್ರಜ್ಞೆ–ಶಕ್ತಿ, ಇವುಗಳ ಶಕ್ತಿಯಿಂದ, ಜ್ಞಾನಸಂಬಂಧವಾದ ಸತ್ಯದಿಂದ ಆಳಲ್ಪಟ್ಟಿದ್ದು, ಪರಮಶ್ರೇಷ್ಠ ಶಕ್ತಿ ಎಂದು ಕರೆಯಲ್ಪಡುವ ದೈವಿಕ ಮಾತೆ (ಜಗನ್ಮಾತೆ).

**ಅಡಿಟಿಪ್ಪಣಿಗಳು**

೧. ಒಳಗಿನ ಅಸ್ತಿತ್ವದ ಸಂಪೂರ್ಣ ವಿಸ್ತಾರವು ತನ್ನದೇ ಸ್ವಂತ ಪ್ರಜ್ಞೆಯೊಂದಿಗೆ ಜಾಗೃತವಾಗಿದ್ದು, ಶ್ರೇಷ್ಠ ಅಥವಾ ಭವ್ಯವೆಂದು ಕರೆಯಬಹುದು; ಆದರೆ ಕೆಲವು ಶ್ರೇಣಿಗಳಲ್ಲಿ ಈ ಪ್ರಜ್ಞೆಯು ಚಟುವಟಿಕೆಯಿಂದಿರುವುದಿಲ್ಲ. ಕ್ರಿಯಾಶೀಲ ಪ್ರಜ್ಞೆಯ ಮಟ್ಟಕ್ಕಿಂತ ಕೆಳಗಿರುವಂತಹವುಗಳನ್ನು ಅಧೀನ ಆತ್ಮಸಾಕ್ಷಿ ಎಂತಲೂ ಹಾಗೂ ಯಾವುದು ಕ್ರಿಯಾಶೀಲ ಪ್ರಜ್ಞೆಯ ಮಟ್ಟಕ್ಕಿಂತ ಹೆಚ್ಚಾಗಿರುವುದೋ ಅದಕ್ಕೆ ಊರ್ಧ್ವ ಆತ್ಮಸಾಕ್ಷಿ ಎಂತಲೂ ಕರೆಯಬಹುದು.

೨. "ಏಕಂ ವಾ ಇದಂ ವಿಬಭೂವ ಸರ್ವಂ" (ಋಗ್ವೇದ ೮.೫೮.೨), ಒಂದೇ ಎಲ್ಲವೂ ಆಗಿದೆ.

೩. ಛಾಂದೋಗ್ಯ ಉಪನಿಷತ್, ೭.೨೫.೧

೪. "ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾಂತರಾತ್ಮಾ... ಸರ್ವಭೂತಾಧಿವಾಸಃ... ಕೇವಲೋ ನಿರ್ಗುಣಶ್ಚ" (ಶ್ವೇತಾಶ್ವತರ ಉಪನಿಷತ್, ೬.೧೧) ಒಬ್ಬನೇ ದೇವರು, ಎಲ್ಲರಲ್ಲೂ ಇರುವವನು, ಎಲ್ಲರ ಆಂತರ್ಯದಲ್ಲಿರುವವನು, ಎಲ್ಲವನ್ನೂ ಆವರಿಸಿರುವವನು, ಯಾವ ಗುಣಗಳೂ ಇಲ್ಲದ ನಿರ್ಗುಣನು.

* * * *

# ೩. ದೈವೀಮಾತೆ

ಪರಮಶ್ರೇಷ್ಠವಾದ ಸತ್ಯವಿರುವುದು ಒಂದೆ, ಅದನ್ನು ವಿವರಿಸಲಾಗದು. ಆದರೆ ಸಾಕ್ಷಾತ್ಕಾರಕ್ಕೆ ಸಂಬಂಧಪಟ್ಟಂತೆ ಅವಲೋಕಿಸಿದಾಗ, ಪರಮಶ್ರೇಷ್ಠ ಜ್ಞಾನದಿಂದೊಡಗೂಡಿದ ವಸ್ತುಸ್ಥಿತಿಯ ಜೀವಿಯಾಗಿ ತಾನೇತಾನಾಗಿ ಕಂಡುಬರುತ್ತದೆ. ಜ್ಞಾನವು ಸ್ವಾಭಾವಿಕವಾಗಿದ್ದು, ವಾಸ್ತವವಾಗಿ ಅದು ಜೀವಿಯ ಸಹಜ ಗುಣಲಕ್ಷಣವೇ ಆಗಿದೆ. ಅದು ಕೇವಲ ಅದರ ಸ್ವಂತ ಜ್ಞಾನವಷ್ಟೇ ಅಲ್ಲ; ಅದು ಒಂದೇ ಸಲಕ್ಕೆ ಸ್ವ ಅರಿವು ಮತ್ತು ಎಲ್ಲದರ ಅರಿವಿರುವ ಪ್ರಜ್ಞೆಯಾಗಿದೆ. ಅದೊಂದು ಭೌತಿಕಶಕ್ತಿಯ ಸಹಜ ಪ್ರವೃತ್ತಿ; ಅದು ದೈವಿಕ ಜೀವಿಯ ಶಕ್ತಿ. ಬ್ರಹ್ಮನೆಂಬ ಅಪರಿಮಿತನಿಂದ ಅದು ಅಸಂಖ್ಯಾತ ಹೆಸರು ಮತ್ತು ಆಕಾರಗಳಿಂದ ವ್ಯಕ್ತವಾಗಿ, ಮಿತಿಯುಳ್ಳ ಅಳತೆಯಲ್ಲಿ ಅನಂತತೆಯ ಆಳದಿಂದ, ಒಂದರಿಂದಲೇ ಅನೇಕ ರೂಪವನ್ನು ತಾಳುವ ಅದಕ್ಕೆ ಮಾಯೆ ಎನ್ನುವರು. ಇವಳ ಶಕ್ತಿಯಿಂದಲೇ ಜ್ಞಾನಿಯಾದ ಏಕಮಾತ್ರ ಪುರುಷನಿಂದ ನಾನಾ ವಿಧದ ಉದ್ದೇಶವುಳ್ಳ ಸೃಷ್ಟಿ ಕ್ರಿಯೆಯು ಉಂಟಾಗುವುದು.[೧] ಭಗವಂತನಾದ ಈಶ್ವರನಲ್ಲಿ ಅಂತರ್ಗತವಾಗಿದ್ದುಕೊಂಡಷ್ಟೇ ಅವಳು ಸಾಕ್ಷಾತ್ಕಾರಗೊಳ್ಳುವುದಿಲ್ಲ. ಬದಲಿಗೆ ಸೃಷ್ಟಿಗೊಂಡಿರುವ ಎಲ್ಲಾ ಜೀವಿಗಳನ್ನು ನಿರ್ದೇಶಿಸುತ್ತಾ, ಮಾರ್ಗದರ್ಶನ ಮಾಡುತ್ತಾ, ಆಳುತ್ತಾ ಮುಂದುವರಿಯುವಳು; ಅವಳೇ ಈಶ್ವರಿ.

ದೈವಿಕ ಜೀವ ಹಾಗೂ ಪ್ರಜ್ಞಾ ಬಲ, ಪುರುಷ ಮತ್ತು ಶಕ್ತಿ ಇವೆರಡೂ ಭಿನ್ನವಾದ, ಪ್ರತ್ಯೇಕವಾದ ಸತ್ಯಗಳಲ್ಲ. ವಾಸ್ತವವಾಗಿ ಪ್ರಜ್ಞಾಬಲ ತಾನಾಗಿ ಅಸ್ತಿತ್ವದಲ್ಲಿರುವುದೇ ಪ್ರಜ್ಞಾಬಲವಾಗಿ, ಸಾಕ್ಷಾತ್ಕಾರವಾಗುವಾಗ ಅವೆರಡೂ ಒಂದೇ ದೈವಿಕ ಶಕ್ತಿಯ ಎರಡು ಅಂತಸ್ತುಗಳು. ಅವುಗಳ ಸಂಬಂಧದಲ್ಲಿ ಅನ್ಯೋನ್ಯತೆ ಇದೆ. ಪರಮಶ್ರೇಷ್ಠ ಸತ್ಯದಲ್ಲಿ ಏಕತೆ ಇದೆ. ದೈವಿಕ ಜೀವಿಯೆ ಭಗವಂತ, ಅವನು ಸ್ವಯಂಭು; ಅವನ ಪ್ರಜ್ಞಾಬಲವೇ ಅವಳು, ಪರಮಶ್ರೇಷ್ಠ ಶಕ್ತಿ. ಅವನ ಸೃಷ್ಟಿ ಕ್ರಿಯೆಯ ಸಮತೋಲನದ ಸತ್ಯವನ್ನು ತಾನೇ ಸ್ವಾಧೀನದಲ್ಲಿಟ್ಟುಕೊಂಡಿರುವ ಕಾರ್ಯ ನಿರ್ವಾಹಕಿ ಮತ್ತು ಅವನ ಉದ್ದೇಶಗಳನ್ನು ನೆರವೇರಿಸುವವಳೂ ಅವಳೇ. ಅವಳು ವ್ಯಕ್ತಗೊಳಿಸುವವಳು; ಅವನು ವ್ಯಕ್ತಗೊಳ್ಳುವವನು. ಅವಳಿಲ್ಲದೆ ಅವನು ಅವ್ಯಕ್ತ; ಅವನಿಲ್ಲದೆ ಅವಳಿಗೆ ಅಸ್ತಿತ್ವವಿಲ್ಲ.



ಯಾವುದೇ ರೀತಿಯ ವ್ಯತ್ಯಾಸಗಳಿದ್ದರೂ ಸಂಪೂರ್ಣ ಸೃಷ್ಟಿಕ್ರಿಯೆಯನ್ನು ಆಳುವುದು ಇದೇ ಮೂಲಭೂತವಾದ ಸತ್ಯ, ಪುರುಷ ಹಾಗೂ ಶಕ್ತಿಯ ಈ ಸಂಬಂಧವೇ ಕೇಂದ್ರ ಬಿಂದುವಾಗಿದ್ದು, ಉಳಿದೆಲ್ಲಾ ಚಲನೆಗಳು ಇದರ ಸುತ್ತಲೇ ಸುತ್ತುತ್ತದೆ. ಅಸ್ತಿತ್ವಕ್ಕೆ ಬರುವ ಸಾಮರ್ಥ್ಯವಿರುವ ಎಲ್ಲವೂ ಜೀವಿಯಲ್ಲಿರುತ್ತದೆ; ಅದನ್ನು ಯಥಾರ್ಥಗೊಳಿಸುವುದು ಶಕ್ತಿ ಅಥವಾ ಪ್ರಜ್ಞಾಬಲ. ಇದು ಪ್ರತಿ ಜೀವಿಯ ಅಂತರ್ಗತವಾದ ಶಕ್ತಿ. ಈ ಪ್ರಕಾರವಾಗಿ ಏಳು ಪದರದ ಅಸ್ತಿತ್ವವು ಈ ಸೃಷ್ಟಿಕ್ರಿಯೆಯಲ್ಲಿದ್ದು, ಭಗವಂತನು ತನ್ನ ದೈವಿಕ ಶಕ್ತಿಯಿಂದ ಇದನ್ನು ಜೀವಿಗಳಲ್ಲಿ ವ್ಯಕ್ತಗೊಳ್ಳುವಂತೆ ಮಾಡುತ್ತಾನೆ. ಸಾಕ್ಷಾತ್ಕಾರಗೊಳ್ಳಬೇಕಾದ ಸತ್ಯಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ಆಕೆ ತನ್ನ ಸೃಜನಾತ್ಮಕ ಘಳಿಗೆಯಲ್ಲಿ ಅವುಗಳನ್ನು ಬಿಡುಗಡೆಗೊಳಿಸುವಳಲ್ಲದೇ ಮುಂದುವರಿದು ಅವುಗಳ ಭಾವವನ್ನು ಸಾಮರಸ್ಯಗೊಳಿಸುವ ಕೆಲಸವನ್ನು ಪರಮಶ್ರೇಷ್ಠ ಭಗವಂತನ ಸಂಕಲ್ಪ ಮತ್ತು ಮೂಲತತ್ವಗಳ ಅನುಮೋದನೆಯೊಂದಿಗೆ ಮಾಡುವಳು; ಈ ಪ್ರಕಾರವಾಗಿ ಸಾಕ್ಷಾತ್ಕಾರದ ಪ್ರತಿ ಹಂತದಲ್ಲೂ, ಸೃಷ್ಟಿಕ್ರಿಯೆಯ ಪ್ರತಿ ಘಟ್ಟದಲ್ಲೂ ಅವಳು ಕ್ರಿಯಾಶೀಲಳಾಗಿರುವಳು.

ಎಲ್ಲಾ ಕದಲಿಕೆಗಳು, ಎಲ್ಲಾ ಚಟುವಟಿಕೆಗಳು ಅಂತಿಮವಾಗಿ ಅವಳ ಒಂದು ಕದಲಿಕೆಯ ಭಾಗ ಅಥವಾ ಶೈಲಿ ಎಂಬ ಅರಿವುಂಟಾಗಿ, ಈ ವಿಶ್ವದಲ್ಲಿ ದೈವಿಕ ಚಿತ್ತದಿಂದುಂಟಾಗುವ ಸೃಷ್ಟಿ ಕ್ರಿಯೆಯನ್ನು ಸಫಲಗೊಳಿಸುವತ್ತ ನಿರ್ದೇಶಿಸಲ್ಪಟ್ಟಿದ್ದು ಅಜ್ಞಾನವೆಂಬ ಗಾಂಢಾಧಕಾರದಿಂದ ಜ್ಞಾನವೆಂಬ ಬೆಳಕಿನೆಡೆಗೆ ಸಾಗುವುದಾಗಿದೆ. ಮನ್ವಂತರವೆಂಬ ಈ ಕಾರ್ಯಕ್ಕೆ ಕೊನೆಯಿಲ್ಲವಾದರೂ ಅವಳೇ ಸೃಷ್ಟಿಕರ್ತೆ ಅಥವಾ ಎಲ್ಲರ ತಾಯಿಯಾಗಿರುವುದರಿಂದ ಇದು ಅತ್ಯಗತ್ಯವಾಗಿದೆ– ಏತದ್ ಯೋನೀನಿ ಭೂತಾನಿ ಸರ್ವಾಣಿ.[೨] ತನ್ನ ಉದ್ದೇಶದ ನೆರವೇರಿಕೆಗಾಗಿ ಆಕೆ ಹಲವು ಶಕ್ತಿಗಳನ್ನು ಉತ್ಪತ್ತಿ ಮಾಡಿ, ಒಂದಾಗಿ ಸೇರಿಸಿ ಹೊರಹಾಕುವಳು. ಈಶ್ವರನಿಂದ ಪ್ರಮುಖ ದೇವತೆಯಾಗಿಯೂ ಸಾಕ್ಷಾತ್ಕಾರಗೊಳ್ಳುವಳು. ಅಜ್ಞಾನ, ಅಸತ್ಯ ಮತ್ತು ದುಃಖದಿಂದ ತುಂಬಿರುವ ಈ ವಿಶ್ವಕ್ಕೆ ತಾನಾಗೇ ಇಳಿಯಲು ಸಹ ಸಮ್ಮತಿಸುವಳಲ್ಲದೆ, ಲೋಕವಿಲಾಸ ಎಂಬ ಜೀವನಯಾತ್ರೆಯ ನಿರ್ಣಾಯಕ ಘಟ್ಟದಲ್ಲಿ, ತನ್ನ ನೇರವಾದ, ಅಪ್ರಾತಿನಿಧಿಕ ಪ್ರಜ್ಞೆಯ ಶಕ್ತಿ ಮತ್ತು ಬಲದಿಂದ ಪರಮಶ್ರೇಷ್ಠ ಇಂಗಿತವನ್ನು ನೆರವೇರಿಸುವಳು. ಈಗಿರುವುದು ಅಂತಹ ಘಳಿಗೆ ಎನ್ನುತ್ತಾರೆ ಶ್ರೀ ಅರವಿಂದರು. ಸೃಷ್ಟಿಕ್ರಿಯೆಯ ಆರಂಭದಿಂದಲೂ ಶ್ರಮಪಡುತ್ತಿದ್ದ ದೈವಿಕ ಶಕ್ತಿಯು ಈಗ ಲೌಕಿಕ ಕಾರ್ಯಕ್ಷೇತ್ರದಲ್ಲಿ ದೈಹಿಕವಾಗಿ ಹಾಜರಿದ್ದು ತಾನು ಪರಿಪೂರ್ಣತೆಯತ್ತ ಸಾಗಲು, ಭೂಮಿಯ ಮೇಲಿನ ಜೀವನವನ್ನು ದೈವಿಕ ಹರಕೆಗನುಗುಣವಾಗಿ ಅರಳಿಸಲು, ಅವಳು ಒಂದಾಗಿ ಸೇರಿರುವ ತಾಯಿಯಾಗಿದ್ದು, ಅವರು ಹೀಗೆಂದು ಘೋಷಿಸುತ್ತಾರೆ: "ನಾವು

ಯಾರನ್ನು ತಾಯಿಯೆಂದು ಆರಾಧಿಸುತ್ತೇವೆಯೋ, ಆಕೆ ದೈವಿಕ ಪ್ರಜ್ಞಾಶಕ್ತಿಯಾಗಿದ್ದು, ಎಲ್ಲಾ ಅಸ್ತಿತ್ವದ ಮೇಲೂ ಪ್ರಭುತ್ವ ಬೀರುತ್ತಾಳೆ."

ಇಂಥ ಸ್ಥಿತಿಯಲ್ಲಿರುವ ದೈವಿಕ ಸೃಷ್ಟಿಕರ್ತೆಯಾದ, ಎಲ್ಲರ ಪರಮಶ್ರೇಷ್ಠ ಮಾತೆಯನ್ನು ವೇದಾಂತಿಗಳ ಭಾಷೆಯಲ್ಲಿ ಹೇಳುವುದಾದರೆ, ಎಲ್ಲ ಲೋಕಗಳಲ್ಲಿ ಉಪಕ್ರಮಿಸಿ, ವ್ಯಾಪಿಸಿಕೊಂಡಿದ್ದು ಸ್ವರ್ಗಕ್ಕಿಂತ ಆಚೆಗೂ ಭೂಮಿಗಿಂತ ಕೆಳಗಡೆಯೂ ವಿಸ್ತರಿಸಿಕೊಂಡಿದ್ದು, ನಾನಾ ವಿಧದ ಅಸ್ತಿತ್ವಗಳನ್ನು ಅಧೀನಪಡಿಸಿಕೊಂಡವಳಾಗಿದ್ದು, ಅವಳ ಅನನ್ಯವಾದ ಶಕ್ತಿಯಿಂದಲೇ ಎಲ್ಲರೂ ಉಸಿರಾಡುತ್ತಾ ಮತ್ತು ಜೀವಿಸಿದ್ದು, ಅವಳ ಹುಟ್ಟು ಒಳಗಿನ ಸಮುದ್ರ ಅಥವಾ ಅಂತಃ ಸಮುದ್ರದ ನೀರಿನಲ್ಲಾಗಿದ್ದು, ಅನಂತತೆಯ ಅಗಾಧ ಪ್ರಜ್ಞೆಯಾಗಿದ್ದಾಳೆ.[೨]

ಅವಳು ಕಾರ್ಯನಿರತಳಾಗಿರುತ್ತಾಳೆ. ವ್ಯಕ್ತಿಯಲ್ಲಿಯೇ ಆಗಲಿ, ಅಥವಾ ವಿಶ್ವದಲ್ಲಿಯೇ ಆಗಲಿ ಈ ಪರಾಶಕ್ತಿಯು ತನ್ನ ನೈಸರ್ಗಿಕವಾದ ಜ್ಞಾನ ಮತ್ತು ಸಂಕಲ್ಪ ಶಕ್ತಿಗಳಿಂದ ಅಗಣಿತ ಕಾರ್ಯ ಚಟುವಟಿಕೆಗಳಲ್ಲಿ ನಿರತಳಾಗಿರುತ್ತಾಳೆ.[೩] ತನ್ನ ಮೌಢ್ಯದಿಂದಾಗಿ ಮಾನವನಿಗೆ ಆಕೆಯ ಸಾನ್ನಿಧ್ಯದ ಅರಿವಾಗುವುದಿಲ್ಲ, ಅವಳ ನಿರ್ದೇಶನ ದೊರೆಯದೇ ಉದ್ದೇಶವಿಲ್ಲದೆ ಸುತ್ತಾಡುವಂತಹ ಮಾರ್ಗವನ್ನು ಆರಿಸಿಕೊಳ್ಳುತ್ತಾನೆ. ಅಸ್ತಿತ್ವದ ಸತ್ಯವನ್ನು ತಿಳಿದುಕೊಳ್ಳಲು ಬಯಸುವಂಥ ಯೋಗಿಗೆ ಈ ಯುಗದಲ್ಲಿರುವಂತೆ ದೈವಿಕ ಸಾಕ್ಷಾತ್ಕಾರದ ಉದ್ದೇಶವನ್ನು ತನ್ನಲ್ಲೇ ಪರಿಪೂರ್ಣ ಗೊಳಿಸಿಕೊಳ್ಳಲು, ಜಾಗೃತನಾಗುವುದು ಅಗತ್ಯವಾಗಿದ್ದು, ಆಕೆಗೆ ಸಂಪೂರ್ಣವಾಗಿ ತೆರೆದುಕೊಂಡು, ತಾನೇತಾನಾಗಿ ಅದನ್ನು ಆಕೆಯ ಶಕ್ತಿಯ ಕಾರ್ಯಗಳಿಗೆ ಶರಣಾಗತನಾಗುವುದನ್ನು ಕಲಿತು ಅತಿಮಾನವನಾಗುವ ಕ್ರಿಯೆಯಲ್ಲಿ ಪಾಂಡಿತ್ಯವನ್ನು ಪಡೆದುಕೊಳ್ಳಬೇಕು.[೪]

ಸ್ವಭಾವಜನ್ಯವಾದ ಅಜ್ಞಾನದಿಂದ ಮುಕ್ತಿಗೊಳಿಸಿಕೊಂಡು ಆತ್ಮವನ್ನು ಸ್ವಾತಂತ್ರ್ಯ ಗೊಳಿಸಿಕೊಳ್ಳುವುದಷ್ಟೇ ಇದರ ಗುರಿ ಅಲ್ಲ– ಕಷ್ಟಕರವಾದರೂ ಏಕಾಗ್ರತೆಯಿಂದ ಕೂಡಿದ ಮಾನವನ ತಪಸ್ಸಿನಿಂದ ಹಿಂದಿನ ಆಧ್ಯಾತ್ಮಿಕ ಅನುಕಂಪದ ಪ್ರಯತ್ನದ ಪರಿಣಾಮವಾಗಿ ಸಿದ್ಧಿಸಿಕೊಳ್ಳಬಹುದು. ಇದು ಇನ್ನೂ ಹೆಚ್ಚಿನದಾಗಿರುತ್ತದೆ. ಇದೊಂದು ಸಂಕೀರ್ಣ ಪ್ರಯತ್ನವಾಗಿದ್ದು, ಮಾನವನ ಸಾಧಾರಣ ಸಾಧನೆಗೆ ಮೀರಿದುದಾಗಿದೆ. ಇದು ವಿಮೋಚನೆಯದಷ್ಟೇ ಅಲ್ಲದೆ, ಪರಿಪೂರ್ಣತೆಯ ಮಾರ್ಗವೂ ಸಹ ಆಗಿದೆ. ಇಲ್ಲಿ ಆತ್ಮಕ್ಕಷ್ಟೇ ಸ್ವಾತಂತ್ರ್ಯದ ಲಾಭ ದೊರೆಯುವುದಿಲ್ಲ. ಬದಲಿಗೆ ಸರಿಸಮನಾಗಿ ಮಾನವನ ಶರೀರದ ಇತರೆಲ್ಲಾ ಅಂಗಗಳಿಗೂ ಅವನ ಸಂಪೂರ್ಣ ಸಾಧನವಾಗಿರುವ ಗುಣಲಕ್ಷಣಗಳಿಗೂ ಸಹ ಬಿಡುಗಡೆಯ ಅನುಭವವಾಗುತ್ತದೆ. ಆತ್ಮವಷ್ಟೇ ಅಲ್ಲ, ಅವನ ಪ್ರತಿಯೊಂದು ಅಂಗವೂ ದೈವತ್ವದ ಸಾರಸತ್ವವಾಗಿರುತ್ತದೆ. ಪ್ರತಿ ಮನುಷ್ಯನಲ್ಲಿ ಉಂಟಾಗುವ ಚೈತನ್ಯದ ವಿಕಾಸ, ಅವನ



ಆತ್ಮ, ಅವನ ಮನಸ್ಸು, ಅವನ ಭಾವನಾತ್ಮಕ ಅಂಶ, ಅವನ ಜೀವನ–ನೈತಿಕಶಕ್ತಿ, ಅವನ ದೈಹಿಕ ರಚನೆ ಹಾಗೂ ಅವನೊಂದಿಗೆ ಹೋಗುವ ಮತ್ತೆಲ್ಲದಕ್ಕೂ ಯೋಗದ ತಿಳಿವಳಿಕೆಯಲ್ಲಿ ಭಾಗವಹಿಸುವ ಸಾಮರ್ಥ್ಯವಿರಬೇಕಲ್ಲದೆ ಭಗವಂತನ ಸಾಕ್ಷಾತ್ಕಾರಕ್ಕೆ ಉನ್ನತ ಸ್ವಭಾವವನ್ನು ಹೆಚ್ಚಿಸಿಕೊಂಡು ನಿಧಾನವಾಗಿ ಪರಿವರ್ತಿಸಿಕೊಳ್ಳಬೇಕು.

ಇದು ವ್ಯಕ್ತಿಯೊಬ್ಬನ ಪ್ರಶ್ನೆಯಷ್ಟೇ ಅಲ್ಲ, ಇದು ಸಮುದಾಯದ ವ್ಯಾಪಕವಾದ ಸಮಸ್ಯೆಯೊಂದಿಗೆ ತಳುಕು ಹಾಕಿಕೊಂಡಿದೆ. ಮನುಷ್ಯ ಸಮಾಜದಲ್ಲಿ ತನ್ನ ಸಹಚರರೊಂದಿಗೆ ಜೀವಿಸಿರುತ್ತಾನೆ. ಹಾಗೂ ವಿಶ್ವದಲ್ಲಿ ಪ್ರಚಲಿತದಲ್ಲಿರುವ ಶಕ್ತಿಗಳ ಕ್ರಿಯೆಗೆ ಹಾಗೂ ಚಲನೆಗಳಿಗೆ ಒಡ್ಡಿಕೊಳ್ಳುವುದು ಅನಿವಾರ್ಯವಾಗಿದೆ. ಮನುಷ್ಯ ಏಕಾಂಗಿಯಾಗಿ ಜೀವಿಸಲು ಸಾಧ್ಯವಿಲ್ಲ. ಹಾಗೊಮ್ಮೆ ಜೀವಿಸಿದರೂ ಅವನು ಎದುರಿಸಿ ಹೋರಾಡುವುದೂ, ವಿಶ್ವದಲ್ಲಿ ಸಂಪರ್ಕವಿಟ್ಟುಕೊಳ್ಳಬೇಕಲ್ಲದೆ ಅವುಗಳಿಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಪರಸ್ಪರ ವಿನಿಮಯದ ಈ ಪ್ರಕ್ರಿಯೆಯಲ್ಲಿ ಅನಿವಾರ್ಯವಾದ ಆಕ್ರಮಣವೆಂದೂ ಹೇಳಲಾಗದಿದ್ದರೂ ಅವನ ಜೀವನಕ್ಕೆ ಹೊರಹೊಮ್ಮುವಿಕೆಯಿಂದ ಸಾಮಾನ್ಯವಾಗಿ ಪ್ರಕೃತಿಯಲ್ಲಿ ಪುನರುಜ್ಜೀವನ ಗೊಳಿಸಲಾಗದ ಚಲನೆಗಳ ಫಲವಾಗಿ ಮಾನವನು ತನ್ನ ಆಂತರಿಕ ಬದುಕಿನಲ್ಲಿ ಕಷ್ಟಪಟ್ಟು ಗಳಿಸಿದ ಲಾಭಗಳೆಲ್ಲವೂ ಸತತವಾಗಿ ಸಾಂದ್ರಗೊಳ್ಳುತ್ತದೆ. ಪ್ರಜ್ಞೆಯ ಎರಡು ಬೇರೆ ಬೇರೆ ಸ್ಥಿತಿಗಳ ನಡುವೆ ನಿರಂತರವಾಗಿ ಶಕ್ತಿಗುಂದಿಸಲು ತಿಕ್ಕಾಟ ನಡೆಯುತ್ತಿರುತ್ತದೆ. ಇದಕ್ಕಿರುವ ಒಂದೇ ಪರಿಹಾರವೆಂದರೆ ವ್ಯಕ್ತಿಯ ಹಕ್ಕುಸಾಧನೆ ಹಾಗೂ ಸಮುದಾಯದ ಹಕ್ಕೊತ್ತಾಯಗಳೆರಡೂ ಒಂದುಗೂಡಿ ನಿಂತು, ಪ್ರತಿಯೊಂದು ಇನ್ನೊಂದರ ಬೆಳವಣಿಗೆ ಮತ್ತು ಪರಿಪೂರ್ಣತೆಗೆ ಸಹಾಯ ಮಾಡುತ್ತದೆ. ಲೌಕಿಕ ಅಸ್ತಿತ್ವದಲ್ಲಿ ಈಗ ಕಾರ್ಯ ನಿರ್ವಹಿಸುತ್ತಿರುವ ಜ್ಞಾನಶಕ್ತಿಗಿಂತಲೂ ಹೆಚ್ಚಿನ ಶಕ್ತಿಯು ವಿಕಸನ ಮತ್ತು ಸ್ಥಾಪನೆಗೆ ಸಾಮರಸ್ಯವನ್ನುಂಟುಮಾಡುವ ಮೂಲತತ್ವವನ್ನು ಒಳಗೊಂಡಿರುತ್ತದೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ, ವಿಶ್ವದ ವಿಕಸನದಲ್ಲಿ ಸತ್ಯ–ಜ್ಯೋತಿ ಎಂಬ ವಿಜ್ಞಾನದ ಸಾಕ್ಷಾತ್ಕಾರವನ್ನುಂಟುಮಾಡಲು ಇರುವ ಏಣಿಯ ಅನಿವಾರ್ಯವಾದ ಮುಂದಿನ ಮೆಟ್ಟಿಲು ಎಂದು ಹೇಳಬಹುದು– ಜ್ಞಾನ ಸಂಬಂಧವಾದ ಶಕ್ತಿಗೆ ಇಲ್ಲಿಯವರೆಗೆ ಪೂರ್ಣ ವಿಕಸಿತವಾಗಿರುವ ಮನಸ್ಸಿನ ಎಲ್ಲ ಶಕ್ತಿ ಸಾಮರ್ಥ್ಯಗಳು ನಾಟುತ್ತಿದ್ದು, ತನ್ನ ಸಂಪೂರ್ಣ ಜ್ಞಾನದಲ್ಲಿ ಸಾಮಾನ್ಯ ಮನುಷ್ಯನ ಮನಸ್ಸನ್ನು ಕೆಡಿಸುವಂತಹ ಸಮಸ್ಯೆಗಳ ಪರಿಹಾರಗಳನ್ನೊಳಗೊಂಡಿದ್ದು, ತನ್ನ ದೃಷ್ಟಿಕೋನವನ್ನು ಯಥಾರ್ಥಗೊಳಿಸಲು ಅಗತ್ಯವಾದ ಶಕ್ತಿ ಮತ್ತು ಸಂಕಲ್ಪಗಳಿಂದ ಕೂಡಿರುತ್ತದೆ. ಅತಿಮಾನಸಿಕ ಶಕ್ತಿಯೆಂದು ಶ್ರೀ ಅರವಿಂದೋರವರಿಂದ ಕರೆಯಲ್ಪಟ್ಟಿರುವ ಈ ಜ್ಞಾನ ಮತ್ತು ಸಂಕಲ್ಪಗಳು, ಅಜ್ಞಾನದಿಂದ ತುಂಬಿರುವ ಈ ಲೋಕದಲ್ಲಿ ಅಸ್ತಿತ್ವದಲ್ಲಿರುವ ಉನ್ನತ ಧರ್ಮಗುರುಗಳಲ್ಲಿ ಪ್ರತ್ಯಕ್ಷವಾಗಿ ಸೂತ್ರರೂಪದಲ್ಲಿ ದೈವಿಕ

ಶಕ್ತಿಯಾಗಿ ಗೋಚರಿಸುತ್ತದೆ. ಹಾಗೆಯೇ ಸಹಜವಾಗಿ ಅವಳು ಮಾತ್ರ– ಈ ದಿವ್ಯವಾದ ತನ್ನ ಸ್ವಶಕ್ತಿಯನ್ನು ಉನ್ನತ ದೈವಿಕ ಸೃಷ್ಟಿಗಾಗಿ ವ್ಯಕ್ತಗೊಳಿಸಬಲ್ಲಳು.

೨

ವ್ಯಕ್ತಿಯೊಬ್ಬನ ಪ್ರಶ್ನೆಯನ್ನು ಅತಿ ಹತ್ತಿರದಿಂದ ಪರಿಶೀಲಿಸಿದಾಗ ಅವನ ಗುರಿಯಾದ ಪರಿಪೂರ್ಣತೆಯ ಗುಣಲಕ್ಷಣಗಳೇನು? ಈ ಬೋಧನೆಯಲ್ಲಿ ಕಂಡುಕೊಂಡಿರುವ ಪರಿಪೂರ್ಣತೆಯು ಅಖಂಡ ಅಥವಾ ಸಮಗ್ರ ಗುಣ ಲಕ್ಷಣಗಳನ್ನು ಹೊಂದಿದೆ. ದೈವಿಕ ಸಾಕ್ಷಾತ್ಕಾರವು ವ್ಯಕ್ತಿಯ ಜನ್ಮದಿಂದ ಜನ್ಮಕ್ಕೆ ಹಾದುಹೋಗುತ್ತಿದ್ದು, ಆತ್ಮವು ಇದರ ಕೇಂದ್ರವಾಗಿರುತ್ತದೆ, ಹಾಗೆಯೇ ಪ್ರತಿ ಬಾರಿಯೂ ಒಂದು ನಿರ್ದಿಷ್ಟವಾದ ಸಾಧ್ಯತೆಯ ಗೆರೆ ಅಥವಾ ಗೆರೆಗಳು ಉಂಟಾಗುತ್ತಿದ್ದು, ಇವುಗಳಿಂದ ಸಂಪನ್ನಗೊಂಡಿರುತ್ತದೆ. ದೈವಿಕತೆಯ ಈ ಕಿಡಿಯು ಹೀಗೆ ಒಟ್ಟುಗೂಡಿದ ಅನುಭವಗಳಿಂದ ಸತ್ವವನ್ನು ಹೀರಿಕೊಂಡು ತನ್ನದೆ ಸ್ವಂತಿಕೆಯೊಂದನ್ನು ಗಳಿಸಿಕೊಳ್ಳುತ್ತದೆ; ಪ್ರಕೃತಿಯಲ್ಲಿ ತನ್ನದೇ ಆದ ಪ್ರತಿನಿಧಿಯೊಂದನ್ನು ಯೋಚಿಸಿ ಮುಂದಿಡುತ್ತದೆ, ನಾವು ವ್ಯಕ್ತಿತ್ವ ಎಂದು ಕರೆಯುವ ಈ ಹೊರಗಿನ ಆಕೃತಿಯು ಒಳಗಿರುವ ಆತ್ಮದ ಶಕ್ತಿ ಅಥವಾ ಶಕ್ತಿಗಳಾಗಿವೆ. ಈ ಆತ್ಮವು ದೈವಿಕತೆಯ ಸಂಪೂರ್ಣ ಆಕಾರದಲ್ಲಿ ಅಭಿವೃದ್ಧಿ ಹೊಂದಿ ಲೌಕಿಕ ವಿಕಸನದ ಪ್ರತಿನಿಧಿಯಾಗಿರುತ್ತದೆ; ಈ ಕಿಡಿಯೇ ಮುಂದೆ ಆತ್ಮದ ಜ್ಯೋತಿಯಾಗಿ ಬೆಳೆಯುತ್ತದೆ. ಆತ್ಮದ ವ್ಯಕ್ತಿತ್ವವು ಅಂತೆಯೇ ಒಳಗಿನಿಂದಲೇ ರೂಪಗೊಳ್ಳುತ್ತಿರುವ ಹೆಚ್ಚಿನ ಪರಿಪೂರ್ಣತೆಯ ಸಾಕ್ಷಾತ್ಕಾರದ ಉದ್ದೇಶವನ್ನು ಹೊಂದಿರುತ್ತದೆ.

ಮಾನವನು ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸಿಕೊಳ್ಳಲು ನಾಲ್ಕು ಸ್ಪಷ್ಟವಾದ ಆಧಾರ ತತ್ವಗಳು ವಿಶ್ವದಲ್ಲಿ ಅಸ್ತಿತ್ವದಲ್ಲಿದ್ದು, ಅವು ಭಾವವನ್ನು ಅನ್ವೇಷಿಸಿರುತ್ತವೆ. ಜ್ಞಾನ, ಸಾಮರ್ಥ್ಯ, ಸಾಮರಸ್ಯ ಕೆಲಸಗಳಾಗಿದ್ದು, ಇವು ನಾಲ್ಕು ಅಂಶಗಳು ಜಗದ ಚಲನೆಯ ಪ್ರತಿಬಿಂಬವಾಗಿ ಸಾರ್ವತ್ರಿಕ ಚೈತನ್ಯದ ನಾಲ್ಕು ಪದರದ ಸಾಕ್ಷಾತ್ಕಾರವಾದ ವಿರಾಟ್ ಪುರುಷ ಎಂದು ವೇದದಲ್ಲಿ ಹೇಳಿರುವರು.[೨] ಅಪೂರ್ಣ ಅವಸ್ಥೆಯಲ್ಲಿದ್ದರೂ ಮನುಷ್ಯನಲ್ಲಿ ಈ ಎಲ್ಲದರ ಅಂಶವೂ ಇರುತ್ತದೆ. ಒಂದು ಪಕ್ಷವಿದ್ದು, ಅದು ಆಲೋಚಿಸುತ್ತದೆ, ತಿಳಿದುಕೊಳ್ಳಬಯಸುತ್ತದೆ ಮತ್ತು ಹತೋಟಿಯಲ್ಲಿಟ್ಟುಕೊಂಡು, ನಿರ್ದಿಷ್ಟ ತಿಳಿವಳಿಕೆಯಿಂದ ಯಾವಾಗಲೂ ಆ ಜ್ಞಾನವನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಇನ್ನೊಂದು ಪಕ್ಷವು ತನಗೆ ತಿಳಿದಿರುವುದನ್ನು ತಾನಾಗೇ ಪ್ರಯೋಗಿಸಲು ಬಲಾತ್ಕಾರ ಮಾಡುತ್ತದಲ್ಲದೆ ತನ್ನ ಸಂಕಲ್ಪ ಮತ್ತು ಶಕ್ತಿಯಿಂದ ಅದನ್ನು ಈಡೇರಿಸಿಕೊಳ್ಳುತ್ತದೆ. ಅಡೆತಡೆಗಳನ್ನು ತಾನಾಗೇ ನಿವಾರಿಸಿಕೊಳ್ಳಲು ಪ್ರತಿಪಾದಿಸುತ್ತಾ ತನ್ನ ಶಕ್ತಿಯನ್ನು ಗುರಿ ತಲಪಲು ವ್ಯಯಿಸುತ್ತದೆ. ಮೂರನೆಯ



ದೊಂದಿದ್ದು, ಅದು ಮನುಷ್ಯನೊಳಗಿರುವ ವಿಷಯಗಳ ನಿಯಂತ್ರಣ, ಅವನ ಆಲೋಚನೆಗಳು, ಅವನ ಚಲನೆಗಳು ಮತ್ತು ಅವನ ಯಾವುದೇ ದಿಕ್ಕಿನಿಂದಾದ ವೈಯಕ್ತಿಕ ಶಕ್ತಿಯು ಮತ್ತು ಹೊರಗಿನ ವಿಷಯಗಳು ಅಂದರೆ ಅವನು ವ್ಯವಹರಿಸುವ ಪರಿಸರಗಳಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಅವನು ತಾನೇತಾನಾಗಿ ಹೊಂದಿಕೊಂಡು, ವಿನಿಯೋಗಕ್ಕೆ ತನ್ನ ಬಳಿ ಇರುವ ಸಾಧನೆಗಳನ್ನು ವ್ಯವಸ್ಥೆ ಮಾಡಿಕೊಂಡು ಅಥವಾ ಇತರರ ಸಾಧನಗಳ ವಿನಿಯೋಗದಿಂದ ಸಾಮಾನ್ಯವಾಗಿ ಹಿತವಾದ ಮತ್ತು ಸಾಧಾರಣವಾಗಿ ವಿಶೇಷ ಪ್ರಯತ್ನದಿಂದ ಸಂಬಂಧಗಳಲ್ಲಿ ಪರಸ್ಪರ ಸಮತೋಲನವನ್ನು– ಅಂದರೆ ಸಾಮರಸ್ಯ ಕಂಡುಕೊಳ್ಳುತ್ತಾನೆ. ನಂತರ, ಅವನಲ್ಲಿ ಒಂದು ಭಾಗವಿದ್ದು ಅದು ಕಾರ್ಯನಿರ್ವಹಿಸುವುದರಲ್ಲಿ ವ್ಯಸ್ತವಾಗಿರುತ್ತದೆ. ಜೀವನದ ಬಾಹ್ಯ ಕಾರ್ಯ ಕ್ಷೇತ್ರದಲ್ಲಿ ರಚನೆ ಮತ್ತು ಸೃಷ್ಟಿಗಾಗಿ ತನ್ನ ಶಕ್ತಿಯನ್ನು ಹೊರಹಾಕುತ್ತದೆ. ಇವು ನಾಲ್ಕೂ ಆತ್ಮದ ಶಕ್ತಿಗಳಾಗಿದ್ದು, ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಸಹಜವಾಗಿಯೇ ಒಂದುಗೂಡಿರುತ್ತದೆ. ಎಲ್ಲವೂ ಸಮಾನವಾಗಿ ವ್ಯಕ್ತವಾಗುವುದಿಲ್ಲ. ಆದರೆ ಕೆಲವು ಅಲ್ಪ ಪ್ರಮಾಣದಲ್ಲಿ ಮತ್ತು ಕೆಲವು ಹೆಚ್ಚು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಸ್ವಭಾವದಲ್ಲಿರುವ ಪ್ರಬಲ ಒತ್ತಡಕ್ಕನುಸಾರವಾಗಿ ಮಾನವನ ಜ್ಞಾನದ ಧಾರಣಶಕ್ತಿ ಮತ್ತು ಬುದ್ಧಿಶಕ್ತಿಯ ಸಾಮರ್ಥ್ಯ, ವೀರಶಕ್ತಿ ಮತ್ತು ಆತ್ಮಬಲ, ಹೊಂದಿಕೊಳ್ಳುವ ಗುಣ, ಸಂಘಟನಾ ಶಕ್ತಿ ಹಾಗೂ ಒಡೆತನ, ದುಡಿಮೆ ಮತ್ತು ಸೇವೆ ಇವುಗಳು ತಿಳಿಯುತ್ತವೆ. ಅಭಿವೃದ್ಧಿಗೊಳ್ಳುವ ವ್ಯಕ್ತಿತ್ವವು ಹೆಚ್ಚು ಶ್ರೀಮಂತಗೊಂಡಷ್ಟು ಈ ಎಲ್ಲಾ ಶಕ್ತಿಗಳ ವ್ಯಕ್ತವಾಗುವಿಕೆ ಹೆಚ್ಚು ಅನ್ಯೋನ್ಯತೆಯಿಂದ ಕೂಡಿರುತ್ತದೆ. ವಾಸ್ತವವಾಗಿ ಹೇಳುವುದಾದರೆ ಮೇಲೆ ಹೇಳಿದ ಯಾವುದಾದರೊಂದು ಶಕ್ತಿಯ ಸಂಪೂರ್ಣ ಬೆಳವಣಿಗೆಗಾಗಿ ಉಳಿದ ಶಕ್ತಿಗಳು ಪೂರಕವಾಗಿ ಅಭಿವೃದ್ಧಿ ಹೊಂದುವುದು ಅತ್ಯಾವಶ್ಯಕ. ಆತ್ಮವು ಆದರ್ಶವ್ಯಕ್ತಿತ್ವವಾಗಿ ಪೂರ್ಣ ಪ್ರಮಾಣದಲ್ಲಿ ಅರಳಲು ಎಲ್ಲಾ ನಾಲ್ಕೂ ದಿಕ್ಕಿನಲ್ಲಿ ಸಮಗ್ರ ಪರಿಪೂರ್ಣತೆ ಉಂಟಾಗುವುದು ಅತ್ಯಗತ್ಯ. ಸಂಶಯಾತೀತವಾಗಿ ಈ ಕಾರ್ಯವು ಮಾನವ ಪ್ರಯತ್ನದ ಪರಿಮಿತ ಶ್ರೇಣಿಯನ್ನು ಮೀರಿದುದಾಗಿದೆ. ಮತ್ತು ಹಾಗೆಯೇ ಪ್ರಕೃತಿಗೆ ಬಿಟ್ಟರೆ ಪೂರ್ಣತೆ ಉಂಟಾಗಲು ಶತಮಾನ ಅಥವಾ ಸಹಸ್ರಮಾನಗಳನ್ನೆ ತೆಗೆದುಕೊಳ್ಳಬಹುದು.

ಇಲ್ಲಿಯೂ ಸಹ ಶ್ರೀ ಅರವಿಂದರು ಮಾನವನ ವ್ಯಕ್ತಿತ್ವದ ಪರಿಪೂರ್ಣತೆಯ ಸಾಧ್ಯತೆಯನ್ನು ಜಗನ್ಮಾತೆಗೆ ಸಮರ್ಪಿಸಿದ್ದಾರೆ. ವಿಕಾಸವಾಗುವ ಮಾನವೀಯತೆಯ ಅವಶ್ಯಕತೆಯನ್ನು ಉತ್ತರಿಸಲೋ ಎಂಬಂತೆ ಜಗನ್ಮಾತೆಯು ತನ್ನ ಪ್ರಮುಖವಾದ ನಾಲ್ಕು ವ್ಯಕ್ತಿತ್ವ ಅಥವಾ ಅವತಾರಗಳಲ್ಲಿ ವ್ಯಕ್ತಗೊಂಡಿದ್ದು, ಇವು ವಿಶ್ವದೇವನ ಶಕ್ತಿಗಳಾಗಿದ್ದು, ಸೃಷ್ಟಿಕ್ರಿಯೆಯ ಸಂಘಟನೆ, ಪ್ರಗತಿ ಮತ್ತು ಪರಿಪೂರ್ಣತೆಯಲ್ಲಿ, ಇವು ಪರಿಣಾಮ ಬೀರುತ್ತವೆ. ಇವೆಲ್ಲವೂ ಮಹೋನ್ನತ ನಾಮಾವಳಿಗಳಾಗಿವೆ.

ಮಾಹೇಶ್ವರಿ– ಜ್ಞಾನ ಮತ್ತು ಸಾರ್ವಭೌಮತ್ವದ ದೇವತೆಯಾಗಿದ್ದು, ಜ್ಞಾನದ ವೈಭವವು ಇವಳನ್ನು ಹಿಂಬಾಲಿಸುತ್ತದೆ; ಮಹಾಕಾಳಿ–ವಿಘ್ನ ನಿವಾರಕ ಶಕ್ತಿ ಮತ್ತು ಸತ್ಯದ ಜ್ಞಾನವನ್ನು ನೆರವೇರಿಸುವ ಮನಸ್ಸು; ಮಹಾಲಕ್ಷ್ಮಿ ಸೌಂದರ್ಯ, ಸಂತೋಷ ಮತ್ತು ಸಾಮರಸ್ಯಗಳು ಇವಳಿಂದಲೇ ಸ್ವಯಂ ಸ್ಫೂರ್ತಿಯಿಂದ ಹೊರಹರಿಯುತ್ತವೆ; ಹಾಗೂ ಕೊನೆಯದಾಗಿ ಮಹಾಸರಸ್ವತಿ– ಈಕೆ ನಿರ್ವಹಣೆಯ ವಿವರಗಳ ಮತ್ತು ಪರಿಪೂರ್ಣತೆಯ ಕಾರ್ಯಗಳ ಮೇಲ್ವಿಚಾರಕಿಯಾಗಿರುವಳು. ಇವೆಲ್ಲವೂ ಜಗನ್ಮಾತೆಯ ಶಕ್ತಿಗಳಾಗಿದ್ದು, ಜಗದ ಕಾರ್ಯಕ್ಷೇತ್ರದಲ್ಲಿ ವ್ಯಕ್ತವಾಗಿ, ತತ್‌ಕ್ಷಣದಲ್ಲಿ ಪರಿಣಾಮವನ್ನುಂಟುಮಾಡಿ, ಗ್ರಹಣಶಕ್ತಿ ಮತ್ತು ಇತಿಮಿತಿಗಳಿಗನುಗುಣವಾಗಿ ಮನುಷ್ಯನಲ್ಲಿ ಕಂಡುಬರುತ್ತದೆ. ಸಂಪೂರ್ಣ ದೈವಿಕತೆಯ ಆಕಾಂಕ್ಷೆಗೆ ತನ್ನನ್ನೇ ತಾನು ಅರ್ಪಿಸಿಕೊಂಡಾಗ ಅವನಿಗೆ ಜ್ಞಾನವು ದೊರೆಯುವುದಲ್ಲದೆ, ಅವನಿಗೆ ತಿಳಿಯದೇ ಇರುವ ವಿಷಯಗಳನ್ನು ತಿಳಿದುಕೊಳ್ಳುವ ಮನಸ್ಸು ಬಂದು, ಜಗನ್ಮಾತೆಯಲ್ಲಿ ಶರಣಾಗತನಾಗುವುದರಿಂದ ಆಕೆ ಪ್ರತಿಸ್ಪಂದಿಸಿ ಆಕೆಯ ನಾಲ್ಕು ವ್ಯಕ್ತಿತ್ವಗಳಿಂದ ಕಷ್ಟಕರವಾದ ಸಾಧನೆಯನ್ನು ಯಶಸ್ವಿಯಾಗಿ ಕಾರ್ಯಗತವಾಗುವಂತೆ ಮಾಡುವವಳು– ನಾನಾಬಗೆಯ ಮತ್ತು ಅತಿ ಜಟಿಲ ಕಾರ್ಯವಾದ ಮಾನವನ ಅವಿಧೇಯ ಮೂಲಧಾತುಗಳನ್ನು ತಿದ್ದುವುದು, ವಿಕಸನ, ಅನ್ಯೋನ್ಯ ಸಂಬಂಧವನ್ನುಂಟುಮಾಡುವುದು ಮತ್ತು ನಾಲ್ಕು ಪದರದ ಆತ್ಮಶಕ್ತಿಯ ಸಮಗ್ರ ಭಾವಾಭಿವ್ಯಕ್ತಿ ಇವುಗಳೆಲ್ಲಾ ಪರಿಪೂರ್ಣ ಮಾನವ ವ್ಯಕ್ತಿತ್ವದ ಅಂಶಗಳಾಗಿರುತ್ತವೆ.

**ಅಡಿಟಿಪ್ಪಣಿಗಳು**

೧. ಶ್ವೇತಾಶ್ವತರ ಉಪನಿಷತ್, ೫.೮
೨. ಭಗವದ್ಗೀತೆ, ೭, ೫.೬
೩. ಋಗ್ವೇದ, ೧೦, ೧೨೫
೪. ಶ್ವೇತಾಶ್ವತರ ಉಪನಿಷತ್, ೬.೮
೫. ಋಗ್ವೇದ, ೧೦, ೯೦.೧೨

* * * *



## ೪. ಸಾಮಾಜಿಕ ಅಭಿವೃದ್ಧಿಯ ಮನೋಭಾವ

ಮಾನವನ ಕುರಿತು ಯಾವುದು ಸತ್ಯವೊ ಅದಕ್ಕೆ ಸರಿಸಮನಾದ ಸತ್ಯವು ಒಟ್ಟು ಮನುಷ್ಯರ ಕುರಿತದ್ದೂ ಆಗಿದೆ. ಎಷ್ಟೇ ಆದರೂ ಸಮುದಾಯವು ವ್ಯಕ್ತಿಗಳ ಕೂಟದಿಂದಲೇ ಉಂಟಾಗಿದ್ದು. ಅವರ ಸ್ವಭಾವಗಳು, ಅವರ ಚಲನವಲನಗಳು, ಅವರ ಆಸೆ–ಆಕಾಂಕ್ಷೆಗಳು ಮತ್ತು ಅವರ ಮನೋಭಾವನೆಗಳು ಆ ನಿರ್ದಿಷ್ಟ ಗುಂಪಿನ ಜೀವನವನ್ನು ರೂಪಿಸುತ್ತದೆ. ಆದರೂ ಅದು ಕೇವಲ ಮನುಷ್ಯರ ಗುಂಪಲ್ಲ. ಸಮುದಾಯವು ತನ್ನ ಸ್ವಂತಿಕೆಯನ್ನು ಗಳಿಸಿ, ಬೆಳೆಸಿಕೊಳ್ಳುತ್ತದೆ. ತನ್ನ ಸ್ವಂತ ವ್ಯಕ್ತಿತ್ವ ಮತ್ತು ಮಾರ್ಗ, ನಿಸ್ಸಂಶಯವಾಗಿ ದೃಢವಾದ, ಪ್ರಶಸ್ತವಾದ, ವಿಶಿಷ್ಟವಾದ ಪ್ರಕೃತಿ ಸ್ವಭಾವಗಳು ಆ ಸಮುದಾಯವನ್ನುಂಟುಮಾಡುವ ಮನುಷ್ಯರ ಜೀವನದ ಒಲವು ಮತ್ತು ವಿಚಾರಲಹರಿಗಳಷ್ಟೆ ಅಲ್ಲದೆ, ತನ್ನದೇ ಆದ ಸ್ವಂತ ಗೂಢ ಪ್ರಭಾವವನ್ನು ಅದರ ಅಂಗಘಟಕವಾದ ವ್ಯಕ್ತಿಯ ಜೀವನದ ಮೇಲೆ ಮತ್ತು ಪ್ರಗತಿಯ ಮೇಲೂ ಬೀರುತ್ತದೆ. ಪ್ರತಿಯೊಂದು ಸಮಾಜಕ್ಕೂ ತನ್ನದೇ ಆದ ನಿಶ್ಚಿತವಾದ ಜೀವನವೃತ್ತಿ, ಉದ್ದೇಶ ಹಾಗೂ ಗುರಿಗಳಿರುತ್ತವೆ. ಇದು ಹೀಗೇಕೆಂದರೆ, ಸಮುದಾಯವೂ ಸಹ ವ್ಯಕ್ತಿಯಲ್ಲಿರುವಂತಹ ಭಗವಂತನ ಸಾಕ್ಷಾತ್ಕಾರದ ವಿನ್ಯಾಸವೇ ಆಗಿರುತ್ತದೆ. ವ್ಯಕ್ತಿ ಮತ್ತು ಸಮುದಾಯಗಳು ದಿವ್ಯದರ್ಶನದ ಎರಡು ಸಂಜ್ಞೆಗಳು. ಎರಡರ ಗುರಿಯೂ ಒಂದೇ: ದೇವರ ಸಾಕ್ಷಾತ್ಕಾರಕ್ಕಾಗಿ ತಮ್ಮನ್ನು ದಾಟಿ ಮೇಲೇರುವಂತಹವುಗಳು ಸೇವೆ ಮಾಡುವುದು. ಒಂದು, ಪ್ರತಿಯೊಂದು ವೈಯಕ್ತಿಕ ಕೇಂದ್ರ ಮತ್ತು ಸ್ವರೂಪದಲ್ಲಿ ದೈವತ್ವದ ಸ್ವ–ದಿವ್ಯದರ್ಶನದ ಸಾಧ್ಯತೆಯನ್ನು ಯಥಾರ್ಥಗೊಳಿಸಿದರೆ, ಅದೇ ಸಮಯದಲ್ಲಿ ಇನ್ನೊಂದು ಗುಂಪಿನಲ್ಲಿರುವ ಶಕ್ಯತೆ(ಸಾಧ್ಯತೆ)ಯನ್ನು ಹೊರತರುವ ಕಾರ್ಯ ಮಾಡುತ್ತದೆ. ವೈಯಕ್ತಿಕ ಅದೃಷ್ಟವೇ ಸಮಾಜದಲ್ಲಿರುವ ಮಾನವನ ಅದೃಷ್ಟವೂ ಸಹ ಆಗಿರುತ್ತದೆ: ದೇವರು, ಸ್ವಾತಂತ್ರ್ಯ ಮತ್ತು ಐಕ್ಯತೆಗಳೆಂಬ ಸತ್ಯದ ಪೂರ್ಣ ಪ್ರಮಾಣದ ಪರಮಶ್ರೇಷ್ಠ ಸ್ವ–ಪರಿಪೂರ್ಣತೆಯನ್ನು ತಲುಪುವ ಸಲುವಾಗಿ, ಸಾಧನಗಳು ಸಹ ಒಂದೇ ಆಗಿರುತ್ತದೆ; ಆಧ್ಯಾತ್ಮಿಕ ವಿಕಸನ, ಒತ್ತಡದಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ. ಅನಿವಾರ್ಯವಾಗಿ ಸಮುದಾಯದ ಅಭಿವೃದ್ಧಿಯ ಕಾರ್ಯವಿಧಾನದಲ್ಲಿ ಮಾತ್ರ ಬಹಿರಂಗ ಪ್ರಜ್ಞೆಯು ಕಡಿಮೆಯಿದ್ದು, ವೈಯಕ್ತಿಕ

ಪರಿಸ್ಥಿತಿಗೆ ಹೋಲಿಸಿದರೆ ಹೆಚ್ಚು ನಿಧಾನವಾಗಿ ಮತ್ತು ಅಂಕುಡೊಂಕಾಗಿ ಕಾರ್ಯ ನಿರ್ವಹಿಸುತ್ತದೆ.

ಸಂಪೂರ್ಣ ಮಾನವನ ಚಟುವಟಿಕೆಗಳಲ್ಲಿ ಅನೇಕ ಏರುಪೇರುಗಳು, ಮುನ್ನಡೆಗಳು, ಹಿನ್ನಡೆಗಳು ಅಥವಾ ಪುನರಾವರ್ತನೆಗಳು ಕಂಡುಬಂದು ಅರ್ಥವಿಲ್ಲದೆ ಗರಗರನೆ ಗೋಳಾಕಾರದಲ್ಲಿ ತಿರುಗುತ್ತಿರುವಂತೆ ಭಾಸವಾಗುತ್ತದೆ. ಆದರೆ, ಇದು ಹೊರಗಡೆಯ ತೋರಿಕೆ ಮಾತ್ರ. ಮಾನವೀಯತೆಯ ವಿಕಸನವು ಸರಳರೇಖೆಯಲ್ಲಿ ಮುಂದುವರಿಯುವುದಿಲ್ಲ. ಅದರ ಗತಿಯು ವೃತ್ತಾಕಾರದಲ್ಲಿರುತ್ತದೆ. ಹೇಳಬೇಕೆಂದರೆ, ಚಕ್ರವು ಗೋಲಾಕಾರದಲ್ಲಿ ಅಥವಾ ಗುಂಡಾಗಿ ಚಲಿಸುತ್ತಿರುತ್ತದಾದರೂ ಅದು ಮೇಲ್ಮುಖವಾಗಿ ಮತ್ತು ಮುಮ್ಮುಖವಾಗಿಯೂ ಸಹ ಚಲಿಸುತ್ತದೆ. ಮಾನವೀಯತೆ ಚಲನೆಯ ಈ ಚಕ್ರಗತಿಯ ಪರಿಭ್ರಮಣೆಯಿಂದ ಪೂರ್ಣತ್ವವನ್ನು ನಿಶ್ಚಿತಗೊಳಿಸಿ ಅತಿಜಾಗರೂಕತೆಯ ಲಕ್ಷ್ಯವನ್ನಿಟ್ಟುಕೊಂಡು ದಾರಿಯಲ್ಲಿ ಸಿಗುವ ಸಾಧ್ಯವಿರುವ ಪ್ರತಿಯೊಂದು ಲಾಭವನ್ನೂ ತನ್ನದಾಗಿಸಿಕೊಂಡು ಮುಂದುವರಿಯುತ್ತಾ ಸಿದ್ಧವಿರದ ಮೂಲಧಾತುಗಳನ್ನು ಒತ್ತಟ್ಟಿಗೆ ಬಿಡುತ್ತಾ, ಪಕ್ವವಾದಂತಹವುಗಳನ್ನು ಹೀರಿಕೊಳ್ಳಲು ಹಿಂತಿರುಗುತ್ತದೆ.

ಅರವಿಂದರು ಹೇಳಿರುವಂತೆ ಮಾನವ ಸಮಾಜಗಳ ಬೆಳವಣಿಗೆ, ಜೀವನ ಮತ್ತು ಶೈಥಿಲ್ಯವನ್ನು ಹತ್ತಿರದಿಂದ ಅಭ್ಯಸಿಸಿದಾಗ ಬಹಿರಂಗವಾಗುವುದೆಂದರೆ, ಕೆಲವು ಸ್ಪಷ್ಟವಾದ ಮಜಲುಗಳ ಮೂಲಕ ಅಭಿವೃದ್ಧಿಯ ಪಥದಲ್ಲಿ ಹಾದುಹೋಗುವಾಗ ನಿರ್ದಿಷ್ಟವಾದ ಕ್ರಮ ಮತ್ತು ಒಲವಿನತ್ತ ಸಂಪೂರ್ಣ ಮಾನವ ಜನಾಂಗ ಚಲಿಸುತ್ತಿರುವುದನ್ನು ಅವು ತೋರಿಸುತ್ತವೆ. ಪ್ರತಿ ಹಂತವೂ ಬೆಳೆಯುತ್ತಿರುವ ಮಾನವನ ವ್ಯಕ್ತಿತ್ವದ ನಿರ್ದಿಷ್ಟ ಸಾಮರ್ಥ್ಯ ಅಥವಾ ಸಾಮರ್ಥ್ಯಗಳ ಸಂಸ್ಕರಣ ಮತ್ತು ವಿಕಸನವನ್ನು ನಮೂದಿಸುತ್ತದೆ.

ಸಮಾಜದ ಆರಂಭಿಕ ಹಂತಗಳು ಉನ್ನತವಾದ ಕಲ್ಪನೆ ಮತ್ತು ಸಾಂಕೇತಿಕ ಮನಃಸ್ಥಿತಿಯಿಂದ ಗುರುತಿಸಲ್ಪಡುತ್ತದೆ. ಮಾನವನು ತನ್ನ ಸುತ್ತಲಿನ ಪ್ರಕೃತಿಯ ತಾತ್ಕಾಲಿಕವಾದ ಸಹಜ ಪ್ರವೃತ್ತಿಯಿಂದ ಉದ್ಭವಿಸಿದ ಅಂತರ್ಧ್ಯಾನ ದೃಷ್ಟಿಯ ಪ್ರತಿಕ್ರಿಯೆಯಿಂದಷ್ಟೇ ಇಂದ್ರಿಯದಿಂದ ಗ್ರಹಿಸಿ, ಕಾರ್ಯ ನಿರ್ವಹಿಸುತ್ತಿದ್ದನಷ್ಟೇ ಅಲ್ಲದೆ, ವಿವೇಚನಾಶಕ್ತಿಯನ್ನು ಬಳಸುತ್ತಿರಲಿಲ್ಲ. ಎಲ್ಲಾ ಕಡೆಯೂ ಅವನು ಜೀವನದಲ್ಲಿ ಸ್ಪಂದನವನ್ನು ಗ್ರಹಿಸುತ್ತಾನೆ. ಎಲ್ಲವೂ ಅಂತಃಸ್ಫೂರ್ತಿಯಿಂದೊಳಗೊಂಡಿರುವ ಸಾನಿಧ್ಯವನ್ನು ಎಲ್ಲವೂ ರಹಸ್ಯದಿಂದ ಆವರಿಸಿಕೊಂಡಿರುವುದನ್ನೂ ಅನುಭವಿಸುತ್ತಾನೆ. ಸರ್ವಶಕ್ತನಾದ ಭಗವಂತನಿಂದಲೇ ಎಲ್ಲವೂ ಉತ್ಪತ್ತಿಯಾಗಿ, ಎಲ್ಲವೂ ಅವನೆಡೆಗೆ ಹರಿಯುವುದರಿಂದ ಭಗವಂತನನ್ನು ಆಧರಿಸಲು ತೊಡಗುತ್ತಾನೆ. ತನ್ನೊಳಗಿರುವ ಚೈತನ್ಯ ಹಾಗೂ ಹೊರಗಿರುವ ಅಂದರೆ ವಿಶ್ವಚೈತನ್ಯಗಳ ನಡುವೆ ನೈಸರ್ಗಿಕವಾಗಿ



ಐಕ್ಯತೆ ಉಂಟಾಗುವುದನ್ನು ಅವನು ಇಂದ್ರಿಯದಿಂದ ಗ್ರಹಿಸುತ್ತಾನೆ; ಅವೆರಡೂ ತೆರೆಮರೆಯಲ್ಲಿ ದೈವತ್ವದಿಂದ ನಿಯಂತ್ರಿಸಲ್ಪಟ್ಟಿರುವುದಲ್ಲದೆ, ಆಳಲ್ಪಡುತ್ತಿರುವುದು ಅವನ ತಿಳುವಳಿಕೆಗೆ ಬರುತ್ತದೆ. ಒಂದು ಧಾರ್ಮಿಕವಾದ ಭೀತಿ ಮತ್ತು ಭಾವನೆ ಪ್ರಬಲವಾಗಿರುತ್ತದೆ. ಶ್ರೀಮಂತ ಕಲ್ಪನೆಯ ಸಮರ್ಪಣೆಯಿಂದ ಈ ಹೊಯ್ದಾಡುವ ಭಾವನೆಗಳ ಸುತ್ತಲೇ ಜೀವನವು ತನ್ನಷ್ಟಕ್ಕೆ ತಾನೇ ಸಂಘಟಿಸಿಕೊಳ್ಳುತ್ತದೆ. ಇದು ಭೌತಿಕ ವಿಶ್ವದ ಗುಣಲಕ್ಷಣದ ಜೀವಂತ ಚಿಹ್ನೆಯಾಗಿದ್ದು, ಕಣ್ಣಿಗೆ ಕಾಣದ ಮೇಲಿನ ಲೋಕದ ಕಲ್ಪನೆಯಾಗಿದೆ. ವೇದಕಾಲದ ಭಾರತ, ಆರಂಭಿಕ ಗ್ರೀಸ್ ಮತ್ತು ಈಜಿಪ್ಟ್ ದೇಶಗಳ ಸಮಾಜಗಳು ಹೀಗಿರುತ್ತಿದ್ದವು. ಅವೆಲ್ಲವೂ ಪ್ರಬಲವಾದ ಧಾರ್ಮಿಕ ಭಾವನೆ ಮತ್ತು ಆಧ್ಯಾತ್ಮಿಕ ಆಶಯಗಳಿಂದ ಆಳಲ್ಪಟ್ಟಿದ್ದವು. ಇದನ್ನು ಸಾಂಕೇತಿಕ ಯುಗ ಎಂದು ಕರೆಯಬಹುದು. ಇಲ್ಲಿ ಲೌಕಿಕ ಜೀವನ ಮತ್ತು ಚಟುವಟಿಕೆಗಳನ್ನು ಮೇಲಿನ ಮತ್ತು ಹಿಂದಿನ ಉನ್ನತ ಜೀವನದ ಚಟುವಟಿಕೆಯ ಸಂಕೇತಗಳೆಂದು ನೋಡಲಾಗುತ್ತಿತ್ತು. ಆಧ್ಯಾತ್ಮಿಕ ಮನೋಭಾವನೆಗಳು ಪ್ರಭಾವ ಬೀರುತ್ತಿದ್ದವು. ಸಂಪ್ರದಾಯಗಳು ಮತ್ತು ನ್ಯಾಯಪದ್ಧತಿಗಳು, ಸಾಮಾಜಿಕ ಆಚಾರಗಳು ಮತ್ತು ಪದ್ಧತಿಗಳು, ಧರ್ಮಾಚರಣೆ ಮತ್ತು ವ್ರತಾಚರಣೆಗಳೆಲ್ಲಾ ಉನ್ನತ ಲೌಕಿಕ ದೇವತ್ವ ಸಾಕ್ಷಾತ್ಕಾರದ ಉಚ್ಚ ಮನೋಭಾವನೆಯ ಪ್ರತಿಬಿಂಬವಾಗಿದ್ದವು.

ಈ ಮನೋಭಾವನೆ ಅಥವಾ ಸತ್ಯದಲ್ಲಿ ನಿರ್ದಿಷ್ಟ ಮನೋವೈಜ್ಞಾನಿಕ ಭಾವನೆಗಳು ಕಂಡುಬರುವುದಲ್ಲದೆ ತನ್ನ ಶೈಲಿಯನ್ನು ಹಲವು ನಮೂನೆಗಳಲ್ಲಿ ಅಥವಾ ಶ್ರೇಣಿಗಳಲ್ಲಿ ಜಾರಿ ಮಾಡುತ್ತದೆ. ಸಮಯ ಕಳೆದಂತೆ ಇವೆಲ್ಲವೂ ತಮ್ಮಷ್ಟಕ್ಕೆ ತಾವೇ ಸೂತ್ರ ರೂಪಗಳಲ್ಲಿ ಅಥವಾ ಮಾದರಿಗಳಾಗಿ ನೆಲೆಗೊಳ್ಳುತ್ತವೆ. ಈ ಪ್ರಕಾರ, ಉದಾಹರಣೆಗೆ, ಪ್ರಾಚೀನ ಭಾರತೀಯ ಸಂಪ್ರದಾಯಗಳಲ್ಲಿ, ವೇದಗಳಲ್ಲಿ ವಿಶ್ವದ ದೇವ ಪ್ರಮುಖನಾದ ನಾಲ್ಕು ಪದರಗಳಲ್ಲೂ ತಾನಾಗೆ ವ್ಯಕ್ತವಾಗುವ ವಿರಾಟ್ ಪುರುಷನ ಸತ್ಯದ ಚಲನೆಯು ದೈವಿಕವಾದ ಜ್ಞಾನ, ದೈವಿಕವಾದ ಶಕ್ತಿ, ದೈವಿಕವಾದ ಉತ್ಪನ್ನ ಹಾಗೂ ಅನ್ಯೋನ್ಯತೆ, ದೈವಿಕವಾದ ಸೇವೆ ಇವುಗಳ ಮನೋವೈಜ್ಞಾನಿಕ ಪ್ರಕೃತಿ ಸ್ವಭಾವದಲ್ಲಿ ತಾನಾಗಿ ನೆಲೆಗೊಳ್ಳಲು ಉದ್ದೇಶಿಸಿ, ಆಧ್ಯಾತ್ಮಿಕ ರೀತಿಯ ಜೊತೆಗನುಗುಣವಾದ ನೀತಿಶಾಸ್ತ್ರದ ಶಿಸ್ತಿಗೆ ಧರ್ಮ ಎನ್ನುವರು. ಈ ಮಾದರಿಗಳನ್ನು ಬುನಾದಿಯಾಗಿಟ್ಟುಕೊಳ್ಳುವ ಸತ್ಯಗಳು ಹಲವು ಆದರ್ಶಗಳಾಗಿ ಅರಳುವವಲ್ಲದೆ ತಮ್ಮಷ್ಟಕ್ಕೆ ತಾವೇ ಎಲ್ಲವನ್ನೂ ಆಳಲು ಆರಂಭಿಸುವವು. ಮೊದಲಿಗೆ ಆಧ್ಯಾತ್ಮಿಕ ಕಲ್ಪನೆಯ ಸೇವೆಯಲ್ಲಿ ರಚನೆಗೊಂಡಿದ್ದ ಪ್ರಾಧಾನ್ಯದ ನೆಲೆ ಮನೋವೈಜ್ಞಾನಿಕ ಮತ್ತು ನೀತಿಶಾಸ್ತ್ರದ ಚೌಕಟ್ಟಿಗೆ ಬದಲಾಗುವುದು. ಧರ್ಮವು ಶ್ರೇಷ್ಠ ಅಥವಾ ಪ್ರಮುಖವಾಗುವುದು. ಧರ್ಮ ಸಿದ್ಧಾಂತದ ಮಾದರಿಯು ಮುಂಚೂಣಿಗೆ ಬರುವುದು. ಇದು ಟೈಪಲ್ ಯುಗ (ಕ್ರಿಸ್ತನ ನಂತರದ ಯುಗ?).

ಯಾವ ಸತ್ಯವು ಮೊದಲಿಗೆ ಈ ಬಹುವಿಧದ ರೀತಿ ಮತ್ತು ಆದರ್ಶಗಳಿಗೆ ಸ್ಫೂರ್ತಿಯಾಗಿತ್ತೊ ಅದು ಕಣ್ಣಿಗೆ ಕಾಣದಂತಾಗುವುದಿಲ್ಲವಾದರೂ ಹಿಂದಕ್ಕೆ ಸರಿಯುವುದು. ಸತ್ಯವು, ಸತ್ಯದ ಶಾಸನ ಅಥವಾ ಧರ್ಮಕ್ಕೆ ಸ್ಥಳಾವಕಾಶ ಮಾಡಿಕೊಡುತ್ತದೆ. ಇದೊಂದು ಉನ್ನತವಾದ ಸಾಮಾಜಿಕ ಆದರ್ಶಗಳ ಯುಗವಾಗಿದ್ದು, ಅವುಗಳಿಗೋಸ್ಕರವೇ ಅವುಗಳನ್ನು ಮೇಲೆ ಎತ್ತಿಹಿಡಿದು ಗೌರವಿಸಲಾಗುವುದು. ಬ್ರಾಹ್ಮಣರ ಮನಸ್ಸು ಮತ್ತು ಆತ್ಮದ ಉನ್ನತ ಆದರ್ಶಗಳು, ಕ್ಷತ್ರಿಯರ ನಾಯಕತ್ವ ಗುಣಗಳು (ಯೂರೋಪಿನ ಸರದಾರರಶೂರತ್ವ ಹಾಗೂ ಸ್ವತಃ ಅಳಿದುಹೋಗುವ ಶಕ್ತಿಶಾಲಿ ಸಮುರಾಯ್‌ಗಳ ಉದ್ರೇಕಾವಸ್ಥೆ), ವೈಶ್ಯರ ಸಚ್ಚಾರಿತ್ರ್ಯ ಹಾಗೂ ಪರೋಪಕಾರ ಬುದ್ಧಿ, ಶೂದ್ರರ ಸ್ವಾಮಿನಿಷ್ಠೆ ಹಾಗೂ ಸೇವೆ, ಇವುಗಳು ಈ ಅಭಿವೃದ್ಧಿಯ ಕೆಲವು ಸುಂದರ ಪುಷ್ಪಗಳು.

ಆದರೆ ಸಮಕಾಲೀನತೆಯ ಒಂದು ಹಂತದಲ್ಲಿ ಈ ಕಾನೂನು ತನ್ನಷ್ಟಕ್ಕೆ ತಾನೇ ಸ್ಥಗಿತಗೊಳ್ಳುವುದು. ನಾನಾ ವಿಧದ ಕಾನೂನುಗಳು ಪರಿಣಾಮಕಾರಿಯಾಗಿ, ಸುರಕ್ಷಿತವಾಗಿ ಕಾರ್ಯ ನಿರ್ವಹಿಸಲು ರಚಿಸಲ್ಪಟ್ಟ ಸಂಘಟನೆ, ಸಮಾಜ, ಧರ್ಮಗಳಲ್ಲಿ ಮೇರೆ ಮೀರಿದ ಬೆಳವಣಿಗೆ ಕಂಡುಬರುತ್ತದೆ. ಸಾಮಾಜಿಕ ಹಾಗೂ ಧಾರ್ಮಿಕ ಗುರುಗಳು, ಆಚಾರ–ವಿಚಾರಗಳು ಮತ್ತು ನಿಯಮಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳು ಇತ್ಯಾದಿ ತಮಗೋಸ್ಕರ ತಾವಿದ್ದು ಮೂಲತಃ ಆಧ್ಯಾತ್ಮಿಕ ಮತ್ತು ಮನೋವೈಜ್ಞಾನಿಕ ಸತ್ಯಗಳ ನೆರವೇರಿಕೆಯ ಸಾಧನವಾಗಿದ್ದ ಮನುಷ್ಯನ ಮನಸ್ಸಿನ ಮೇಲೆ ಸಂಪೂರ್ಣ ಹಿಡಿತವನ್ನು ಸಾಧಿಸಿ, ಸಂಪೂರ್ಣ ನಿರಾಕರಣೆ ಯನ್ನುಂಟುಮಾಡುತ್ತದೆ. ಜನರ ಪ್ರಚಲಿತ ಜೀವನವು ಈ ಕಠೋರವಾದ ಚೌಕಟ್ಟುಗಳ ಮೂಲಕ ಕೃತ್ರಿಮವಾಗಿ ಸಾಗಿ ಸಮಾಜದಲ್ಲಿ ಸ್ಥಾಪಿತವಾಗುತ್ತದೆ. ಇದು ಸಾಂಪ್ರದಾಯಿಕ ಯುಗವಾಗಿದ್ದು, ಆಚಾರ, ಪದ್ಧತಿಗಳನ್ನು ಅತಿಕ್ರಮಿಸಿ ನಿರ್ಭಯತೆಯಿಂದ ಪ್ರಶ್ನಿಸುವ ಅಧಿಕಾರ, ಅನುಮತಿ ಯಾವುದಕ್ಕೂ ಇಲ್ಲ. ಈ ಹಂತದ ಸಾಂಕೇತಿಕ ಸಮಾಜಗಳೆಂದರೆ ಮಧ್ಯಯುಗದ ಯೂರೋಪ್ ಮತ್ತು ಬುದ್ಧಪೂರ್ವ ಭಾರತ. ಈ ಕಾಠಿಣ್ಯಗಳು ಅಥವಾ ನಿಷ್ಠುರತೆ ಮಿತಿಮೀರಿರುವುದರಿಂದ ಬಲವಾದ ಪ್ರತಿಕ್ರಿಯೆಯನ್ನು ಹೇಗಾದರೂ ಉದ್ರೇಕಿಸುತ್ತದೆ ಮತ್ತು ಮನುಷ್ಯನ ಮನಸ್ಸು ಕೊನೆಗೂ ಆಕ್ಷೇಪಿಸಲು, ಪ್ರಶ್ನಿಸಲು, ಅನುಮಾನಿಸಲು ಮತ್ತು ಅಂತಿಮವಾಗಿ ನಿರಾಕರಿಸಲು ಮತ್ತು ತಿರುಗಿ ಬೀಳಲು ಪ್ರಾರಂಭಿಸುತ್ತದೆ.

ಮುಂದಿನ ಯುಗವೇ ವೈಯಕ್ತಿಕತೆ ಮತ್ತು ತರ್ಕದ ಯುಗ. ಮನುಷ್ಯ ವಿಷಯಗಳನ್ನು ಪೂಜ್ಯ ಭಾವನೆಯಿಂದ ಸ್ವೀಕರಿಸಲು ನಿರಾಕರಿಸುತ್ತಾನೆ. ಏಕೆಂದರೆ ಅವುಗಳನ್ನು ಪರಂಪರೆ ಅಥವಾ ಅಧಿಕಾರ, ಧಾರ್ಮಿಕ ಮತ್ತು ಲೌಕಿಕಗಳಿಂದ ಪೂಜ್ಯ ಭಾವನೆಯಿಂದ ಇಡಲಾಗಿರುತ್ತದೆ. ಸ್ಥಿರವಾಗಿ ನಂಬುವ ಮೊದಲು ಮಾನವನು



ತನ್ನ ವೈಯಕ್ತಿಕ ಹಕ್ಕನ್ನು ಚಲಾಯಿಸಿ, ಪರೀಕ್ಷಿಸಿ ನಂತರ ತನ್ನ ತರ್ಕವನ್ನು ತೃಪ್ತಿಗೊಳಿಸಿಕೊಳ್ಳುವನು. ವಿವೇಚನೆ ಮಾಡುವ ಮನಸ್ಸು ನೀಡುವ ಪರೀಕ್ಷೆಗಳಲ್ಲಿ ಉತ್ತೀರ್ಣವಾದ ಹೊರತೂ ಯಾವುದನ್ನೂ ಹಿಡಿದಿಟ್ಟುಕೊಳ್ಳಲಾಗದು. ಹೊಸ ಹೊಸ ಸ್ಪರ್ಶಮಣಿಗಳು ಕಂಡುಬರುತ್ತವೆ. ಹೊಸ ಜ್ಞಾನ ಪರಂಪರೆಗಳು ಒಂದು ಎಲ್ಲೆಯಲ್ಲಿ ವಿಕಸಿಸುತ್ತವೆ. ಹಲವು ವಿಧದ ಮತ, ಮೂಢನಂಬಿಕೆ ಮತ್ತು ಸ್ವಮತಾಭಿಮಾನಗಳೆಂಬ ಒಟ್ಟಿಗೆ ಬೆಳೆಯುವ ಕೆಟ್ಟ ಕಳೆಗಳಿಂದ ಅಭಿವೃದ್ಧಿ ಹೊಂದುತ್ತಿರುವ ಚೈತನ್ಯವು ಆಚ್ಛಾದಿಸಲ್ಪಟ್ಟು ಅವುಗಳ ಶೀಘ್ರ ವರ್ಜನೆಯಾಗುವುದು. ಮನುಷ್ಯನ ಮನಸ್ಸಿನ ಈ ಸ್ಥಿತ್ಯಂತರದಿಂದಾಗುವ ಒಂದು ಮಹತ್ವದ ಅನುಕೂಲ. ಹೆಚ್ಚಿನ ಭಾಗವು ಸ್ವಚ್ಛವಾಗಿರುತ್ತದೆ; ಜನಾಂಗದ ಪ್ರಗತಿಪರ ಈಡೇರಿಕೆ ಮತ್ತು ಹೆಬ್ಬಯಕೆಗಳ ಗುರಿಯತ್ತ ಜಾಗೃತಿ ಮತ್ತು ಶೀಘ್ರ ಮುನ್ನಡೆಗಾಗಿ ಮಾನವನ ಮನಸ್ಸು ತರಬೇತು ಹೊಂದಿ ಸಜ್ಜುಗೊಂಡಿರುತ್ತದೆ. ಈ ತರ್ಕದ ಆಧಿಪತ್ಯದ ಅತ್ಯಂತ ಗಮನಾರ್ಹವಾದ ಫಲಿತಾಂಶಗಳನ್ನು ಭೌತವಿಜ್ಞಾನದ ಪ್ರಗತಿಯಲ್ಲಿ ಕಾಣಬಹುದು. ಆದರೆ ಅದು ಅಲ್ಲಿಗೆ ನಿಲ್ಲುತ್ತದೆ. ಮಾನಸಿಕ ತರ್ಕ ಗರ್ವದಿಂದ, ತನ್ನ ತಿರಸ್ಕರಿಸುವ ಹಕ್ಕಿನಿಂದ, ತನ್ನ ವಿಚಾರಣೆಯ ಸಾಮಾನ್ಯ ನಿಯಮಗಳಿಗೆ ಶರಣಾಗದ ಎಲ್ಲದರ ಪ್ರವೇಶವನ್ನು ನಿರಾಕರಿಸುತ್ತದೆ. ಲೌಕಿಕ ತಿಳುವಳಿಕೆಗಳ ಸಾಧಾರಣ ವ್ಯಾಪ್ತಿಯನ್ನು ಮೀರಿದ ಅಸ್ತಿತ್ವದ ವಲಯಗಳಿದ್ದು, ಅವುಗಳ ಮಾಹಿತಿಯನುಸಾರ ಜ್ಞಾನವು ಸ್ಥಾಪಿಸಲ್ಪಟ್ಟಿರುತ್ತದೆ ಎಂಬುದನ್ನು ಗುರುತಿಸಲು ಅದು ನಿರಾಕರಿಸುತ್ತದೆ. ಹಾಗಿದ್ದರೂ ವಿಕಸಿತವಾಗುತ್ತಿರುವ ಚೈತನ್ಯವು ಎಲ್ಲ ಬಂಧನಗಳನ್ನು ಭೇದಿಸಿ ಪ್ರವಾಹದೋಪಾದಿಯಲ್ಲಿ ಹೊರನುಗ್ಗಿ ಅಧಿಕಸಂಖ್ಯೆಯಲ್ಲಿ ಇಂದ್ರಿಯಗೋಚರವಾದಾಗ ಅದರ ಎದುರು ಮಾನವನ ತರ್ಕಕ್ಕೆ ಸಂಪೂರ್ಣವಾಗಿ ದಿಗ್ಭ್ರಮೆ ಹಿಡಿಯುತ್ತದೆ.

ಮಾನವನ ಜೀವನ ಮತ್ತವನ ಸಮಾಜದ ನಿಜವಾದ ಕಾನೂನು ಮತ್ತು ಗುರಿಗಳ ಸರಿಯಾದ ಮಾದರಿಯ ಮಾರ್ಗದರ್ಶನಕ್ಕಾಗಿ ಮನಸ್ಸಿನ ಮೇಲೆ ಸ್ಥೂಲ ಮತ್ತು ಸೂಕ್ಷ್ಮ ಮಟ್ಟದ ಅಸ್ತಿತ್ವದಲ್ಲಿ ಬಲವಂತ ಮಾಡಲಾಗುವುದು, ಕಾಲ್ಪನಿಕ ಯುಗದ (Subjective Age) ಆರಂಭವಾಗಿರುತ್ತದೆ. ಭೌತಿಕ ವಸ್ತುವಿನ ಆಧಿಪತ್ಯದಿಂದ ವಿಚಾರಣೆಯು ಸ್ಥಳಾಂತರಗೊಂಡು ಜೀವಶಕ್ತಿಗಳ ಕಾರ್ಯಕ್ಷೇತ್ರಕ್ಕೆ ಬಂದಿರುತ್ತದೆ ಮತ್ತು ಸಚೇತನಗೊಳಿಸುವ ಕಾಲ ನಿಯಮಗಳಿಗಾಗಿ, ಜೀವಬಲ, ಜೀವನದ ಸಂಕಲ್ಪ, ಏಳಿಗೆಗಳ ಸತ್ಯವನ್ನು ತಿಳಿಯುವ ಕೀಲಿಕೈಯನ್ನು ಹುಡುಕುವ ಸಲುವಾಗಿ ಸ್ಥಳಾಂತರಗೊಂಡಿರುತ್ತದೆ. ಮಾನವನಲ್ಲಿ ಹೆಚ್ಚಿನ ವಿಶಾಲ ವಲಯಗಳಲ್ಲಿ ನಡೆಯುವ ಹೊಸ ಸಂಶೋಧನೆಗಳು ಇವುಗಳಿಂದ ಆಚ್ಛಾದನಗೊಂಡಿದ್ದು ಪ್ರಜ್ಞೆಯ ಚಲನೆಗಳಿಂದ ಆಳಲ್ಪಟ್ಟಿದ್ದು, ಸಾಮಾನ್ಯ ಮನಸ್ಸಿಗೆ ಕೇವಲ ಬಾಹ್ಯರೂಪವಷ್ಟೇ– ಶ್ರೇಷ್ಠವಾದಂತಹದು ತಿಳಿದಿರುತ್ತದೆ. ಮನಃಶಾಸ್ತ್ರ ಮತ್ತು ಅತೀಂದ್ರಿಯ ಮನಃಶಾಸ್ತ್ರ

ವಿಜ್ಞಾನಗಳು ಅಭಿವೃದ್ಧಿಗೊಂಡಿದ್ದು ಹೆಚ್ಚಾಗಿ ಕಾಲ್ಪನಿಕ ಪಥಗಳಲ್ಲಿ ವಿಚಾರಣೆಯನ್ನು ನಡೆಸಲಾಗುತ್ತದೆ. ಹೆಚ್ಚು ಲಾಭಗಳನ್ನು ಮಾಡಿಕೊಳ್ಳಲಾಗುತ್ತದೆ. ಹೊಸ ಜ್ಞಾನವನ್ನು ಸಂಗ್ರಹಿಸಲಾಗುತ್ತದೆ. ಆದರೆ ಮಾನವನ ಮತ್ತು ಸಮಾಜದ ಸಮಗ್ರ ಮತ್ತು ಸಾಮರಸ್ಯದಿಂದ ಕೂಡಿದ ಅಭಿವೃದ್ಧಿಯ ಕೀಲಿಕೈ ಇನ್ನೂ ಸಿಕ್ಕಿರುವುದಿಲ್ಲ.

ಆದಾಗ್ಯೂ ಒಲವು ಮಾತ್ರ ಸ್ಪಷ್ಟ. ಸಾಕ್ಷಾತ್ಕಾರದ ಚೈತನ್ಯವಾದ ಜೀವಾತ್ಮದ ಕೇಂದ್ರದತ್ತಲೇ ಅದರ ಗುರಿ. ಭೌತಿಕ ಅಥವಾ ಅತಿ ಮಹತ್ವದ ಅಥವಾ ಮನೋವೈಜ್ಞಾನಿಕ ಬಾಳಿಗೆ ಗುರುತಿಸುವಿಕೆಯಲ್ಲಿ ಹೆಚ್ಚು ಕಂಡುಬಂದರೂ ಮಾನವೀಯತೆಯನ್ನು ಎದುರಿಸುವ ಸಂಕೀರ್ಣ ಪರಿಸ್ಥಿತಿಯಿಂದ ಯಾವುದೇ ಪರಿಹಾರ ಕಂಡುಬರುವುದಿಲ್ಲ. ವಿರೋಧಾತ್ಮಕವಾದವುಗಳನ್ನು ಕರಗಿಸಿ, ಸ್ವಾತಂತ್ರ್ಯ, ಒಗ್ಗಟ್ಟು ಮತ್ತು ಪರಿಪೂರ್ಣತೆಯ ನಿಯಮಿತ ಗುರಿಯೆಡೆಗೆ ಸಾಗಲು ಇರುವ ಒಂದೇ ಪರಿಹಾರವನ್ನು ಆತ್ಮದ ಮಟ್ಟದಲ್ಲೇ ಕಂಡುಕೊಳ್ಳಬೇಕು. ಆಧ್ಯಾತ್ಮಿಕ ಪ್ರಜ್ಞೆ ಜಾಗೃತಿಯ ಕಾಲಗತಿಯಲ್ಲಿ ಮಾನವನಿಗೆ ತನ್ನವರೊಂದಿಗಿನ ಏಕೀಭಾವಕ್ಕಾಗಿ ವಿಶ್ವವ್ಯಾಪಿಯಾದ ದೈವತ್ವವು ಒಂದು ಸಾಮಾನ್ಯವಾದ ಸಾಧನವಾಗಿರುತ್ತದೆ. ಅದೇ ಮುಂಬರುವ ಆಧ್ಯಾತ್ಮಿಕ ಯುಗದ ವಾಸ್ತವವಾಗಿದ್ದು, ಪ್ರಸ್ತುತ ಕಾಲ್ಪನಿಕ ಯುಗದಲ್ಲಿ ಕಂಡುಬಂದ ಎಲ್ಲಾ ದಾರಿಗಳೂ ಆಧ್ಯಾತ್ಮಿಕ ಯುಗದ ಒಂದು ಬಿಂದುವಿನಲ್ಲಿ ಕೂಡುತ್ತವೆ.

ನಿಜಕ್ಕೂ ಆಧ್ಯಾತ್ಮಿಕ ಪ್ರಜ್ಞೆಯ ವಾಸ್ತವಾಂಶ ಎಂದಿಗೂ ಸಂಶಯಕ್ಕೆ ತೆರೆದುಕೊಂಡಿಲ್ಲ. ಆಧ್ಯಾತ್ಮಿಕ ಸಾಧನೆಯಿಂದ ತಮ್ಮ ಅಸ್ತಿತ್ವದ ಸಮಸ್ಯೆಗಳನ್ನು ತಾವೇ ನಿವಾರಿಸಿಕೊಂಡ ಜನರ ಉತ್ತೇಕ್ಷೆಯ ಅಂಕಿ ಅಂಶಗಳು ಎಲ್ಲಾ ಕಾಲದಲ್ಲೂ ಎಲ್ಲಾ ದೇಶಗಳಲ್ಲೂ ಇದೆ. ಈಗ ಭೂಮಿತಾಯಿಗೆ ಮನುಷ್ಯನ ದುಡಿಮೆಯಿಂದ ಅವಶ್ಯವಾಗಿರುವುದು, ನಿರೀಕ್ಷಿಸಿರುವುದು ಏನೆಂದರೆ ಮಾನವಕುಲದ ಸಮಾನತೆಗಾಗಿ ಆಧ್ಯಾತ್ಮಿಕ ಜೀವನದ ಸಾಧ್ಯತೆಗಳ ಕುರಿತು ಕ್ರಮ ಕೈಗೊಳ್ಳುವುದಾಗಿದೆ. ಲೌಕಿಕ ಮಹತ್ವದ ನಿಯಮಗಳಿಂದ ಸುತ್ತುವರಿಯಲ್ಪಟ್ಟು ಪರಿಮಿತಿಯೊಳಗೆ ಕಾರ್ಯ ನಿರ್ವಹಿಸುತ್ತಿರುವ ಸಾಮಾನ್ಯ ಮಾನಸಿಕ ಪ್ರಜ್ಞೆಯನ್ನು ಉಚ್ಚ ಮಟ್ಟಕ್ಕೇರಿಸುವುದು ಜರೂರಾದ ಕೆಲಸವೆಂದು ಭಾವಿಸಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಈ ಕಾರ್ಯವನ್ನು ಪ್ರಾರಂಭಿಸಿ ಮುಂದಾಳತ್ವವನ್ನು ವಹಿಸಿಕೊಳ್ಳಬೇಕು ಹಾಗೂ ಪೂರ್ಣ ಜೀವನದಲ್ಲಿ ಆಧ್ಯಾತ್ಮಿಕ ಪ್ರಜ್ಞೆಯು ಸ್ವಾತಂತ್ರ್ಯವಾದಾಗ ಆತ್ಮ, ಪ್ರೇಮ, ಸೌಂದರ್ಯ, ಸಾಮರಸ್ಯ, ಸಂಕಲ್ಪ ಮತ್ತು ಜ್ಞಾನ ಇವುಗಳ ಸ್ವಾಭಾವಿಕ ಶಕ್ತಿಗಳು ಸ್ವಯಂ ಸ್ಫೂರ್ತಿಯಿಂದ ಸಾಕ್ಷಾತ್ಕಾರಗೊಳ್ಳುತ್ತವೆ.

ಪ್ರಯತ್ನವು ಯಶಸ್ವಿಯಾಗುವ ಪರಿಸರವು ಒಂದು ಸಮುದಾಯವಾಗಿದ್ದು, ಅಲ್ಲಿ ವ್ಯಕ್ತಿಯೊಬ್ಬನಿಗೆ ಅದರ ಆಧ್ಯಾತ್ಮಿಕ ವ್ಯಕ್ತಿತ್ವವು ಧಾರಾಳವಾಗಿ ಅಭಿವೃದ್ಧಿಯಾಗಲು



ಸಾಕಷ್ಟು ಸೌಲಭ್ಯಗಳು ದೊರೆಯುತ್ತಿರುತ್ತದೆ. ಹೊರಗಿನಿಂದ ಹೇರಲ್ಪಡುವ ಯಾವುದೇ ನಿಯಮ ನಿಬಂಧನೆಗಳ ಅಡ್ಡಿ ಆತಂಕಗಳಿಲ್ಲದೆ, ತಾನು ಗಳಿಸಿಕೊಂಡ ಜ್ಞಾನ ಮತ್ತು ಶಕ್ತಿಗಳ ಸಮಗ್ರತೆಯ ಸಮೃದ್ಧತೆಯನ್ನು ತನ್ನ ಸಹೋದರರಿಗೂ ಧಾರೆ ಎರೆಯುತ್ತಾನೆ. ನೈತಿಕ ಶಕ್ತಿ ಹೆಚ್ಚಿದಷ್ಟು ಅವನಿಗೆ ತನ್ನನ್ನು ತಾನೇ ಚಟುವಟಿಕೆ ಯುಳ್ಳವನನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗಿ, ತನ್ನ ಸುತ್ತಲಿನ ಪರಿಸರವನ್ನು ಹೆಚ್ಚಿನ ರೀತಿಯಲ್ಲಿ ಮಾದರಿಯಾಗಿ ರೂಪಿಸಲು ಸಾಧ್ಯವಾಗುತ್ತದೆ. ಇಲ್ಲಿನ ಬೋಧನೆಗಳ ಗುರಿಯೂ ಅತ್ಯುನ್ನತ ಮೂಲಭೂತ ಜ್ಞಾನಚಿತ್ತಗಳನ್ನು ಹೊಂದುವುದಕ್ಕೆ ಕಮ್ಮಿ ಇಲ್ಲದ, ವೈಯಕ್ತಿಕ ವಿಕಸನವೇ ಗುರಿಯಾಗಿದ್ದು, ಕಟ್ಟಕಡೆಗೆ, ಒಂದು ಜನಾಂಗಕ್ಕೆ ದೈವತ್ವದ ಪರಿಪೂರ್ಣತೆಯು ಮನದಟ್ಟಾಗುತ್ತದೆ.

* * * *

## ೫. ಮನುಕುಲದ ಒಗ್ಗಟ್ಟಿನ ಆದರ್ಶ

ವ್ಯಕ್ತಿಯೊಬ್ಬನ ಪ್ರಶ್ನೆ ಅವನ ಸಮಾಜದ ಪ್ರಶ್ನೆಯೊಂದಿಗೆ ಥಳುಕು ಹಾಕಿಕೊಂಡಿದ್ದು, ಅದು ಸಮಾಜದ ಹಾಗೂ ಸಮಾಜಗಳ ಸಮುದಾಯದ– ಸಂಪೂರ್ಣ ಮಾನವ ಜನಾಂಗದ ದೊಡ್ಡ ಸಮಸ್ಯೆಯಾಗಿದೆ. ಇಲ್ಲಿಯೂ ಸಹ ಸಮಸ್ಯೆಯ ಪರಿಹಾರವನ್ನು ಮಾನವ, ಮತ್ತವನ ಪರಿಸರದ ಸಮಾಜದ ಅಧಿಕಾರಗಳು ಮತ್ತು ಹಕ್ಕುಗಳು ಒಂದುಗೂಡಿರುವ ರೀತಿಯಲ್ಲಿಯೇ ಆಲೋಚಿಸಬೇಕಾಗುತ್ತದೆ. ಇದಕ್ಕೋಸ್ಕರ ಶ್ರೀ ಅರವಿಂದೋರವರು ಗಮನಿಸಿರುವಂತೆ ಮೂಲಭೂತವಾಗಿ ಪರಿಣಾಮವು ಒಂದೇ ಆಗಿರುತ್ತದೆ. ದೈವಿಕ ವಾಸ್ತವಿಕತೆಯಾದ ಚೈತನ್ಯವು ಒಂದೇ ಆಗಿದ್ದು ಅದು ಏಕಾಂಗಿಯಾಗಿ ಮಾನವನಲ್ಲಿ ತನ್ನಷ್ಟಕ್ಕೆ ತಾನು ಸಾಕ್ಷಾತ್ಕಾರಗೊಂಡು ಮಾನವ ಜನಾಂಗದಲ್ಲಿ ಹೆಚ್ಚುತ್ತಾ ಹೋಗುತ್ತದೆ. ಸಾಂಘಿಕವಾಗಿ ಪ್ರಕಟಗೊಳ್ಳುವ ಇದರಲ್ಲಿ ಸಮಾಜವು ಮಧ್ಯಮ ಅವಧಿಯದಾಗಿದೆ. ಗುಂಪಿನಲ್ಲಿ ಅಂತರ್ಗಾಮಿಯಾಗಿ ಒಂದು ಏಕೀಭಾವವು ಸಾದ್ಯಂತವಾಗಿ ಇರುತ್ತದೆ. ಈ ಅಸ್ತಿತ್ವದ ಸತ್ಯಕ್ಕೆ ಎಚ್ಚರಗೊಳ್ಳಲು ಮತ್ತು ವ್ಯಕ್ತಿಯೊಬ್ಬ ತನ್ನ ಉಳಿದ ಸಹಚರರೊಂದಿಗಿನ ಮೂಲಭೂತ ಒಗ್ಗಟ್ಟನ್ನು ಅರಿತುಕೊಳ್ಳಲು ಸಾಮಾನ್ಯ ಕಾರಂಜಿಯಲ್ಲಿ ನೀರು ಚಿಮ್ಮಿದಂತೆ ಕಾಣುವುದು ಅಥವಾ ಕಲ್ಪಿಸಿಕೊಳ್ಳುವುದು ಸಮಸ್ಯೆಯ ಆಮೂಲಾಗ್ರ ನಿವಾರಣೆಗೆ ದಾರಿ.

ಸಂಪೂರ್ಣ ವಿಕಸನದ ಈ ಪ್ರಯತ್ನದಲ್ಲಿ ಒಗ್ಗಟ್ಟೆ ತಳಪಾಯವೂ ಮತ್ತು ಒಗ್ಗಟ್ಟೆ ಶಿಖರವೂ ಆಗಿರುತ್ತದೆ. ಪ್ರಕೃತಿಯು ಭೌತದ್ರವ್ಯದ ದೃಢವಾದ ಒಗ್ಗಟ್ಟಿನಿಂದ ಪ್ರಾರಂಭವಾಗುತ್ತದೆ; ಮೂಲದಲ್ಲಿ ಎಲ್ಲವೂ ವಾಸ್ತವಿಕವಾಗಿ ಒಂದೇ. ಬದುಕಿನ ಮೂಲಧಾತು ಸ್ಫೋಟಗೊಳ್ಳುವುದರಿಂದಷ್ಟೆ ಈ ಒಗ್ಗಟ್ಟು ಸಹಜವಾಗಿಯೇ ಭಗ್ನವಾಗಿ ವೈವಿಧ್ಯಮಯವಾದ ಆಕೃತಿಗಳುಂಟಾಗಿ ನಾನಾ ವಿಧವಾಗಿ ಹೆಚ್ಚುತ್ತಾ ಹೋಗಿ ಸ್ಪಷ್ಟ ಪ್ರಜ್ಞೆ ಅಥವಾ ಅರ್ಧ ಪ್ರಜ್ಞೆಯ ಮೂಲತತ್ವ ಅಥವಾ ಪ್ರಭಾವ ಕಂಡು ಬರುವವರೆಗೂ, ಮನಸ್ಸಿನ ಮೂಲಕ ಪ್ರಕೃತಿಯು ನಿಧಾನವಾಗಿ ಒಗ್ಗಟ್ಟಿನ ಸತ್ಯವನ್ನು ನಾನಾ ವಿಧದ ವಿಕಸನಗಳ ಮಧ್ಯೆ ಹಿಂದಕ್ಕೆ ಕೊಡಲು ಪ್ರಯತ್ನಿಸುತ್ತದೆ. ಪ್ರಾಣಿಗಳ ಮಟ್ಟದಲ್ಲಿಯೂ ಸಹ ಇದ್ದು, ಬಲವನ್ನು ಒಟ್ಟುಗೂಡಿಸಿ ಕಾರ್ಯ ನಿರ್ವಹಿಸಲು ತೊಡಗುತ್ತದೆ. ಈ ಜೀವತಂತುಗಳು ತಮ್ಮ ತಮ್ಮ ನಮೂನೆಯಲ್ಲಿ ಒಂದುಗೂಡಿ, ಒಟ್ಟಿಗೆ ಇರಲು ಹವಣಿಸುತ್ತವೆ ಮತ್ತು ಜೇನುಗೂಡಿನ ನಿಯಮ ಇಲ್ಲಿ ಪ್ರಾಧಾನ್ಯತೆಯನ್ನು



ಪಡೆದುಕೊಳ್ಳುತ್ತದೆ. ಮಾನವನ ಆಗಮನದೊಂದಿಗೆ ಈ ಧೋರಣೆಯು ವೇಗ ಪಡೆದುಕೊಳ್ಳುತ್ತದೆ– ಪ್ರಜ್ಞೆಯ ವಿಕಸನವು ಪ್ರಾರಂಭವಾಗುತ್ತದೆ.

ಮಾನವ ಜನಾಂಗದಲ್ಲಿ ಮೊಟ್ಟ ಮೊದಲಿಗೆ ಸಮಷ್ಟಿಯ ಘಟಕವೆಂದರೆ ಕುಟುಂಬ. ಈ ಘಟಕದಿಂದ ಪ್ರಕೃತಿಯು ಹೆಚ್ಚು ಹೆಚ್ಚು ದೊಡ್ಡದಾದ ವರ್ತುಲಗಳನ್ನು ಜೋಡಿಸಲು ಪ್ರಾರಂಭಿಸಿತು; ಈ ಒಟ್ಟುಗೂಡಿಸುವ ಕ್ರಿಯೆಗೆ ಭದ್ರತೆಯ ಅನಿವಾರ್ಯತೆ, ಉನ್ನತಿ ಮತ್ತು ಬೆಳವಣಿಗೆಯ ಪ್ರೇರೇಪಣೆ ಈ ಹಂತದಲ್ಲಿ ಪ್ರಕೃತಿಯ ವಿಕಸನದ ಅಭಿವೃದ್ಧಿಯ ಪ್ರಚೋದನೆಗೆ ಕಾರಣವಾಯಿತು. ಕುಟುಂಬದಿಂದ ಗ್ರಾಮ; ಗ್ರಾಮದಿಂದ ಪಂಗಡ, ಬುಡಕಟ್ಟು, ಸಮಾಜಗಳು ಒಂದು ನಿಶ್ಚಿತವಾದ ಆಕಾರವನ್ನು ಪಡೆದು, ಪ್ರತಿಯೊಂದು ತನ್ನದೇ ಸ್ವಂತ ಬದುಕುವ ದಾರಿಯನ್ನೂ, ತನ್ನದೇ ಸ್ವಂತ ಸಂಪ್ರದಾಯಗಳನ್ನು ಮತ್ತು ನಂಬಿಕೆ, ವಿಶ್ವಾಸಗಳನ್ನೂ ರೂಢಿಸಿಕೊಳ್ಳುತ್ತವೆ. ಪ್ರತಿ ಜನಾಂಗವೂ ತನ್ನದೇ ಆದ ಸ್ವಂತ ರಾಜಕೀಯ ಮತ್ತು ಸಾಮಾಜಿಕ ಜೀವನವನ್ನು ರೂಪಿಸಿಕೊಳ್ಳುತ್ತದೆ; ನಗರ, ರಾಜ್ಯಗಳು, ಸಂಸ್ಥಾನಗಳು, ದೇಶಗಳು ಕ್ರಮೇಣವಾಗಿ ಅಸ್ತಿತ್ವಕ್ಕೆ ಬಂದವು. ಈ ಜೀವಂತ ಘಟಕಗಳು ಜೊತೆಗೂಡಿ ಕೆಲಸ ಮಾಡುತ್ತಾ ಅಥವಾ ಕಾದಾಡುತ್ತಾ ಪರಸ್ಪರ ಘರ್ಷಣೆ ಉಂಟಾಗಿ, ಪರಸ್ಪರರ ಬಾಳಿನಲ್ಲಿ ಪ್ರವೇಶಿಸಿ ಅಂತಿಮವಾಗಿ ಕೂಡಿಕೊಂಡು ಇನ್ನೂ ದೊಡ್ಡದಾದ ರಾಜಕೀಯ ಮತ್ತು ಆಡಳಿತಾತ್ಮಕ ಘಟಕಗಳಾಗಿ ರೂಪುಗೊಳ್ಳುತ್ತವೆ. ಈ ರೀತಿಯಾಗಿ ಪ್ರಕೃತಿಯಲ್ಲಿ ಇಲ್ಲಿಯವರೆಗೆ ಅತ್ಯಂತ ಬಲಿಷ್ಠ ಸಮುದಾಯ ಘಟಕವಾದ ರಾಷ್ಟ್ರದ ನಿರ್ಮಾಣವಾಗುತ್ತದೆ. ರಾಷ್ಟ್ರವು ವ್ಯವಸ್ಥಿತವಾಗಿ ಅಸ್ತಿತ್ವವುಳ್ಳದ್ದಾಗಿರುತ್ತದೆ. ಅದು ತನ್ನಲ್ಲಿರುವ ಪ್ರಜೆಗಳ ಸಾಮೂಹಿಕ ಅಹಂ ಅನ್ನು ಪ್ರತಿನಿಧಿಸುತ್ತದೆ. ಸಾಮಾನ್ಯ ಸಮಾಜದ ವಿಕಸನದ ಪ್ರಯತ್ನದಲ್ಲಿ ಇದೊಂದು ಮೈಲಿಗಲ್ಲಾಗಿದ್ದು, ಒಂದು ಕ್ರಮಕ್ಕೆ ಬರಲು ವ್ಯಕ್ತಿಯು ತನ್ನ ಸ್ವಂತ ಬೆಳವಣಿಗೆಯಷ್ಟೇ ಅಲ್ಲದೇ, ಸಮಾಜದ ಬೆಳವಣಿಗೆಗೂ ತನ್ನ ಪಾಲನ್ನು ಕಾಣಿಕೆಯಾಗಿ ನೀಡಲು ಸಂದರ್ಭವೊಂದನ್ನು ಕಂಡುಕೊಳ್ಳಲು ಉದ್ದೇಶಿಸಿ, ಅಂತರ್ಗತವಾಗಿದ್ದು, ಸಾಕ್ಷಾತ್ಕಾರಗೊಳ್ಳುವ ದೇವರ ವಿಶಿಷ್ಟ ಗುಣವನ್ನು ಸೂತ್ರರೂಪದಲ್ಲಿ ಇಟ್ಟುಕೊಂಡು ಆ ನಿರ್ದಿಷ್ಟ ಸಾಮಾಜಿಕ ಆಕೃತಿಯನ್ನು ವ್ಯಕ್ತಗೊಳ್ಳಲು ಕೋರುತ್ತಾನೆ.

ಎಷ್ಟೇ ಆದರೂ ಶ್ರೀ ಅರವಿಂದರು ಬೊಟ್ಟು ಮಾಡಿ ತೋರಿಸಿರುವಂತೆ ರಾಷ್ಟ್ರವು, ವಿಕಾಸಕ್ಕೆ ಸಂಬಂಧಿಸಿದ ಪ್ರಗತಿಯ ಪಂದ್ಯಾಟದಲ್ಲಿ ಅಗ್ರಸ್ಥಾನದಲ್ಲಿರುವುದಿಲ್ಲ; ಅದು ಮಧ್ಯಮ ಹಂತದಲ್ಲಿದ್ದು, ವ್ಯಕ್ತಿಯ ಮತ್ತು ಸಮುದಾಯದ ವಿಕಸನದ ಲಾಭಗಳನ್ನು ದೃಢಗೊಳಿಸಲು ಮತ್ತು ಸುಸಂಘಟಿತವಾಗಿಸಲು ಇರುವ ಅತಿ ಪ್ರಮುಖವಾದ ಕೂಡುವ ಸಂಧಿ ಸ್ಥಳವಾಗಿದ್ದು, ಇದು ಅದರ ಅತಿ ಸಮೀಪದ ಅಂಗ. ಇನ್ನೂ ದೊಡ್ಡದಾದ ಕದಲಿಕೆಯೊಂದು ಪ್ರಗತಿಯಲ್ಲಿರುತ್ತದೆ. ರಾಷ್ಟ್ರದ

ವಿವಿಧ ಬಗೆಯ ಘಟಕಗಳನ್ನೆಲ್ಲಾ ಒಂದುಗೂಡಿಸಿ ವ್ಯವಸ್ಥಿತವಾಗಿ, ಅಖಂಡವಾಗಿ ಬೆಸೆಯುವುದು ಅದರ ಗುರಿ. ಪ್ರಕೃತಿ ಮಾತೆಯು ಈ ಉದ್ದೇಶಕ್ಕಾಗಿ ವಿವಿಧ ರೀತಿಯಲ್ಲಿ ಪ್ರಯೋಗಗಳನ್ನು ನಡೆಸುತ್ತಿರುತ್ತಾಳೆ; ಅವಳ ಹಲವಾರು ಶಕ್ತಿಗಳನ್ನು ಈ ಕಾರ್ಯಕ್ಕಾಗಿ ಬಿಡುಗಡೆಗೊಳಿಸಿರುವಳು, ಅವು ರಾಷ್ಟ್ರಗಳ ನಡುವಿನ ಗಡಿಯನ್ನು ದಾಟಿ ಎಲ್ಲ ಮನುಷ್ಯರ ಏಕತೆಗೆ ಪ್ರಾಮುಖ್ಯತೆಯನ್ನು ನೀಡುತ್ತವೆ. ಮಾನವನ ವಿಚಾರಲಹರಿಯು ರಾಷ್ಟ್ರೀಯತೆಯ ಅಡೆತಡೆಗಳನ್ನು ದಾಟಿ ಉಚ್ಚ ಮಟ್ಟಕ್ಕೇರಿ ರಾಷ್ಟ್ರಾತೀತವಾಗಿ ಬೆಳೆಯುತ್ತಾ ಹೋದಾಗ ಮಾತ್ರ ಪ್ರತಿಯೊಬ್ಬ ಮನುಷ್ಯನೂ ಪರಿಪೂರ್ಣವಾಗಿ ದೋಷವಿಲ್ಲದಂತಹ ಸಾಮರಸ್ಯ ಮತ್ತು ಶಾಂತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಬಹುದು. ವಾಸ್ತವವಾಗಿ, ಸಮಸ್ಯೆಯೆಂದರೆ ವಿಶ್ವದ ಐಕ್ಯತೆಗಾಗಿ ಒಂದು ಕ್ರಮವನ್ನು ಕಂಡುಕೊಳ್ಳಬೇಕಾಗಿದ್ದು, ಅದು ಎಲ್ಲಾ ಅಂಗ ಘಟಕಗಳ ಪ್ರವೃತ್ತಿಗಳೂ ಸುಸೂತ್ರವಾಗಿ ಅನ್ಯೋನ್ಯತೆಯಿಂದ ಒಟ್ಟಿಗೆ ಸೇರಿ, ಸಾಮುದಾಯಿಕ ಪ್ರಗತಿಯನ್ನು ಸಮನಾಗಿ ಹಂಚಿಕೊಳ್ಳುವುದಲ್ಲದೆ ಅದೇ ಸಮಯದಲ್ಲಿ ಜೀವನ ಮತ್ತು ಆಲೋಚನೆಯ ವಿಶಿಷ್ಟ ದಾರಿಗಳ ನಿರ್ಬಂಧವಿಲ್ಲದ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳನ್ನು ಬಿಟ್ಟು ನಾನಾ ಬಗೆಯ ಪ್ರಕೃತಿಯ ಬೇಡಿಕೆಗಳಿಗೆ ಉತ್ತರಗಳಂತೆ ಕಂಡುಬರುತ್ತದೆ.

ಈ ರಾಷ್ಟ್ರಾತೀತ ಮನೋಭಾವನೆಯನ್ನು ಒಂದುಗೂಡಿಸಲು ನಾನಾ ವಿಧದಲ್ಲಿ ಪ್ರಾಯೋಗಿಕವಾಗಿ ಪ್ರಯತ್ನಿಸಲಾಗಿದೆ. ಉದಾಹರಣೆಗೆ ಸಾಮ್ರಾಜ್ಯ, ಪ್ರಜಾಪ್ರಭುತ್ವ, ರಾಜ್ಯಗಳ ಒಕ್ಕೂಟ, ರಾಷ್ಟ್ರಗಳ ಒಕ್ಕೂಟ, ಸಮಾನ ಮನಸ್ಕ ಜನರ ಒಕ್ಕೂಟಗಳು. ಈ ಪ್ರಯತ್ನಗಳಿಗೆಲ್ಲಾ ಉಜ್ವಲವಾದ ಫಲಿತಾಂಶಗಳು ಬರದಿದ್ದರೆ ಅದಕ್ಕೆ ಈ ಮನೋಭಾವನೆಯು ಅಸತ್ಯವೆಂದಾಗಲೀ ಅಥವಾ ದುರ್ಬಲವೆಂದಾಗಲೀ ಅರ್ಥವಲ್ಲ. ವೈಯಕ್ತಿಕ ಮತ್ತು ರಾಷ್ಟ್ರೀಯ ಅಹಂಗಳಿಂದ ಇನ್ನೂ ಸಹ ಆಳಲ್ಪಡುತ್ತಿರುವ ಅನುಸಂಧಾನದಲ್ಲಿ ಪ್ರಧಾನವಾದ ನಿಷ್ಕಾಪಟ್ಯ ಅಥವಾ ಶುದ್ಧಭಾವದ ಕೊರತೆಯೇ ಕಾರಣ. ಮೇಲಾಗಿ ಈ ಸಮಸ್ಯೆಯನ್ನು ಬಾಹ್ಯವಾಗಿ ಮಾತ್ರ ನೋಡಲಾಗಿರುತ್ತದೆ. ಏಕೀಕರಣ ಮತ್ತು ಅನುಕಲನಕ್ಕಾಗಿ ಅಭಿವೃದ್ಧಿಗೊಳಿಸಿ ಅನ್ವಯಿಸಿದ ಹೆಚ್ಚಿನೆಲ್ಲಾ ಕ್ರಮಗಳಿಂದ ವಿಶ್ವದ ಬಾಹ್ಯ ಭಾಗಗಳನ್ನಷ್ಟೆ ನಮಗೆ ನೋಡಲು ಸಾಧ್ಯವಾಗಿರುತ್ತದೆ. ಅವುಗಳಲ್ಲಾ ಅತ್ಯವಶ್ಯಕ. ಆದರೆ ಅವು ಅಲ್ಲಿಂದ ಮುಂದಕ್ಕೆ ಹೋಗಲಾರವು. ಈ ಪ್ರಯತ್ನಕ್ಕೆ ಜೀವ ಚೈತನ್ಯವೆಂಬ ಪ್ರಾಣವಾಯುವನ್ನು ನೀಡುವುದು ಅಗತ್ಯ. ಸಂಘಟನೆಯನ್ನು ಒಂದು ಜೀವಂತ ರಚನೆಯನ್ನಾಗಿ ಜೀವ ತುಂಬುವುದು ಅಗತ್ಯ. ದೇಹಕ್ಕೆ ಆತ್ಮವನ್ನು ತುಂಬಬೇಕು ಮತ್ತು ಇದು ಸಾಧ್ಯವಾಗುವುದು ಆತ್ಮದ ಮಟ್ಟದಲ್ಲಿ ಮಾತ್ರ ಎನ್ನುತ್ತಾರೆ ಶ್ರೀ ಅರವಿಂದೋರವರು. ಮನುಷ್ಯರು ಮತ್ತು ರಾಷ್ಟ್ರಗಳು ಹೃದಯಪೂರ್ವಕವಾಗಿ ಒಪ್ಪಿಕೊಳ್ಳುವುದಷ್ಟೇ ಅಲ್ಲದೆ, ಪ್ರತಿಯೊಂದು ಘಟಕ ಅಥವಾ



ಹಲವಾರು ಘಟಕಗಳ ಹಕ್ಕನ್ನು ಪರಿಣಾಮಕಾರಿಯಾಗಿ ಗುರುತಿಸಬೇಕು. ಅದರ ಸ್ವಾತಂತ್ರ್ಯದ ಹಕ್ಕಿನಿಂದ ತನ್ನಷ್ಟಕ್ಕೆ ತಾನೇ ನೈಸರ್ಗಿಕವಾಗಿ ಅಭಿವೃದ್ಧಿ ಯಾಗುವುದಷ್ಟೇ ಅಲ್ಲದೆ, ಇತರರ ಸಮಾನ ಹಕ್ಕುಗಳೂ ಸಹ ಅದೇ ರೀತಿಯಾಗಿ ಅಭಿವೃದ್ಧಿಯಾಗುವುದನ್ನು ಸಹ ಬಯಸಬೇಕು; ಮಾನವೀಯತೆಯ ಮನಸ್ಸು ತನ್ನ ಸ್ವಂತ ಪ್ರಜ್ಞೆಯ ಆಳದಲ್ಲಿ ಎಚ್ಚೆತ್ತು ಇತರರೊಂದಿಗಿನ ತನ್ನ ಏಕತೆಯನ್ನು ಇಂದ್ರಿಯದಿಂದ ಸ್ಪಷ್ಟವಾಗಿ ಗ್ರಹಿಸಿಕೊಂಡಾಗ ಮಾತ್ರ ಇದು ಸಾಧ್ಯ. ಇತರರೊಂದಿಗಿನ ಅದರ ಜನಸಾಮಾನ್ಯರ ಉದ್ದೇಶ, ಜನಸಾಮಾನ್ಯರ ಭಾವನೆ ಮತ್ತು ಯೋಚನೆಗಳು ಮತ್ತು ಕ್ರಿಯೆಗಳನ್ನು ಮಾನವೀಯತೆಯ ಆಧ್ಯಾತ್ಮಿಕ ಧರ್ಮ ಎಂದು ಒಂದೇ ವಾಕ್ಯದಲ್ಲಿ ಬಣ್ಣಿಸಬಹುದು.

ವಾಸ್ತವವಾಗಿ ಹೇಳುವುದಾದರೆ ಈ ಮಾನವ ಜನಾಂಗದ ಮೂಲಭೂತವಾದ ಏಕತೆಯೆಂಬ ಸತ್ಯವು ಹೊಸ ಕಲ್ಪನೆ ಅಲ್ಲದೇ ಅಲ್ಲ. ನಿಜ ಸಂಗತಿಯೆಂದರೆ, ಸಹಸ್ರಾರು ವರ್ಷಗಳ ಹಿಂದಿನ ಆರ್ಯ ಋಷಿಗಳ ಪ್ರಾರ್ಥನೆಯಲ್ಲಿಯೆ ಇದು ತನ್ನ ಧ್ವನಿಯನ್ನು ಕಂಡುಕೊಂಡಿದೆ:

"ಒಂದಾಗಿ ಸೇರಿರಿ, ಒಂದೇ ನುಡಿಯನ್ನು ನುಡಿಯಿರಿ, ನಿಮ್ಮೆಲ್ಲರ ಮನಸ್ಸುಗಳು ಒಂದೇ ಜ್ಞಾನದತ್ತ ಬರಲಿ, ಒಂದೇ ಜ್ಞಾನದತ್ತ ಬರುವ ಪ್ರಾಚೀನ ದೇವರುಗಳೂ ಸಹ ತಮ್ಮ ಪಾಲನ್ನು ತೆಗೆದುಕೊಳ್ಳುವರು.

ರೂಢಿಯಲ್ಲಿರುವ ಮಂತ್ರಗಳಲ್ಲಿ ಇವೆಲ್ಲವೂ ಇವೆ, ಐಕ್ಯಮತಕ್ಕಾಗಿ ಒಂದು ಸಾಮಾನ್ಯ ಸಭೆ, ಎಲ್ಲರಿಗೂ ಸಾಮಾನ್ಯವಾದ ಒಂದೇ ಮನಸ್ಸು, ಒಂದೇ ಜ್ಞಾನದಲ್ಲಿ ಅವೆಲ್ಲವೂ ಒಂದುಗೂಡಿರುತ್ತವೆ.

ನಿಮ್ಮೆಲ್ಲರ ಆಸೆ–ಆಕಾಂಕ್ಷೆಗಳು ಒಂದೇ ಆಗಿರಲಿ, ನಿಮ್ಮ ಹೃದಯಗಳು ಒಂದಾಗಿರಲಿ, ನಿಮ್ಮ ಮನಸ್ಸು ನಿಮ್ಮೊಂದಿಗಿರಲಿ– ಅದರಿಂದ ಆತ್ಮೀಯ ಒಡನಾಟ ನಿಮ್ಮದಾಗಲಿ."[೧]

ಪುರಾತನ ಕಾಲದ ಅಂತರ್ದೃಷ್ಟಿಯ ಮನಸ್ಸಿಗೆ ಗೋಚರಿಸಿದ ಸತ್ಯ ಮನೋಭಾವನೆ ಮಾತ್ರ ಇನ್ನೂ ಕೈಗೂಡುವ ಹಂತಕ್ಕೆ ಬರಬೇಕಿದೆ. ಬಹುಪಾಲು ಆದರ್ಶವಾಗಿಯೇ ಉಳಿದಿದ್ದ ಅದು ಹದಿನೆಂಟನೆ ಶತಮಾನದಲ್ಲಿ, ಸಮಯೋತ್ಸಾಹ, ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತ್ವದ ಕೆಲವು ಅಂಶಗಳಲ್ಲಿ ಅತ್ಯಗತ್ಯವಾದ ಹಕ್ಕಿನಿಂದ ತಾನೇ ತಾನಾಗಿ ಅವಸರದಿಂದ ಪ್ರಕಟಗೊಂಡಿತು. ಸಂದೇಹಗಳು ಎಷ್ಟಿದ್ದರೂ, ಕಾಲಹರಣಗಳು ಎಷ್ಟಾದರೂ ಕೂಡ, ಕೆಲಸಗಳು ಮತ್ತು ಅಭಿಪ್ರಾಯಗಳು ಎಷ್ಟಿದ್ದರೂ ಕೂಡ ಮನುಷ್ಯರಿಗೆ ಎಲ್ಲರೊಂದಿಗೆ ಸಮಾನ ಸ್ವಾತಂತ್ರ್ಯ, ಐಕ್ಯತೆ ಹಾಗೂ ಭ್ರಾತೃತ್ವಗಳ ಗುರಿಯೆಡೆಗೆ ತಡೆಯಲಾರದ ಪ್ರೇರೇಪಣೆಯನ್ನು ಒಪ್ಪಿಕೊಂಡು ಕಾರ್ಯನಿರ್ವಹಿಸುವಂತೆ ಕೃಪೆಯಾಗಿರುತ್ತದೆ. ಈ ಅಂಗೀಕಾರ ಅಥವಾ ಸಮ್ಮತಿಯು

ಹಲವು ವಿಧದ ಶೈಲಿಯಲ್ಲಿರುತ್ತದೆ; ಮಾನವೀಯತೆ, ಸಮಾಜವಾದ, ಪ್ರಜಾಪ್ರಭುತ್ವ ಇತ್ಯಾದಿ. ವಿಜ್ಞಾನ ಮತ್ತು ಮಾನವನ ಜ್ಞಾನದ ಇತರ ಶಾಖೆಗಳಲ್ಲಿ ಉಂಟಾಗುವ ಪ್ರಗತಿಯಿಂದ ಭೂಮಂಡಲದಲ್ಲಿ ಬಹುದೂರದವರೆಗೂ ಹರಡಿರುವ ಮಾನವರ ಮನಸ್ಸು ಮತ್ತು ಶರೀರಗಳನ್ನು ಪರಸ್ಪರ ಸಮೀಪಕ್ಕೆ ತರುವುದಲ್ಲದೇ ಒಂದೇ ವಿಶ್ವವಾಗುವ ಹಾದಿಯಲ್ಲಿ ಮಾನವೀಯತೆಯನ್ನು ತೀರ ಹತ್ತಿರವಾಗುವಂತೆ ಮಾಡುತ್ತದೆ. ಪ್ರಗತಿಯಲ್ಲಿ ಏಕತೆ, ಗುರಿಯಲ್ಲಿ ಏಕತೆ, ಯೋಗಕ್ಷೇಮದಲ್ಲಿ ಏಕತೆಗಳೆಲ್ಲವನ್ನೂ ಗುರುತಿಸಿ ಹೆಚ್ಚು ಹೆಚ್ಚು ಕಾರ್ಯಕ್ಷೇತ್ರಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ಹೆಚ್ಚಾಗಿ ರಾಜಕೀಯ ಮತ್ತು ಆರ್ಥಿಕವಾದ ಘರ್ಷಣೆಯ ಅಂಶಗಳು ಏಕಪ್ರಕಾರವಾಗಿ ಕಡಿಮೆಯಾಗುತ್ತದೆ. ನಿಜ, ಈ ವಿದ್ಯಮಾನಗಳು ಪರಿಸ್ಥಿತಿಯನ್ನು ಭೌತಿಕವಾಗಿ ಹೆಚ್ಚು ಬದಲಾಯಿಸಿರುವುದಿಲ್ಲ; ಜೀವಮಾನದಲ್ಲಿ ಎರಡು ಬಾರಿ ಮಾನವ ನಾಗರೀಕತೆಯು ಧರ್ಮಭ್ರಷ್ಟವಾಗುವಂತೆ ಅವು ತಡೆಯುವುದಿಲ್ಲ. ಯಾಂತ್ರಿಕ ಏಕೀಕರಣದ ಸರಣಿಯಿಂದ ಆಗಿರುವ ಸಾಧನೆಯೆಂದರೆ ಜೀವಂತವಲ್ಲದ ಏಕತೆಗಳು; ಸ್ವಾತಂತ್ರ್ಯ ಹೆಸರಿಗೆ ಮಾತ್ರ ತತ್ವದಲ್ಲಿ ಇರುವುದಿಲ್ಲ; ಅವಕಾಶಗಳಲ್ಲಿ ಕ್ರಮಬದ್ಧವಾದ ಸಮಾನತೆ ಇದ್ದು ಜೀವನದಲ್ಲಿ ನಿಜವಾದ ಸಮಾನತೆ ಇರುವುದಿಲ್ಲ; ಸ್ವ ಹಿತಾಸಕ್ತಿಗಳಿಂದ ಕೂಡಿದ ಸಂಘಟನೆ, ಸಾಂಗತ್ಯವಿಲ್ಲದ ಸಹೋದರತ್ವ, ಆದರೂ ಸಹ ಮುನ್ನಡೆಯನ್ನು ದಾಖಲಿಸಲಾಗಿದೆ. ಹೊರಗಿನ ಕಾರ್ಯಕ್ಷೇತ್ರದಲ್ಲಿ ಇಲ್ಲಿಯವರೆಗೆ ಕೈಗೊಂಡಿರುವ ಎಲ್ಲಾ ಕಾರ್ಯಚಟುವಟಿಕೆಗಳು ಅತ್ಯಗತ್ಯವಾದ ತಯಾರಿಯಾಗಿದ್ದು, ಮುಂಬರುವ ಮಾನವ ಏಕತೆಯೆಂಬ ಭವ್ಯ ಭವನದ ಪ್ರಾಯೋಗಿಕ ಚೌಕಟ್ಟಾಗಿರುತ್ತದೆ. ಈ ದಿಶೆಯಲ್ಲಿ ನೆಡೆಯುವ ಪ್ರತಿಯೊಂದು ಪ್ರಯತ್ನವೂ ಎಷ್ಟೇ ಅಪೂರ್ಣವಾಗಿದ್ದರೂ ತನ್ನ ಯಶಸ್ಸಿನಿಂದಷ್ಟೇ ಅಲ್ಲದೆ, ಸೋಲುಗಳಿಂದಲೂ ತನ್ನ ಕೊಡುಗೆಯನ್ನು ನೀಡಿದೆ. ಏಕೆಂದರೆ, ಪ್ರತಿಯೊಂದು ಸೋಲೂ ಸ್ವಾಭಾವಿಕವಾದ ಕೆಲವೊಂದು ಬಲಹೀನತೆಗಳನ್ನು ತೆರೆದಿಟ್ಟಿದ್ದಲ್ಲದೆ, ಹೆಣಗುವ ಮನಸ್ಸಿಗೆ ಅಂಕುಶ ಹಾಕಿ ದೃಢವಾದ ಪ್ರಯತ್ನದತ್ತ ಕೊಂಡೊಯ್ಯುತ್ತದೆ.

ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಸ್ಥಾನಮಾನ ಕೇವಲ ಒಂದು ಕೃತಕ ಭೌತಿಕ ಏಕತೆಯನ್ನು ತರಬಲ್ಲದಷ್ಟೇ ಎಂಬ ಅಭಿಪ್ರಾಯವು ಎಲ್ಲೆಡೆ ಬೆಳೆಯುತ್ತಿದೆ. ದೈಹಿಕ ಏಕತೆ ಜೀವಂತವಾಗಿರಲು ಮತ್ತು ಪರಿಪೂರ್ಣವಾಗಿರಲು ಮುಂಚಿತವಾಗಿಯೇ ಮನಸ್ಸಿನ ಏಕತೆ ಇರಬೇಕು ಮತ್ತು ಯಾವುದೇ ಮಾನಸಿಕ ಏಕತೆಯು ಶಾಶ್ವತವಾಗಿರಲು ಮತ್ತು ಪ್ರಯೋಜನೀಯವಾಗಿರಲು ಅದರ ಬುನಾದಿಯು ಹೃದಯದ ಏಕತೆಯಲ್ಲಿರಬೇಕು ಮತ್ತು ಹೃದಯದಲ್ಲಿ ತುಂಬಾ ಆಳವಾಗಿರಬೇಕು. ಮಾನವನಲ್ಲಿ ಪ್ರೇಮ, ಸಾಮರಸ್ಯ ಮತ್ತು ಸಹೋದರತ್ವಗಳ ಚಲನೆಗಳು ಆತ್ಮದೊಂದಿಗೆ ಐಕ್ಯತೆಯಲ್ಲಿಲ್ಲದಿದ್ದರೆ ಮುಂದುವರಿಯುವುದಾದರೂ ಎಲ್ಲಿಂದ?



ಜೀವನದಲ್ಲಿ ಶ್ವೇತ ಸಮಾನತೆ ಮತ್ತು ಯಾಂತ್ರಿಕವಾಗಿ ವ್ಯವಸ್ಥೆ ಮಾಡಲಾದ ಕ್ರಮಗಳು ಮಾನವನ ಪ್ರಗತಿಯನ್ನು ನಿಶ್ಚಿತಗೊಳಿಸುವ ನಿಜವಾದ ದಾರಿಯಲ್ಲಿ ಎಂಬುದು ಹೆಚ್ಚುಹೆಚ್ಚಾಗಿ ಮನದಟ್ಟಾಗುತ್ತಿದೆ. ಅಂತರ್ಗತವಾಗಿರುವ ಏಕತೆ ಮತ್ತು ಜನಸಾಮಾನ್ಯರ ಸಂಕಲ್ಪ, ಜೀವನದ ವಿವಿಧತೆಯಲ್ಲಿ ಜೀವಂತ ವ್ಯತ್ಯಾಸಗಳು ಕಂಡುಬರುವಂತೆ ಮಾಡುವುದು ಪ್ರಕೃತಿ ಮಾತೆಯ ಕ್ರಮ; ಮತ್ತು ಅದುವೇ ಮಾನವೀಯತೆಯನ್ನು ಒಟ್ಟುಗೂಡಿಸುವ ದಾರಿಯೂ ಸಹ ಆಗಿರುತ್ತದೆ. ಆಂತರ್ಯದಲ್ಲಿರುವ ಆತ್ಮದ ಆಳವಾದ ಪ್ರಚೋದನೆಯನ್ನನುಸರಿಸಿ ರಾಷ್ಟ್ರಗಳ ಸಮುದಾಯವು ನಿಧಾನವಾಗಿಯಾದರೂ ನಿಶ್ಚಿತವಾಗಿ ಬೃಹತ್ತಾದ ಮತ್ತು ವಿಧೇಯವಾದ ಏಕತೆಯೆಡೆಗೆ ಸರಿಯುತ್ತಿದ್ದು ಇದು ಎಲ್ಲಾ ಜನರಿಗೂ ಭವ್ಯತೆ ಮತ್ತು ಸ್ವಾತಂತ್ರ್ಯದ ಭರವಸೆಯನ್ನು ನೀಡುತ್ತದಾದರೂ ಅದೇ ಸಮಯದಲ್ಲಿ ಅದರ ಅಂಗಘಟಕಗಳಾದ ವ್ಯಕ್ತಿ ಮತ್ತು ಸಮುದಾಯದ ಆರೋಗ್ಯ ಪೂರ್ಣ ಬೆಳವಣಿಗೆಗೆ, ಸಾಕ್ಷಾತ್ಕಾರಗೊಳ್ಳುವ ಚೈತನ್ಯದ ಸಮೃದ್ಧ ಶೈಲಿಗೆ ವಿಪುಲ ಅವಕಾಶವನ್ನು ನೀಡುತ್ತದೆ.

**ಅಡಿಟಿಪ್ಪಣಿಗಳು**

೧. ಋಗ್ವೇದ, ೧೦.೯೧

೨. ವಿಶ್ವ ಒಕ್ಕೂಟವು ಯಾವುದೇ ನಿಶ್ಚಿತರೂಪವನ್ನು ತೆಗೆದುಕೊಂಡರೂ, ಈ ಪರಿಧಿಕಾಲದಲ್ಲಿ, ಕಾಲಗತಿಯಲ್ಲಿ ಅಸ್ತಿತ್ವಕ್ಕೆ ಬರುವ ಸಾಮರ್ಥ್ಯವಿರುವ, ಸಾಧ್ಯತೆಗಳಿರುವ ಮತ್ತು ಚರಿತ್ರೆಯಲ್ಲಿ ಸಂಚಯಗೊಂಡಿರುವ ಬಲಗಳು ದೈವದ ಕುಲುಮೆಯಲ್ಲಿ ಎಷ್ಟಿವೆ ಎಂದು ಈಗಲೇ ಊಹಿಸಲು ಸಾಧ್ಯವಿಲ್ಲ. ಆದರೆ ಇಷ್ಟನ್ನು ಮಾತ್ರ ಸುರಕ್ಷಿತವಾಗಿ ಹೇಳಬಹುದು: ಪ್ರಯೋಗವು ಎಷ್ಟೇ ರೂಪವನ್ನು ಅಥವಾ ಅನುಕ್ರಮ ರೂಪಗಳನ್ನು ಪಡೆದುಕೊಂಡರೂ, ಯಾವುದೇ ಏಕತೆಯೂ ಹೆಚ್ಚು ದಿನ ಬಾಳುವಂತಹದೂ ಮತ್ತು ಹಿತಕರವೂ ಆಗಬೇಕಾದರೆ ಸ್ವತಂತ್ರ ರಾಷ್ಟ್ರಗಳ ವಿಶ್ವ ಒಕ್ಕೂಟದಲ್ಲಿ ಯಾರು ಯಾರಿಗೂ ಅಧೀನರಾಗಿರದೆ, ರಾಷ್ಟ್ರಗಳ ಗಾತ್ರವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲ ದೇಶಗಳಿಗೂ ಸಮಾನವಾದ ಸ್ಥಾನಮಾನ ದೊರೆಯುವಂತಿರಬೇಕು.

* * * *

# ೬. ವೇದದ ರಹಸ್ಯ

ಶ್ರೀ ಅರವಿಂದರ ಬೋಧನೆಯ ಸಾರಾಂಶ ಇದೆ ಆಗಿದೆ. ಇದು ಅವರ ಸತ್ಯದರ್ಶನ ಮತ್ತು ಯೋಗ ಸಾಧನೆಯನ್ನು ಆಧರಿಸಲ್ಪಟ್ಟಿದೆ. ಈ ಜ್ಞಾನದ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಬಯಸುವವರು ಅಥವಾ ಪರೀಕ್ಷಿಸಲು ಕರೆಯಲ್ಪಟ್ಟವರು ಹಾಗೆ ಮಾಡಬಹುದು; ಆದರೆ ಹಾಗೆ ಮಾಡಬಯಸುವವರು ಅದಕ್ಕೋಸ್ಕರ ಯುಕ್ತವಾದ ಸಾಧನೆಯನ್ನು ಮಾಡಬೇಕು. ಅಂದರೆ, ಸಮಂಜಸವಾದ ಯೋಗಾಭ್ಯಾಸವನ್ನು ಮಾಡಬೇಕು. ಈ ರೀತಿಯಾದ ಒಂದು ಪ್ರಮಾಣೀಕೃತ ಸೂತ್ರದ ಸತ್ಯಜ್ಞಾನದ ಬೆಂಬಲಕ್ಕೆ ಹೊರಗಿನ ಇತರ ಯಾವುದೇ ಆಧಾರದ ಅಥವಾ ಶ್ಲಾಘನೆಯ ಅವಶ್ಯಕತೆ ಇರುವುದಿಲ್ಲ. ಆದರೂ ಇತಿಹಾಸಪೂರ್ವದಿಂದಲೇ ಆರಂಭವಾದ ಭಾರತೀಯ ಆಧ್ಯಾತ್ಮಿಕ ಸಂಪ್ರದಾಯದ ಗುಂಪು ರಚಿಸಿರುವ ಉನ್ನತ ಜ್ಞಾನ ಮತ್ತು ಅಭ್ಯಾಸಗಳು ಎಷ್ಟರಮಟ್ಟಿಗೆ ದೇಹದೊಂದಿಗೆ ಸಾಂಗತ್ಯವನ್ನು ಹೊಂದಿದೆಯೆಂದು ತಿಳಿಯುವುದು ಕುತೂಹಲಕಾರಿಯಷ್ಟೆ ಅಲ್ಲ, ಬೋಧಪ್ರದವೂ ಆಗಿದೆ, ಮತ್ತು ಈ ಸಂಪ್ರದಾಯವನ್ನು ವೇದ, ಉಪನಿಷತ್ತುಗಳು ಹಾಗೂ ಗೀತೆಯ ಸ್ತೋತ್ರಗಳಲ್ಲಿ ದಾಖಲಿಸಲಾಗಿದೆ. ಜೀವನವೆಲ್ಲ ದೇವರ ನಿಜವಾದ ಸಾಕ್ಷಾತ್ಕಾರ ಎಂದು ಅಪ್ಪಿಕೊಳ್ಳುವ ಶ್ರೀ ಅರವಿಂದರ ಬೋಧನೆಗಳು ಈ ಅಖಂಡ ಸತ್ಯವನ್ನು ಎಷ್ಟರಮಟ್ಟಿಗೆ ಸಮರ್ಥಿಸುತ್ತವೆ, ಅದರ ಗುಣಲಕ್ಷಣಗಳು ವಿಶ್ವವ್ಯಾಪಿಯಾದ ದೈವಿಕ ಶಕ್ತಿಯ ಪ್ರಗತಿಪರ ದಿವ್ಯದರ್ಶನವೆಂದು ದೃಢೀಕರಿಸುತ್ತದೆ ಮತ್ತು ಅವಶ್ಯಕ ಯಥಾರ್ಥಗಳಾದ ಜ್ಞಾನ, ಬಲ ಮತ್ತು ಅಮರತ್ವಗಳ ಮೂಲಕ ಅದರ ವಿಶಿಷ್ಟ ಗುಣ ಲಕ್ಷಣಗಳಾದ ಅಜ್ಞಾನ, ಅಸಮರ್ಥತೆ ಮತ್ತು ಮರಣಗಳನ್ನು ಸ್ಥಳಾಂತರಿಸಲು ಆಲೋಚಿಸುತ್ತದೆ? ಶ್ರೀ ಅರವಿಂದೊರವರು ಈ ಸನಾತನ ಗ್ರಂಥಗಳನ್ನು ಅಭ್ಯಸಿಸಿ ಅವುಗಳ ಪ್ರಾಚೀನವಾದ ಆದರೆ ಅನಂತವಾದ ಸಂದೇಶಗಳನ್ನು ವಿವರಣೆಗಳ ಸರಣಿಯೊಂದರಲ್ಲಿ ಪ್ರಸ್ತುತಪಡಿಸಿದ್ದು, ಅದರಲ್ಲಿ ಅವರ ತತ್ವಜ್ಞಾನದ ಪ್ರತಿಪಾದನೆಗಳಾದ ದಿವ್ಯ ಜೀವನ (ಲೈಫ್ ಡಿವೈನ್) ಮತ್ತು ಅದನ್ನು ಗ್ರಹಿಸುವ ಸಾಧನವಾದ ಯೋಗ ಸಿದ್ಧಾಂತಗಳನ್ನು ಒಳಗೊಂಡಿದೆ.[೧]

ಪ್ರಕೃತಿಯನ್ನು ಪೂಜಿಸುವ ಆರ್ಯರ ಪ್ರಾಚೀನ ಇತಿಹಾಸವನ್ನು ಸ್ತೋತ್ರಗಳ ಮೂಲಕ ಗ್ರಹಿಸುವ ಪಾಶ್ಚಿಮಾತ್ಯ ವಿದ್ವಾಂಸರ ತೋರಿಕೆಯ ವಾಚನವನ್ನು



ಶ್ರೀ ಅರವಿಂದರು ಒಪ್ಪಿಕೊಳ್ಳುವುದಿಲ್ಲ. ಈ ಎಲ್ಲಾ ವಿದ್ವಾಂಸರುಗಳಿಗೆ ಸ್ತೋತ್ರಗಳೆಲ್ಲಾ ಸಾಮಾಜಿಕ ಬೆಳವಣಿಗೆಯ ಶೈಶವಾವಸ್ಥೆಯಲ್ಲಿರುವ ಗ್ರಾಮೀಣ ಜನರ ಪೂಜಾ ವಿಧಾನಗಳಷ್ಟೇ ಆಗಿ ಕಾಣುವುದಲ್ಲದೇ, ಅವರು ದೇವರೆಂದು ಭೀತಿಯಲ್ಲಿ ಪೂಜಿಸುವ ಭೌತಿಕ ಪ್ರಕೃತಿಯ ಶಕ್ತಿಗಳನ್ನು ಸಮಾಧಾನಪಡಿಸುವಂತಹದ್ದಾಗಿದೆ. ಹಾಗೆಯೇ ಅವರ ಗ್ರಂಥಗಳಲ್ಲಿ ಕಾಣಸಿಗುವ ಸಾಮಾನ್ಯ ದೇಶೀಯ ಧಾರ್ಮಿಕ ಕ್ರಿಯೆಗಳ ಅರ್ಥ ವಿವರಣೆಗಳನ್ನು ಸಹ ಒಪ್ಪಿಕೊಳ್ಳುವುದಿಲ್ಲ. ಅವರಿಗೆ ವೇದವೆಂದರೆ, ವೇದ ಶಬ್ದದ ಅರ್ಥವಾದ ಜ್ಞಾನದ ಪುಸ್ತಕ (ವಿದ್ ಎಂದರೆ ತಿಳಿಯುವುದು). ಅದು ಕೇವಲ ಈ ನೆಲದ ಪ್ರಸ್ತುತ ಸಂಪ್ರದಾಯದಲ್ಲಿ ಇದೆಯೆಂದು ಸಾಧಿಸಲಾಗಿರುವ, ದೇವಮಾನವರು ಮತ್ತು ಋಷಿಮುನಿಗಳು ನುಡಿಯುವ ಅವಳ ಅಗಣಿತ ಸಾಲುಗಳ ಸ್ತೋತ್ರಗಳ ಮೂಲಕ ಸಾಕ್ಷಾತ್ಕಾರಗೊಂಡ ಸನಾತನ ಗ್ರಂಥ–ಶ್ರುತಿ–ಭಾರತದ ಸ್ವಂತದ್ದಾದ ಜೀವನ ವಿಧಾನಗಳನ್ನು ಮೂಲವಾಗಿ ಹೊಂದಿರುವ ಜ್ಞಾನದ ಕಾರಂಜಿ.

ವೇದದ ಶ್ಲೋಕಗಳನ್ನು ರಚಿಸಿದ ಲೇಖಕರು, ಕಲ್ಪಿಸಿಕೊಂಡು ಕವಿತೆಗಳನ್ನು ರಚಿಸುವ ಕವಿಗಳಾಗಿರಲಿಲ್ಲ. ಅವರು ಸತ್ಯವನ್ನು ಆಲಿಸಿ ಅದಕ್ಕೆ ಅರ್ಥವನ್ನು ಕಂಡುಹಿಡಿಯುವ ಋಷಿಮುನಿಗಳಾಗಿದ್ದರು– ಸತ್ಯಶ್ರುತಃ ಕವಯ[೨]– ಅವರ ಹೃದಯದಿಂದ ರೂಪಗೊಂಡಂತಹದ್ದಾಗಿತ್ತು. ಹೃದ ತಸ್ತಂನ ಮಂತ್ರಮ್.[೩] ನಿಜವಾದ ಪುರಾತನ ಆರ್ಯರ ಸಮಾಜಗಳ ಸಂಸ್ಥಾಪಕರು ಇತರೆಡೆಯ ಜನರಲ್ಲಿ ಇದೇ ರೀತಿಯ ವಿಕಸನದ ಪರಿಸ್ಥಿತಿಯಲ್ಲಿ ಉದಾ: ಈಜಿಪ್ಟ್, ಗ್ರೀಸ್, ಪರ್ಶಿಯಾ, ಬ್ಲಾಡಿಯಾ ಇತ್ಯಾದಿಗಳೆಲ್ಲ ಕಂಡುಬಂದಂತೆ ಆಧ್ಯಾತ್ಮಿಕ ರೂಪಾರ್ಥವುಳ್ಳವರಾಗಿದ್ದರು. ಎಲ್ಲಾ ಕಡೆಯಲ್ಲಿ ಈ ಮನುಷ್ಯರು ಆಂತರಿಕ ಸಂಸ್ಕೃತಿ ಮತ್ತು ಆತ್ಮದ ವಿಕಾಸದ ಜೀವನ ತತ್ಪರರಾಗಿ ಸ್ವಜ್ಞಾನ ಮತ್ತು ಲೋಕಜ್ಞಾನಗಳೆಂಬ ಎರಡು ಸಾಲಿನ ಅಭಿವೃದ್ಧಿಯನ್ನು ಅನುಸರಿಸುತ್ತಿದ್ದರು. ವೇದಕಾಲೀನ ಋಷಿಗಳು ಈ ಮಾದರಿಯವರಾಗಿದ್ದರು.

ಅವರು ಜೀವಿಸಿದ್ದ ಕಾಲದಲ್ಲಿ ಮಾನವನ ಮನಸ್ಸು ಬುದ್ಧಿಶಕ್ತಿಯನ್ನುಪಯೋಗಿಸಿ ತರ್ಕಬದ್ಧವಾಗಿ ಕಾರ್ಯ ನಿರ್ವಹಿಸುವ ಹಂತವನ್ನು ತಲುಪಿರಲಿಲ್ಲ. ಕಲ್ಪನಾಶಕ್ತಿ, ಸಾಂಕೇತಿಕ ಗ್ರಹಣಶಕ್ತಿ ಮತ್ತು ತಡೆಯಿಲ್ಲದ ಅಂತಃಸ್ಫೂರ್ತಿಯ ಸಾಮರ್ಥ್ಯಗಳಿಂದ ನಿಯಂತ್ರಿಸಲ್ಪಡುತ್ತಿದ್ದ ಘಟ್ಟವಾಗಿತ್ತು. ಜಾಗೃತವಾದ ಮನಸ್ಸುಗಳು ಎಲ್ಲಾ ಕಡೆಗಳಲ್ಲೂ ವಾಸ್ತವಿಕತೆಯನ್ನು ಗ್ರಹಿಸಿದವು, ಪ್ರಾಕೃತಿಕ ಮಾದರಿಗಳ ಹಿಂದೆ ಒಂದು ಸತ್ಯವು ನೆಲೆಸಿ, ವಿಶ್ವವನ್ನು ಜನರಿಗೆ ವಾಸಯೋಗ್ಯವನ್ನಾಗಿ ಮಾಡಿದವು. ಪ್ರಕೃತಿಯ ಬಗೆಬಗೆಯ ವೈವಿಧ್ಯತೆಯ ಹಿಂದೆ ಅಂತರ್ಗತವಾದ ಒಂದು ಏಕತೆಯನ್ನು ಅವರ ಇಂದ್ರಿಯಗಳು ಗ್ರಹಿಸಿದವು. ತಮ್ಮ ಆಂತರಿಕ ಸ್ವ–ರಚನೆಯ ಚಟುವಟಿಕೆಗಳ ಪಥದ ಹಿಂದೆ ಭೌತಿಕ ಪ್ರಕೃತಿಯ ಶಕ್ತಿಗಳು ಆಳುತ್ತಿರುವುದನ್ನು ಅವರು ಕಂಡುಕೊಂಡರು.

ಭೌತಿಕ ವಿಶ್ವದ ಸುತ್ತಲಷ್ಟೇ ಅಲ್ಲ, ಆಂತರಿಕ ಮಾನಸಿಕ ಗೋಳದ ಸುತ್ತಲೂ ಇದರ ಅಸ್ತಿತ್ವವನ್ನು ಕಂಡರು. ಆಂತರಿಕ ಪ್ರಕೃತಿ ಮತ್ತು ಬಾಹ್ಯ ಪ್ರಕೃತಿಯ ಮೇಲೆ ಪ್ರಭುತ್ವ ಸಾಧಿಸಲು ಋಷಿಗಳು ಈ ಶಕ್ತಿಗಳೊಂದಿಗೆ ಮತ್ತು ದೇವರೊಂದಿಗೆ ಭಾವೈಕ್ಯತೆಯನ್ನು ಬಯಸಿ ಅವುಗಳನ್ನು ಆರಾಧಿಸತೊಡಗಿದರು.

ಋಷಿ ಮುನಿಗಳ ದೃಷ್ಟಿಕೋನಕ್ಕೆ ಈ ಲೌಕಿಕ ಜಗತ್ತು ಕೇವಲ ಒಂದು ಭಾಗವಾಗಿ, ಈ ವಿಶ್ವವ್ಯಾಪ್ತಿಯ ಅತ್ಯಂತ ಕೆಳಗಿನ ನಾಲ್ಕನೇ ಒಂದು ಭಾಗವಾಗಿ[೪] ಕಾಣಿಸಿತು. ಹಿಂಭಾಗದಲ್ಲಿ ಮತ್ತು ಮೇಲ್ಭಾಗದಲ್ಲಿ, ಅವರ ಇಂದ್ರಿಯಗಳಿಗೆ ಇತರ ವಿಶ್ವಗಳಾದ ಶಕ್ತಿಯ, ಜ್ಞಾನದ ಬೆಳಕಿನ ಮತ್ತು ಆನಂದದ ವಿಶ್ವಗಳು ಅನುಕ್ರಮದಲ್ಲಿ ಗೋಚರಿಸಿದವು. ಹಾಗೆ ಇಂದ್ರಿಯಗಳಿಗೆ ಗೋಚರಿಸಿದ ಆ ವಿಶ್ವದಲ್ಲಿ ನಿರಾಕರಣೆ ಮತ್ತು ಸಾಧಾರಣ ಮರ್ತ್ಯತೆಯಿಲ್ಲದ ತೇಜೋಮಯವಾದ ಜೀವನವನ್ನು ಜೀವಿಸಲು ಬಯಸಿ ಅಲ್ಲಿಗೆ ತಲುಪಲು ಅವರು ತಕ್ಕ ಸಾಧನೆಗಳನ್ನು ಗಳಿಸಲು ಪ್ರಯತ್ನ ಆರಂಭಿಸಿದರು. ಹಲವು ವಿಧಗಳಲ್ಲಿ ಮತ್ತು ಜಂಟಿಯಾಗಿ ಹಲವಾರು ಶ್ರೇಣಿಗಳಲ್ಲಿ ನಡೆಯುವ ಸೃಷ್ಟಿಕ್ರಿಯೆಯ ಅಧಿಪತಿಗಳಾದ ದೇವತೆಗಳನ್ನು ಪ್ರಾರ್ಥಿಸುವ ಪ್ರಯತ್ನದ ಅರ್ಥ ಇದೆ ಆಗಿದೆ. ಹೀಗಾಗಿ ಭೌತಿಕ ಪ್ರಕೃತಿ ಮತ್ತು ಭೂಮಿಯ ಅಧಿಪತಿಯೆಂದು ಅಗ್ನಿಯನ್ನು ಕೊಂಡಾಡಲಾಗಿದ್ದು, ವಾಯುಮಂಡಲ ಮತ್ತು ಆಕಾಶದ ದೇವತೆಯೆಂದು ವಾಯುವನ್ನು, ಜೀವನ ವೈಶಾಲ್ಯ ಮತ್ತು ಮನಸ್ಸಿನ ವಿಸ್ತಾರದ ದೇವನೆಂದು ಇಂದ್ರನನ್ನು ಅಧಿಪತಿಯಾಗಿ ಪೂಜಿಸಲಾಗುವುದು. ಈ ದೇವತೆಗಳೆಲ್ಲಾ ಹಲವಾರು ಅವತಾರಗಳಲ್ಲಿ ಹಲವಾರು ವ್ಯಕ್ತಿತ್ವಗಳಲ್ಲಿ ಸಾಕ್ಷಾತ್ಕಾರಗೊಳ್ಳುವ ಒಬ್ಬನೇ ದೇವ ಪ್ರಮುಖನಾಗಿದ್ದು ಮಹತ್ ಎಕಮ್[೫] ಎಲ್ಲದರಿಂದಲೂ ಪ್ರಕಟಗೊಳ್ಳುವವನು ಅವನೊಬ್ಬನೇ. ಇವರೆಲ್ಲಾ ಅನಂತ ಸೃಜನಾತ್ಮಕ ಪ್ರಜ್ಞೆಯಿಂದ ಅದಿತಿಯೆಂಬ ಪ್ರಕಾಶಮಾನವಾದ ಬೆಳಕಿನ ಮಕ್ಕಳು. ಸುವ್ಯವಸ್ಥಿತವಾದ ವಿಶ್ವದ ಆಳ್ವಿಕೆಯಲ್ಲಿ ಭಾಗವಹಿಸುವುದಷ್ಟೆ ಅವರ ಕೆಲಸವಲ್ಲ, ಭೂಮಿಯ ಪುತ್ರನಾದ ಮಾನವನಿಗೆ ಉನ್ನತ ಸತ್ಯದೆಡೆಗೆ, ಅಮರತ್ವದೆಡೆಗೆ ತಾನಾಗೇ ಬೆಳೆಯಲು ಸಹಾಯ ಮಾಡುವುದು ಸಹ ಅದರ ಕರ್ತವ್ಯವೇ ಆಗಿದೆ. ಪ್ರಾರ್ಥನೆ, ತ್ಯಾಗ, ತನ್ನನ್ನೇ ತಾನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು, ತಾನೇನಾಗಿದ್ದೇನೂ ಅದನ್ನು, ತನ್ನಲ್ಲಿರುವ ಎಲ್ಲವನ್ನು ಸಮರ್ಪಿಸಿಕೊಳ್ಳುವುದರಿಂದ ಮಾನವನು ಅವರ ಸಹಾಯಕ್ಕಾಗಿ ಮೊರೆಯಿಟ್ಟಾಗ, ದೇವತೆಗಳು ಪ್ರತಿಸ್ಪಂದಿಸುವರು. ತ್ಯಾಗದ ಮೂಲಕ ಮಾನವನ ಈ ಬೆಳವಣಿಗೆಯನ್ನು ಪರ್ವತದ ಮೇಲೆ ಒಂದು ಪ್ರಸ್ಥಭೂಮಿಯಿಂದ ಇನ್ನೊಂದು ಪ್ರಸ್ಥಭೂಮಿಗೆ ಮಾನವನ ಪ್ರಯಾಣ–ಸನೋಸನೆಮ್[೬] ಎಂದು ವ್ಯಾಖ್ಯಾನಿಸಲಾಗಿದೆ. ಹಾಗೆಯೇ ಇದನ್ನೊಂದು ಯುದ್ಧ ಎಂದು ಸಹ ವರ್ಣಿಸಲಾಗಿದೆ; ಏಕೆಂದರೆ ಬೆಳವಣಿಗೆಯ ತನ್ನ ಪ್ರಯತ್ನದಲ್ಲಿ ಮಾನವನು ಅಸತ್ಯ, ಅಜ್ಞಾನಗಳ ಶಕ್ತಿಗಳಿಂದ ಅಡೆತಡೆಗಳನ್ನು ಎದುರಿಸಬೇಕಾಗಿದ್ದು,



ನಿರಾಕರಿಸುವ ಮತ್ತು ಅಡ್ಡಿ ಉಂಟುಮಾಡುವ ಎಲ್ಲಾ ಶಕ್ತಿಗಳು ದಿತಿ ಅಥವಾ ವಿಭಜಿತ ಪ್ರಜ್ಞೆಯ ಮಕ್ಕಳೆಂದು ಹೇಳಬಹುದು. ದೇವರುಗಳು ಈ ಯುದ್ಧದಲ್ಲಿ ಮಾನವನ ಪರವಾಗಿ ಹೋರಾಡಿ ಅವನಿಗೆ ಜಯ ತಂದು ಕೊಡುವರು.

ಇದು ಋಷಿಮುನಿಗಳ ಆಂತರಿಕ ಬೋಧನೆಯ ಸಂಕ್ಷಿಪ್ತ ಮುಖ್ಯಾಂಶಗಳು. ಆದರೆ ಇದೂ ಸಹ, ಇತರೆಲ್ಲಾ ಕಡೆಗಳಂತೆ, ಪ್ರಾರಂಭಿಕ ದೀಕ್ಷೆಯನ್ನು ಪಡೆದ ಕೆಲವೇ ಕೆಲವು ಯೋಗ್ಯರಿಗಷ್ಟೇ ತಿಳಿಯಿತು. ಬಾಕಿ ಉಳಿದವರಿಗೆ ಅಶುದ್ಧಗೊಂಡಂತಹ ಅಸಭ್ಯತೆಯಾಗಿ, ಒಂದು ಜನಪ್ರಿಯ ಧರ್ಮ ಮತ್ತು ಶಾಸ್ತ್ರೋಕ್ತ ಪದ್ಧತಿಗಳು ಸ್ಥಾಪಿಸಲ್ಪಟ್ಟಿತ್ತಾದರೂ ಅದು ಕಾಲ್ಪನಿಕ ಮತ್ತು ಸಾಂಕೇತಿಕ ಸಿರಿಯೊಡನೆ ಈ ಪ್ರಧಾನ ಸತ್ಯಗಳ ಸುತ್ತಲೇ ಸುತ್ತಿಕೊಂಡಿತ್ತು. ಇದರ ಪರಿಣಾಮದಿಂದ ದೀಕ್ಷೆ ಪಡೆದವರಿಗೆ ಒಳಗಿನ ಅರ್ಥವು ಸ್ಪಷ್ಟವಾಗಿದ್ದರೆ, ಉಳಿದವರಿಗೆ ಹೊರಗಿನ ಚೌಕಟ್ಟೆ ಸಮೃದ್ಧವಾಗಿಯೂ, ಭವ್ಯವಾಗಿಯೂ ಯಥೇಷ್ಟವಾಗಿಯೂ ಇತ್ತು. ಈ ಹೊರಗಿನ ಆರಾಧನೆಯೂ ಸಹ ಪರಿಣಾಮಕಾರಿಯಾಗಿದ್ದುದನ್ನು ನಾವು ಗಮನಿಸಬಹುದು. ಆರಾಧನೆಯಲ್ಲಿ ಯಂತ್ರಗಳೆಂದು ಕರೆಯಲ್ಪಡುವ ಆಧ್ಯಾತ್ಮಿಕವಾಗಿ ರೂಪಾರ್ಥವುಳ್ಳ ಶಬ್ದಗಳು ಮತ್ತು ಸೂತ್ರಗಳ ವ್ಯವಸ್ಥೆಗೆ ಒಳಗಿನ ಹಾಗೂ ಹೊರಗಿನ ಉದ್ದೇಶಗಳಿಗಾಗಿ ಒಂದು ಅಂತರಂಗ ಶಕ್ತಿ ಇದ್ದದ್ದು ಕಂಡುಬರುತ್ತದೆ.

ಈ ಪ್ರಕಾರವಾಗಿ ಅವರು ತಮ್ಮ ವಿಚಾರಗಳನ್ನು, ತಮ್ಮ ಭಾವಗಳನ್ನು, ತಮ್ಮ ಆರಾಧನೆಯ ಪ್ರತಿಯೊಂದು ವಿವರಗಳನ್ನು ಸವಿಸ್ತಾರವಾಗಿ ಸಮಾಂತರತೆಯ ಕ್ರಮದಲ್ಲಿ ವ್ಯವಸ್ಥೆಗೊಳಿಸಿದರು. ಆ ಸಮಯದಲ್ಲಿ ವಿಶಿಷ್ಟ ಸ್ಥಿತಿಯಲ್ಲಿದ್ದ ಅವರ ಭಾಷೆಯಿಂದಲೂ ಅವರಿಗೆ ಸಹಾಯುವಾಯಿತು. ಶಬ್ದಗಳು ಆಗಿನ್ನೂ ಮನೋಭಾವನೆಯ ಜೀವಂತ ಪದಗಳಾಗಿದ್ದವು ಮತ್ತು ವಾಸ್ತವಿಕ ಮತ್ತು ಕಾಲ್ಪನಿಕ ಸಂಗತಿಗಳ ದುರ್ಬಲ ಪ್ರತಿಕ್ರಿಯೆಯಾಗಿದ್ದವು. ಪ್ರತಿಯೊಂದು ಮೂಲಕ್ಕೂ ಹಲವಾರು ಅರ್ಥಗಳಿದ್ದವು. ಈ ಪ್ರಕಾರ ವೈಕ ಎಂಬ ಪದಕ್ಕೆ ತೋಳ ಎಂಬ ಅರ್ಥ ಬಂದದ್ದು ಅನುಭಾವಿಗಳು ತಮಗೆ ತೋಚಿದಂತೆ ಹೆಸರಿಟ್ಟದ್ದರಿಂದ ಅಲ್ಲ. ಅದರ ಉತ್ಪತ್ತಿಯು ವೃಕ್ ಮೂಲದಿಂದಾಗಿದ್ದು, ಅದರ ಅರ್ಥ ಹರಿಯುವುದು ಎಂದು ಮತ್ತು ಆಹಾರವನ್ನು ಹರಿದು ತಿನ್ನುವುದರಿಂದ ತೋಳಕ್ಕೆ ವೃಕ ಎಂಬ ಪದ ನಾಮ ನಿರ್ದೇಶನವಾಯಿತು. ಹಾಗೆಯೇ ಈ ಪದವನ್ನು ಬಳಸುವುದರಿಂದ ಯಾವುದೇ ಆಗಲಿ ಹರಿಯುವ ಅಥವಾ ಹೋಳು ಮಾಡುವುದನ್ನು ಸೂಚಿಸುತ್ತದೆ. ಹಾಗೆಯೇ ಗೋ....... ಎಂಬ ಪದ. ಚತುಷ್ಪಾದಿ ಪ್ರಾಣಿಯಾದ ಹಸು ಎಂದು ಈ ಪದದ ಅರ್ಥವಾಗಿದ್ದು; ಕಿರಣ ಅಥವಾ ಬೆಳಕಿನ ಕಿರಣ ಎಂಬ ಅರ್ಥವನ್ನು ಕೊಡುತ್ತದೆ. ಆ ಕಾಲದ ಸಂಸ್ಕೃತ ಭಾಷೆಗೆ ಸಹಜವಾಗಿದ್ದ, ಪದಗಳಿಗೆ ದ್ವಂದ್ವಾರ್ಥ ಅಥವಾ ಬಹು ಅರ್ಥಗಳನ್ನು ಋಷಿಮುನಿಗಳು ಪ್ರಧಾನವಾಗಿ ಉಪಯೋಗಿಸಿಕೊಂಡು

ದೇವರ ಸ್ತೋತ್ರಗಳನ್ನು ರಚಿಸುವುದರಲ್ಲಿ ಯಶಸ್ವಿಯಾದರು, ಇದರಲ್ಲಿ ಪಡೆದವರಿಗಾಗಿ ಒಂದು ರಹಸ್ಯವಾದ ಅರ್ಥವಿದ್ದರೆ ಇನ್ನೊಂದು ಅದನ್ನು ಮುಚ್ಚಿಡುವಂತಹದಾಗಿದ್ದು ಅದು ಸಾಮಾನ್ಯರಿಗಾಗಿ.

ಹಾಗಾದರೆ ಸ್ತೋತ್ರಗಳಲ್ಲಿ ಅಡಗಿರುವ ರಹಸ್ಯವಾದರೂ ಏನು? ನಿನ್ಯ ವಚಾಂಸಿ[೭] ಎಂದು ಋಷಿಗಳಿಂದಲೇ ವರ್ಣಿಸಲ್ಪಟ್ಟಿರುವ ರಹಸ್ಯ ಪದಗಳು ಯಾರಿಗೆ ದೃಷ್ಟಿ ಇದೆಯೊ ಅವರಿಗೆ ಅವರ ಬುದ್ಧಿವಂತಿಕೆಯನ್ನು ಬಯಲು ಮಾಡುವುದು ದಿವ್ಯಜ್ಞಾನಿಗಳಿಗೆ – ಕಾವ್ಯಾನಿ ನಿರ್ವಚನಾನಿ ಕವಯೇ?

## ೨

ಮಾನವನ ಈ ಪ್ರಪಂಚವು ಅಜ್ಞಾನದ ನೆರಳಿನಲ್ಲಿರುವ ಪ್ರಪಂಚವಾಗಿದೆ. ಇದು ಹೆಚ್ಚು ಸುಳ್ಳುತನ ಮತ್ತು ದೋಷಗಳ ಮಿಶ್ರಣವಾಗಿದ್ದು, ಮಾನವನನ್ನು ಪರಿಪೂರ್ಣವಾಗಿ ತನ್ನ ಕೈಕಾಲುಗಳು, ದೇಹ, ಮನಸ್ಸು ಮತ್ತು ಚೈತನ್ಯಗಳೊಂದಿಗೆ ಜೀವಿಸದಂತೆ ಅಶಕ್ತನನ್ನಾಗಿ ಮಾಡುತ್ತದೆ. ಆದರೆ ಇದು ಸಂಪೂರ್ಣ ಸತ್ಯವಲ್ಲ. ಸಮಸ್ಯೆಗಳಿಂದ ಮತ್ತು ಕುಟಿಲತೆಗಳಿಂದ ಕೂಡಿದ ಈ ಸೃಷ್ಟಿಯು ಅಸ್ಪಷ್ಟವಾಗಿ ಕಾಣುತ್ತಿದ್ದರೂ ಮಿತಿಯಿಲ್ಲದ ಶಕ್ತಿ, ಪೂರ್ಣ ಜ್ಞಾನ, ಅಮಿತ ಆನಂದ ಮತ್ತು ಅಮರತ್ವಗಳ ಸತ್ಯವೂ ಇರುತ್ತದೆ. ವೇದದ ಋಷಿಗಳು ಮಾನವನ ಬಾಳಿನಲ್ಲಿ ಉನ್ನತ ಜೀವನಕ್ಕಾಗಿ ಸತತವಾಗಿ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಜ್ಞಾನ, ಶಕ್ತಿ ಮತ್ತು ಆನಂದದ[೮] ಈ ಮನೆಯು ಜ್ಯೋತಿಯ ಒಂದು ಉನ್ನತ ವಿಶ್ವವಾಗಿದ್ದು, ಇದುವೇ ಪ್ರಪಂಚದ ನಿಜವಾದ ಮೂಲಸ್ಥಾನವಾಗಿರುತ್ತದೆ ಮತ್ತು ಇದನ್ನು ಉಪರಿ ಬುಧ್ನ ಅಥವಾ ಮೇಲಿನ ಬುನಾದಿ ಎನ್ನುವರು. ಇದನ್ನು ಬೃಹತ್ತಾದ ಸ್ವರ್ಗ ಅಥವಾ ಬೃಹತ್‌ದ್ವಾಯು ಎನ್ನಲಾಗಿದ್ದು, ಕೆಳಗಿನ ನಮ್ಮ ಮೂರು ಗೋಲಾರ್ಧಗಳಾದ ಭೂಮಿ, ಆಕಾಶ ಮತ್ತು ಸ್ವರ್ಗಗಳ ಆಚೆಗೆ ಯೋಗ್ಯ, ಸತ್ಯ, ವಿಪುಲ–ಸತ್ಯಮ್, ಋತಮ್, ಬೃಹತ್‌, ಸತ್ಯದ ಸಮಗ್ರ ಮನೆಯನ್ನು ತಲುಪಬೇಕಾಗಿದ್ದು ಸದನಮ್ ಋತಸ್ಯ[೧೦], ಋಷಿಗಳು ತಮ್ಮ ಪ್ರಜ್ಞೆಯಲ್ಲೂ ಹಂಬಲಿಸುವಂತಹದ್ದಾಗಿದೆ. ಇದಕ್ಕಾಗಿ ಅವರು ದೇವರುಗಳ, ಅಗ್ನಿ, ಇಂದ್ರ, ವಾಯು, ಸೂರ್ಯ, ಬೃಹಸ್ಪತಿ ಮತ್ತು ಇತರ ದೇವತೆಗಳ ಬೆಂಬಲ ಮತ್ತು ಸಹಾಯವನ್ನು ಬೇಡಿದಾಗ, ಅವನ ಪ್ರಾರ್ಥನೆ ಮತ್ತು ಸ್ವ–ಸಮರ್ಪಣೆಗೆ ಪ್ರತಿಕ್ರಿಯೆಯಾಗಿ ಅವನಲ್ಲಿ ತಮ್ಮ ಶಕ್ತಿಯನ್ನು ಸಾಕ್ಷಾತ್ಕಾರಗೊಳಿಸಿ, ಅವರವರ ಪ್ರಜ್ಞೆಯ ಸ್ಥಿತಿಯನ್ನು ಅವನಲ್ಲಿ ತುಂಬಿ, ಸತ್ಯದ ಪಥದಲ್ಲಿ ರಥಸ್ಯ ಪಂಥ, ಅವನ ಪ್ರಯಾಣವನ್ನು ಮುನ್ನಡೆಸುವರು. ಅವನ ವಿರೋಧಿಗಳನ್ನೆಲ್ಲಾ ಕೆಳಗಿನ ಕತ್ತಲಿಗೆ



ತಳ್ಳಿ, ಶಾಶ್ವತವಾದ ಸ್ವರದ ಬೆಳಕು, ಸೂರ್ಯ–ವಿಶ್ವ ಮತ್ತು ಅಮರತ್ವದ ಆನಂದವನ್ನು ಅವನಿಗೆ ಜಯಿಸಿಕೊಡುವರು.

ವೇದದ ರಹಸ್ಯಾರ್ಥಗಳ ಪ್ರಧಾನ ಸಿದ್ಧಾಂತ ಇದೇ ಆಗಿದೆ. ಜೀವನದ ವಾಸ್ತವಿಕತೆಯನ್ನು ದೈವಿಕ ಸೃಷ್ಟಿಕರ್ತ ದೇವನ ಸಾಕ್ಷಾತ್ಕಾರವೆಂದು ದೃಢಪಡಿಸುತ್ತದಲ್ಲದೆ, ಪ್ರತಿಯೊಂದು ವೈಯಕ್ತಿಕ ರಚನೆಯಲ್ಲಿ ಕಾಣಿಸುವ ನ್ಯೂನತೆಗಳನ್ನು ಶುದ್ಧ ಮಾಡಿ, ಪರಿಪೂರ್ಣ ಜ್ಞಾನ, ಶಕ್ತಿ ಮತ್ತು ಸಂತೋಷಗಳನ್ನು ಮನುಷ್ಯನಲ್ಲಿರುವುದಕ್ಕಿಂತ ಉನ್ನತವಾದ ಪ್ರಜ್ಞೆಯಲ್ಲಿ ಸರಿಯಾದ ಮಾರ್ಗದಲ್ಲಿ ಕೈಗೂಡಿಸಲು ಮುನ್ನಡೆಸುವಂತೆ ಪ್ರಾರ್ಥಿಸಿಕೊಳ್ಳುತ್ತವೆ. ಮತ್ತು ಇದೆಲ್ಲವೂ ಎಲ್ಲಿಯೋ ದೂರದಲ್ಲಿರುವ ನಂದನ ವನದಲ್ಲಿ ನಡೆಯುವಂತಹದ್ದಲ್ಲ. ಅದು ಇಲ್ಲಿಯೇ ಮತ್ತು ಈಗಲೇ, ಈ ದಿನವೇ[೧೧] ವೇದದ ಋಷಿಮುನಿಗಳು ಬಯಸುವುದು ವಿಶಾಲವಾದ ಪೃಥ್ವಿಯಲ್ಲಿ ಸಂತೋಷ ಮತ್ತು ಪರಮಸುಖ, ದೇವತ್ವವನ್ನು ಈ ಕ್ಷಣವೇ ಪಡೆಯುವುದು.[೧೨] ಮನುಷ್ಯನ ಜೀವನವೆಂಬ ಪುಷ್ಪದ ಎಲ್ಲಾ ದಳಗಳೂ ಪರಿಪೂರ್ಣವಾಗಿ ವಿಕಸಿಸುವಂತೆ ಅವರು ಧ್ಯಾನಿಸುವರು.

"ಓ ಭಗವಂತ, ನಮ್ಮ ಕಿವಿಗಳಿಂದ ನಾವು ಸುಖಕರವಾದುದನ್ನೂ, ಹಿತಕರವಾದುದನ್ನೂ ಕೇಳುವಂತಾಗಲಿ.

ನಮ್ಮಿಂದ ಆರಾಧಿಸಲ್ಪಡುತ್ತಿರುವವನೇ ನಮ್ಮ ಕಣ್ಣುಗಳಿಂದ ನಾವು ಸುಖಕರವಾದುದನ್ನೂ, ಹಿತಕರವಾದುದನ್ನೂ ನೋಡುವಂತಾಗಲಿ.

ನಮ್ಮ ಕೈಕಾಲುಗಳು ಮತ್ತು ಶರೀರಗಳು ದೃಢವಾಗಿದ್ದು, ನಾವು ಯಾವಾಗಲೂ ನಿನ್ನನ್ನೇ ಸ್ತುತಿಸುವಂತಾಗಲಿ.

ದೇವರುಗಳು ನಮಗೆ ನೀಡಿರುವ ಪೂರ್ಣ ಆಯುಷ್ಯವನ್ನು ಕಳೆಯುವಂತಾಗಲಿ. ನೂರು ಶರದೃತುಗಳು ನಮ್ಮ ಮುಂದೆ ನಿಲ್ಲುವಂತಾಗಲಿ...[೧೩]

ನಮ್ಮ ಪುರಾತನ ಪಿತೃಗಳು ಈ ಆದರ್ಶವನ್ನು ಕಟ್ಟಿಕೊಟ್ಟಿದ್ದಾರೆ. ಚೈತನ್ಯವನ್ನು ಬಯಸುವ ಭಾರತೀಯರ ಆನಂತರದ ಸೂತ್ರಗಳೇನೇ ಇರಲಿ– ಅವು ಹಲವಾರಿವೆ– ಅವಳ ಅಕೃತ್ರಿಮ ಸಂಪ್ರದಾಯವು ಯಾವಾಗಲೂ ಸೂರ್ಯನಿಂದ ಬೆಳಗಲ್ಪಟ್ಟ ದೃಷ್ಟಿಗೆ ನಿಷ್ಠವಾಗಿದ್ದು, ಆನಂತರ ಹಲವು ವಿಧಗಳಲ್ಲಿ ಉತ್ಪತ್ತಿಯಾಗಿ ಅಭಿವೃದ್ಧಿ ಹೊಂದಿದ ಯೋಗವು ಸಹ ರಹಸ್ಯವಾದ ಅಭ್ಯಾಸ ಮತ್ತು ಶಿಸ್ತಿನಿಂದ ಉತ್ತಮಗೊಂಡಿದ್ದು, ಈ ವೇದದ ರಹಸ್ಯಾರ್ಥಗಳಿಂದ ಸ್ವ–ಪರಿಪೂರ್ಣಗೊಂಡಿತು.

**ಅಡಿಟಿಪ್ಪಣಿಗಳು**

೧. ಇವೆಲ್ಲವೂ ಮೂಲತಃ 'ದಿ ಆರ್ಯ'ದಲ್ಲಿ ಕಾಣಿಸಿಕೊಂಡು ಈಗ ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟವಾಗಿವೆ.

೨. ಋಗ್ವೇದ, ೫, ೫೭.೮; ೬, ೪೯.೬
೩. ಅದೇ. ೧, ೬೭.೨
೪. ಅದೇ. ೧೦. ೯೦.೩
೫. ಅದೇ. ೧೦, ೮೧.೩
೬. ಅದೇ. ೧.೧೦.೨
೭. ಅದೇ. ೪.೩.೧೬
೮. ಅದೇ. ೭.೬೦.೫
೯. ಅಥರ್ವವೇದ, ೧೨, ೧.೧
೧೦. ಋಗ್ವೇದ ೧.೧೬೪.೪೭
೧೧. ಅದೇ. IX ೮೪.೧
೧೨. ಅದೇ. VII ೪೧.೪
೧೩. ಅದೇ. I ೮೯.೮೯

* * * *



# ೭. ಉಪನಿಷತ್ತುಗಳು

**ಯಾರಿಗೆ ದೃಷ್ಟಿಕೋನವಿದೆಯೋ ಅವರಿಗೆ ಅದು**
**ಸರಿಯಾಗಿ ಇಲ್ಲೇ, ಈ ವಿಶ್ವದಲ್ಲೇ. (ಮುಂಡಕ ಉಪನಿಷತ್ತು)**

ಸಂಪ್ರದಾಯವನ್ನು ಉಪನಿಷತ್ತುಗಳಲ್ಲಿ ಸಂರಕ್ಷಿಸಿ ಇಡಲಾಗಿದೆ. ಪಾಶ್ಚಾತ್ಯ ವಿದ್ವಾಂಸರು ಹೇಳುವಂತೆ ಉಪನಿಷತ್ತುಗಳು ಯಾವುದೇ ಅರ್ಥದಲ್ಲೂ ವೇದಗಳಿಂದ ಹೊರತಾದವುಗಳಾಗಲೀ ಅಥವಾ ಧರ್ಮಭ್ರಷ್ಟವಾದಂತಹವುಗಳಾಗಲಿ, ಅಲ್ಲವೇ ಅಲ್ಲ ಎನ್ನುತ್ತಾರೆ ಶ್ರೀ ಅರವಿಂದೋರವರು. ಇದಕ್ಕೆ ತದ್ವಿರುದ್ಧವಾಗಿ ಉಪನಿಷತ್ತುಗಳು ವೇದ ಪರಂಪರೆಯ ಮುಂದುವರೆದ ಭಾಗ. ನಿಜಹೇಳಬೇಕೆಂದರೆ ಸ್ಥಗಿತಗೊಂಡು, ಜೀವಂತವಾಗಿಲ್ಲವೆಂದೇ ನಂಬಲಾಗಿದ್ದ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸುವ ಯಶಸ್ವಿ ಪ್ರಯತ್ನವನ್ನು ಅವು ಪ್ರತಿನಿಧಿಸುತ್ತವೆ. ಸಮಯ ಕಳೆದಂತೆಲ್ಲಾ ಒಂದು ದೀರ್ಘ ಕಾಲಾವಧಿಯ ನಡುವೆ ಒಂದು, ದೀಕ್ಷೆ ಪಡೆದವರಿಗೆ ಮಾತ್ರ ತಿಳಿದಿದ್ದ ಆಂತರಿಕ ಮತ್ತು ಸಾಂಪ್ರದಾಯಿಕ ಬಾಹ್ಯ ಈ ಎರಡೂ ವೈದಿಕ ಧರ್ಮಗಳು ತಮ್ಮ ಮೂಲಭೂತ ಚಾಲನಶಕ್ತಿಯನ್ನು ಕಳೆದುಕೊಂಡು ನಿತ್ರಾಣಗೊಂಡಿದ್ದವು ಮತ್ತು ಸಂಸ್ಥಾಪಕ ಆಧ್ಯಾತ್ಮಿಕ ರೂಪಾರ್ಥದ ಸತ್ಯ ಮತ್ತು ದೃಷ್ಟಿಗೂ ಸಹ ಏನೂ ಮಾಡುವಂತಿರಲಿಲ್ಲ. ಈ ಶೈಥಿಲ್ಯ ಅಥವಾ ಕ್ಷಯವನ್ನು ಸಾವಿನತ್ತ ಮುನ್ನಡೆಯಲು ಬಿಡಲಿಲ್ಲವೆಂಬುದೇ ಅದೃಷ್ಟದ ವಿಷಯ. ಕೆಲವು ಸಮಯದ ನಂತರ ಪ್ರಾಯಶಃ ಶತಮಾನಗಳ ನಂತರ ಒಂದು ಶಕ್ತಿಶಾಲಿಯಾದ ಚಳುವಳಿಯು ನಿಜವಾದ ವೈದಿಕ ಧರ್ಮದ ಪುನರುಜ್ಜೀವನಕ್ಕಾಗಿ ಆರಂಭವಾಯಿತು; ಉಪನಿಷತ್ತುಗಳು ಈ ಚಳುವಳಿಯ ಒಂದು ರೆಕ್ಕೆಯಾಗಿ ವೇದದಲ್ಲಿ ಅಡಕವಾಗಿದ್ದ ಗೂಢವಾದ, ಆಧ್ಯಾತ್ಮಿಕ ಜ್ಞಾನವನ್ನು ಪುನಃ ಸ್ಥಾಪಿಸುವ ಪ್ರಯತ್ನವಾದರೆ, ಈ ಚಳುವಳಿಯ ಇನ್ನೊಂದು ರೆಕ್ಕೆಯಾದ ಬ್ರಾಹ್ಮಣರು ಬಾಹ್ಯವೇದದ ಪೂಜಾಪದ್ಧತಿಯ ಪ್ರಧಾನ ವೈಶಿಷ್ಟ್ಯಗಳನ್ನು ತ್ಯಾಗದ ಶಾಸ್ತ್ರವಿಧಿಗಳ ಯುಕ್ತಿ ಪೂರ್ವಕ ವಿವರಣೆ ಹಾಗೂ ಸತ್ಯದ ಸಂಕೇತಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದರು.

ಉಪನಿಷತ್ತುಗಳ ಋಷಿಮುನಿಗಳು, ವೇದಕಾಲೀನ ಋಷಿಗಳ ಅಂತರ್‌ದೃಷ್ಟಿಗೆ ಗೋಚರವಾದ ಸತ್ಯಗಳಿಂದಲೇ ಆರಂಭಿಸಿ ಅವುಗಳನ್ನು ಹೊಸದಾಗಿ ತಮ್ಮೊಳಗೆ

ಸಿದ್ಧಿಸಿಕೊಳ್ಳಲು ಬಯಸಿದರು. ಅವರ ಪದ್ಧತಿಗಳು ಭಿನ್ನವಾಗಿರಲು ಸಮಾಜದ ಅಭಿವೃದ್ಧಿಯ ವಿವಿಧ ಹಂತಗಳಲ್ಲಿ ಆಗಷ್ಟೇ ಆರಂಭವಾಗಿದ್ದ ಜಾತಿ ಮನಸ್ಸೂ ಒಂದು ಕಾರಣ. ವೇದಕಾಲೀನ ಋಷಿಗಳು ಅಂತರ್‌ದೃಷ್ಟಿಗೆ ಸ್ಫುರಿಸಿದ ಸತ್ಯವನ್ನು ಇಂದ್ರಿಯದಿಂದ ಗ್ರಹಿಸಿ ಜಾಗೃತ ಚೈತನ್ಯದಿಂದ ಸ್ವಯಂಪ್ರೇರಿತರಾಗಿ ಅಂಗೀಕರಿಸಿ ತಮ್ಮೊಳಗೆ ಒಂದಾಗಿ ಸೇರಿಸಿಕೊಂಡು ಮುಂದುವರೆದರೆ, ಉಪನಿಷತ್ತಿನ ಋಷಿಗಳು ಅನುಭೂತಿಯನ್ನು ಆರಂಭಿಕ ಹಂತವೆಂದು ಪರಿಗಣಿಸಿದರಲ್ಲದೆ, ಪರೀಕ್ಷಿಸಲು ಬಯಸಿ ಆತ್ಮಜ್ಯೋತಿಯಿಂದ ಉಂಟಾದ ಜ್ಞಾನೋದಯದಿಂದ ಬಂದ ಅರಿವು ಮತ್ತು ಶಾರೀರಿಕ ಸಾಮರ್ಥ್ಯಗಳೆಂಬ ಸಾಧನಗಳಿಂದ ತಮ್ಮೊಳಗೆ ಪ್ರಧಾನವಾಗಿ ಅದನ್ನು ಜೀವಿಸುವಂತೆ ಮಾಡಿಕೊಂಡರು. ತೇಜೋಮಯವಾದ ಮನಸ್ಸು ಜ್ಞಾನದ ಹೆಬ್ಬಾಗಿಲಾಯಿತು. ಆದರೂ ಸಹ ಅವರು ವೇದದ ಶಬ್ದವಾದ ಶ್ರುತಿಗೆ ತಮ್ಮ ಸ್ವಂತ ತಿಳುವಳಿಕೆ ಮತ್ತು ಅನುಭವಕ್ಕಿಂತ ಮೇಲಿನ ಸ್ಥಾನವನ್ನು ನೀಡಿದರು. ವೇದವು ಸಮರ್ಥಿಸದ, ವೇದವು ದೃಢಪಡಿಸದ ಯಾವುದೇ ಜ್ಞಾನ, ಯಾವುದೇ ಸಿದ್ಧಾಂತ ಅವರಿಗೆ ನ್ಯಾಯಸಮ್ಮತವೆನ್ನಿಸುತ್ತಿರಲಿಲ್ಲ. ಪ್ರತಿಬಾರಿಯೂ ಈ ಗ್ರಂಥಗಳ ಲೇಖಕರು ತಮ್ಮ ಬೋಧನೆಯನ್ನು ದೃಢಪಡಿಸುವುದು ವೇದದಲ್ಲಿ ಋಷಿಗಳು ಹೀಗೆ ಹೇಳಿದ್ದಾರೆ, ಹೀಗೆ ಘೋಷಿಸಿದ್ದಾರೆ, ಇತ್ಯಾದಿಯಾಗಿ. ಇದಲ್ಲದೆ, ಉಪನಿಷತ್ತುಗಳಲ್ಲಿ ಹೆಚ್ಚಿನ ವಿದ್ಯೆಗಳು, ಆಂತರಿಕ ಶಿಸ್ತುಗಳು ಹಾಗೂ ಕಂಡುಕೊಂಡ ಸತ್ಯಗಳೆಲ್ಲವೂ ನೇರವಾಗಿ ವೇದಗಳ ಸ್ತೋತ್ರಗಳಿಂದ ಬಂದಂತಹವುಗಳಾಗಿವೆ. ಉಪನಿಷತ್ತುಗಳ ಋಷಿಮುನಿಗಳು, ಕೇವಲ ಮೊದಲಿನ ಗ್ರಂಥಗಳಲ್ಲಿದ್ದ ಸತ್ಯಗಳನ್ನೆಲ್ಲಾ ಒಟ್ಟುಗೂಡಿಸಿ ಮತ್ತೊಮ್ಮೆ ಹೇಳಲಿಲ್ಲ. ಅವರು ತಮ್ಮ ಚಿಂತನೆಗಳನ್ನು ಅಭಿವೃದ್ಧಿಪಡಿಸಿ, ವ್ಯಾಸಂಗವನ್ನು ಹೆಚ್ಚಿಸಿಕೊಂಡು, ತಮ್ಮ ಪೂರ್ವಜರು ಗಳಿಸಿಕೊಂಡದ್ದಕ್ಕಿಂತ ಹೆಚ್ಚು ಉನ್ನತವಾದ ಮತ್ತು ಆಳವಾದ ಜ್ಞಾನವೆಂಬ ಬೆಳಕಿನತ್ತ ಮುನ್ನಡೆದರು. ಆದರೂ ಸಹ ಅವರ ಪ್ರಗತಿಯು ಪೂರ್ವಜರ ದೃಷ್ಟಿಕೋನದಿಂದಲೇ ಆಳಲ್ಪಟ್ಟಿತ್ತು. ಅದೇನಿದ್ದರೂ ಆನಂತರದ ಗ್ರಂಥಗಳಲ್ಲಷ್ಟೇ ನಿರ್ಗಮನವು ಗ್ರಹಿಕೆಗೆ ಬರುತ್ತದೆ; ಪ್ರಪಂಚದ ಸತ್ಯದ ನಿರಾಕರಣೆಗಾಗಿ ದೇವರ ಸತ್ಯದ ಮೇಲೆ ಒತ್ತಡವು ಹೆಚ್ಚತೊಡಗುತ್ತದೆ. ಈ ಪ್ರವೃತ್ತಿಯು ಕೊನೆಗೆ ಭ್ರಮೆಯ ಉಪದೇಶ ಅಥವಾ ಮಾಯಾವಾದದ ನೆರಳಿನಲ್ಲಿ ಉಚ್ಚಸ್ಥಾನಕ್ಕೆ ಬರುತ್ತದೆ. ಆರಂಭಿಕ ಉಪನಿಷತ್ತುಗಳು, ಪ್ರಧಾನ ಗ್ರಂಥಗಳು ಸಂಪ್ರದಾಯದಿಂದ ಪೂಜ್ಯವಾದಂತಹ, ಪೂರ್ವಜರಿಂದ ವೇದವು ಪೂರ್ವಾರ್ಜಿತ ಆಸ್ತಿ ಎಂದು ಅಧಿಕೃತವಾಗಿ ಹೇಳಲ್ಪಟ್ಟಿದ್ದು, ಆದರ್ಶವನ್ನು ತೆರೆದಿಡುವುದಲ್ಲದೆ, ಒತ್ತಾಯಪೂರ್ವಕವಾಗಿ ದೇವರು ಮತ್ತು ವಿಶ್ವ ಎರಡನ್ನೂ, ಚೈತನ್ಯ ಹಾಗೂ ಜೀವನವನ್ನು ಒಂದೇ ಸಾಮರಸ್ಯಪೂರ್ವಕ ಹಿಡಿತದಲ್ಲಿ ಬಿಗಿದಪ್ಪಿಕೊಳ್ಳುತ್ತದೆ. ವೇದಕಾಲೀನ ಋಷಿಮುನಿಗಳಿಗೆ ತಿಳಿದಿದ್ದಂತಹ ಜ್ಞಾನವನ್ನೇ



ಉಪನಿಷತ್ತುಗಳ ಕಾಲದ ಋಷಿಮುನಿಗಳು ಗ್ರಹಿಸಿಕೊಂಡಿರುವುದು; ಆದರೆ ಅದನ್ನೆ ಪರೀಕ್ಷೆಗೊಳಪಡಿಸಿ, ಪ್ರಮಾಣೀಕರಿಸಿ, ಋಷಿಗಳು ಗಳಿಸಿಕೊಂಡಿದ್ದ ಹೆಚ್ಚಿನ ಅನುಭಾವದಿಂದ ಅದನ್ನು ಅಭಿವೃದ್ಧಿಪಡಿಸಿ, ನಂತರದ ಯುಗದ ಮನಃಸ್ಥಿತಿಗೆ ಹೊಂದುವಂತೆ ಅದನ್ನು ಪ್ರಸ್ತುತಪಡಿಸಲಾಯಿತು.

ಮತ್ತು ಆ ಜ್ಞಾನ ಯಾವುದು?

## ೨

ಉಪನಿಷತ್ತುಗಳ ಕಾಲದ ಋಷಿಮುನಿಗಳು ವಿಶ್ವದ ಕಟು ಸತ್ಯಗಳನ್ನು ನೇರವಾಗಿ ನೋಡುತ್ತಾರೆ. ಇದೊಂದು ಸೃಷ್ಟಿ ಕ್ರಿಯೆಯಾಗಿದ್ದು, ಅಶ್ವತ್ಥ ವೃಕ್ಷದಂತೆ ಅನಂತ ಮತ್ತು ಸದೃಢ. ಆದರೆ ಅದರ ಬೇರುಗಳು ಮೇಲಿರುತ್ತವೆ. ಮೇಲಿನಿಂದ ವೃಕ್ಷವು ತನ್ನ ರೆಂಬೆ, ಕೊಂಬೆಗಳನ್ನು ಕೆಳಗಡೆ ವಿಶಾಲವಾಗಿ ಹರಡುತ್ತದೆ. ಇಲ್ಲಿರುವುದು ತನ್ನಿಂದ ತಾನೇ ಉಂಟಾದ ವಸ್ತುಸ್ಥಿತಿಯಲ್ಲ ಹಾಗೂ ತನಗೇ ಸಾಕಾಗುವಷ್ಟೂ ಅಲ್ಲ. ಮೇಲಿನಿಂದಲೇ ತನಗೆ ಬೇಕಾದುದನೆಲ್ಲಾ ಸತತವಾಗಿ ಪಡೆದುಕೊಳ್ಳುತ್ತಾ ಅದರ ಮೇಲೆಯೇ ಅವಲಂಬಿತವಾಗಿರುತ್ತದೆ. ವೇದಾಂತಿಗಳೆಲ್ಲಾ ಹೇಳುವುದು ಮೇಲಿನ ಭಾಗವೇ ಸತ್ಯದ ಸತ್ಯ, ಸತ್ಯಸ್ಯ ಸತ್ಯ. ಅದೇ ಬ್ರಹ್ಮ. ಅದನ್ನು ಮಾನವನು ಮಾತುಗಳಿಂದ ವಿವರಿಸಲು ಸಾಧ್ಯವಿಲ್ಲ. ಅದನ್ನು ಸರಳವಾಗಿ ಹೇಳುವುದಾದರೆ ಅದೇ, ತತ್ ಬ್ರಹ್ಮ. ಇದು ಅದರೊಳಗಿಂದ ಮುನ್ನಡೆಯುತ್ತದೆ. ಎಲ್ಲಾ ವ್ಯಕ್ತವಾಗುವುದರ ಹಿಂದಿರುವುದೇ ಅವ್ಯಕ್ತ. ಅದು ಇದು ಮತ್ತು ಇದು ಎಂದು ಯಾರಿಗೂ ಹೇಳಲು ಸಾಧ್ಯವಿಲ್ಲ; ಯಾರೇ ಆದರೂ ಅದು ಇದಲ್ಲ, ಇದಲ್ಲ, ನೇತಿ ನೇತಿ ಎಂದಷ್ಟೇ ಹೇಳಬಹುದು. ಆದರೂ ಸಹ ಇದು ಅಂತಿಮ ಸತ್ಯವಲ್ಲವೆಂದು ಋಷಿಮುನಿಗಳು ಖಂಡಿತವಾಗಿ ಹೇಳುವರು. ವ್ಯಕ್ತ ಮತ್ತು ಅವ್ಯಕ್ತಗಳೆರಡರ ಹಿಂದೆಯೂ, ಪರಾತ್ ಪರ, ಒಬ್ಬ ಪರಮಶ್ರೇಷ್ಠ ಪುರುಷನಿದ್ದು,[೧] ಆ ಉತ್ಕೃಷ್ಟ ಪುರುಷನ ಚೈತನ್ಯದಿಂದಲೇ ಉಳಿದೆಲ್ಲವೂ ಉಂಟಾಗುತ್ತಿರುತ್ತದೆ. ಅವನು ಪರಮೋಚ್ಚ ಸ್ಥಾನದಲ್ಲಿದ್ದು ಅವನಿಗಿಂತ ಮೇಲೆ ಯಾರೂ ಇಲ್ಲ.

ಎಲ್ಲಾ ಸೃಷ್ಟಿಯೂ, ಎಲ್ಲಾ ಹೆಸರು ಮತ್ತು ಸ್ವರೂಪಗಳೂ ಬೆಂಕಿಯಿಂದ ಕಿಡಿಯು ಉತ್ಪನ್ನವಾಗುವಂತೆ ಅವನಿಂದ ಬಹಿರ್ಗಮನಗೊಳ್ಳುತ್ತವೆ – 'ವಿಸ್ಫುಲಿಂಗ ಇವ ಪಾವಕಾತ್'. ಜೇಡ ಹೆಣೆದ ಬಲೆಯಂತೆ ಲೋಕಗಳು ಅವನ ಯೋಚನಾ ಲಹರಿಯಿಂದ ಹೆಣೆದಂತಹವುಗಳಾಗಿವೆ. ದೇವರುಗಳು ಸಹ ಅವನ ಆವಿಷ್ಕಾರವೆ. ಅವ್ಯಕ್ತ ಮತ್ತು ವ್ಯಕ್ತಗಳೆರಡೂ ನಿಜವಾಗಿ ಸಮಭಾರವಿದ್ದು, ಈ ಒಬ್ಬ ಪರಮಶ್ರೇಷ್ಠ ಪುರುಷನ ಸ್ಥಿತಿಶಾಸ್ತ್ರ ಮತ್ತು ಗತಿಶಾಸ್ತ್ರಗಳಾಗಿವೆ. ಅವನು ತನ್ನ ಶಕ್ತಿಯಿಂದ ಹೊರ ಹೊಮ್ಮಿ, ತಾನಾಗಿ ಹರಡಿ, ಬಹುಸಂಖ್ಯೆಯಲ್ಲಿ ತಾನಾಗಿ ಪ್ರಕಟಗೊಂಡಿದ್ದಾನೆ.

ಉಪನಿಷತ್ತಿನ ರಹಸ್ಯ ಭಾಷೆಯಲ್ಲಿ, ಅವನೊಬ್ಬನೆ ಅಪೇಕ್ಷೆಯಲ್ಲಿರುವುದು ವಿಪುಲ. ತನ್ನಿಚ್ಛೆಯಂತೆ ತನ್ನಿಂದ ತಾನೆ ಸೃಷ್ಟಿಗೊಂಡನು. ಸೃಷ್ಟಿಗೊಂಡವನು ಎಲ್ಲದರಲ್ಲೂ ಪ್ರವೇಶಿಸಿದನು. ಪ್ರತಿಯೊಂದು ಸ್ವರೂಪದ ನಿವಾಸಿಯೂ ಅವನೆ. ಎಲ್ಲವೂ ಅವನ ವಾಸಸ್ಥಳವೆ. ವಾಸ್ತವವಾಗಿ ಇದೆಲ್ಲದರಲ್ಲಿರುವುದು ಬ್ರಹ್ಮನೊಬ್ಬನೆ, ಈ ಸುಂದರವಾದ ವಿಶ್ವವೆಲ್ಲವೂ, ಬ್ರಹ್ಮೈವ ಇದಂ ವಿಶ್ವಮಿದಂ ವರಿಷ್ಠಮ್.

ಇದು ಮೂಲಭೂತವಾದ ಅಸ್ತಿತ್ವದ ಸತ್ಯವಾಗಿದ್ದು, ಉಪನಿಷತ್ತುಗಳನ್ನು ಪ್ರತಿಯೊಬ್ಬರೂ ಗುರುತಿಸಲು ಮತ್ತು ತಿಳಿದುಕೊಳ್ಳಲು ನಿಯಮಿಸಲಾಗಿದೆ. ಈ ಸತ್ಯವು ಸಾರ್ವತ್ರಿಕ ಅಥವಾ ವೈಯಕ್ತಿಕವಾದ ಎಲ್ಲಾ ಅಸ್ತಿತ್ವಕ್ಕೆ ವಾಸ್ತವಿಕತೆಯನ್ನು ನೀಡುತ್ತದೆ. ಮಾನವನ ಅಜ್ಞಾನದಿಂದಾಗಿ ಅವನಿಗೆ ಅದು ಕಾಣಿಸುವುದಿಲ್ಲ. ಅವನ ಮನಸ್ಸಿನ ಬಾಗಿಲುಗಳು ಯಾವಾಗಲೂ ಹೊರಗಡೆಗೆ ತಿರುಗಿಕೊಂಡಿರುವುದರಿಂದ, ತನ್ನೊಳಗೆ ವಾಸವಾಗಿರುವ ಅತಿಥಿಯನ್ನು ನೋಡಲು ಮತ್ತು ಅನುಭವಿಸಲು ಅಸಮರ್ಥನಾಗುತ್ತಾನೆ; ಹಾಗೆಯೇ ಅವನಿಗೆ ಇತರರಂತೆ ಕಾಣುವವರಲ್ಲೂ ಸಹ ಅದೇ ನಿವಾಸಿಯನ್ನು ಗುರುತಿಸಲು ವಿಫಲನಾಗುತ್ತಾನೆ. ಉಪನಿಷತ್ತುಗಳು ಒಬ್ಬನೇ ಹಲವರಲ್ಲಿ ವ್ಯಕ್ತಗೊಳ್ಳಲು ಈ ವಾಸ್ತವಿಕತೆಗೆ ಎಚ್ಚರಗೊಳ್ಳಲು, ಅದರಿಂದ ತನ್ನ ವ್ಯಕ್ತಿತ್ವವನ್ನು ಕಂಡುಕೊಳ್ಳಲು ಮತ್ತು ಅದರ ಮೂಲಕ ಉಳಿದ ತನ್ನ ಸಹಜೀವಿಗಳ ವ್ಯಕ್ತಿತ್ವವನ್ನು ಅರಿತುಕೊಳ್ಳಲು ಜಾಗೃತನಾಗುವಂತೆ ಮಾನವನಿಗೆ ಕರೆ ನೀಡುತ್ತದೆ. ಆ ಒಬ್ಬನನ್ನು ಅರಿಯುವುದೆಂದರೆ ನಮ್ಮನ್ನೆ ನಾವು ಅರಿತುಕೊಂಡಂತೆ, ಬ್ರಹ್ಮನನ್ನು ಅರಿತುಕೊಳ್ಳುವುದೆಂದರೆ ಬ್ರಹ್ಮನೇನೆಂದು ತಿಳಿದುಕೊಳ್ಳುವುದು ಮತ್ತು ಉಪನಿಷತ್ತು ಹೇಳುವುದು ಬ್ರಹ್ಮನೆಂದರೆ ಸತ್ಯ, ಜ್ಞಾನ ಮತ್ತು ಅನಂತತೆ, ಸತ್ಯಮ್, ಜ್ಞಾನಮ್, ಅನಂತಮ್.

ಬ್ರಹ್ಮನನ್ನು ಸತ್ಯ, ಅನನ್ಯ ಮತ್ತು ಪರಿಪೂರ್ಣ ಎಂದು ತಿಳಿಯಬೇಕು; ಎಲ್ಲೊ ದೂರದಲ್ಲಿರುವ ಸತ್ಯವಷ್ಟೇ ಅಲ್ಲ, ಇಲ್ಲಿರುವ ಸತ್ಯವೂ ಸಹ. ಇದೆಲ್ಲವೂ ಚಲನೆಯಲ್ಲಿರುವ ಒಂದು ಸತ್ಯವಾಗಿದ್ದು ತನ್ನದೇ ಆದ ಕಟ್ಟಳೆಗಳು ಮತ್ತು ಕಾರ್ಯವಿಧಾನಗಳಿಂದ, ವ್ಯಕ್ತಗೊಳ್ಳುವ ಪ್ರತಿಯೊಂದು ವಿಧವೂ ತನ್ನ ಉದ್ದೇಶಗಳ ಸಂಪೂರ್ಣ ಜ್ಞಾನವನ್ನು ತನ್ನಲ್ಲೇ ಹಿಡಿದಿಟ್ಟುಕೊಂಡಿರುತ್ತದೆ. ಯಾರೇ ಆಗಲಿ ಪರಮಶ್ರೇಷ್ಠ ಭಗವಂತನೊಂದಿಗೆ ಅನನ್ಯತೆಯನ್ನು ಗಳಿಸಿಕೊಂಡಾಗ, ಅವನು ಈ ಜ್ಞಾನದಲ್ಲಿ ಅಭಿವೃದ್ಧಿ ಹೊಂದುವನು. ಬ್ರಹ್ಮನು ಕೊನೆಯಿಲ್ಲದವನು ಅನಂತ. ಅವನು ತಾನೇ ಸ್ವಯಂ ಪರಿಮಿತಿಯನ್ನು ಹೇರಿಕೊಂಡಿರುವುದೂ ಸಹ ಉದ್ದೇಶಪೂರ್ವಕ ಮತ್ತು ಯಾವುದೇ ರೀತಿಯಲ್ಲೂ ಅವನ ಪರಿಪೂರ್ಣತೆಯ ಮೇಲೆ ಪರಿಣಾಮ ಬೀರುವುದಿಲ್ಲ ಮತ್ತು ಎಲ್ಲವನ್ನು ಹೊರತೆಗೆದ ನಂತರವೂ ಪೂರ್ಣವಾಗಿಯೇ ಉಳಿದಿರುತ್ತದೆ. ಯಾರು ಬ್ರಹ್ಮನಲ್ಲಿ ಬೆಳೆಯುತ್ತಾರೋ ಅವರು



ಅವನ ಅನಂತತೆಯಲ್ಲೂ ಬೆಳೆಯುತ್ತಾರೆ ಮತ್ತು ಅನಂತತೆಯೆಂದರೆ ಹರ್ಷ, ಆನಂದ. ಆನಂದ, ಪರಮ ಸುಖಗಳೆಲ್ಲವೂ ನಾವು ಅರಿತುಕೊಳ್ಳಬೇಕಾದ ಬ್ರಹ್ಮ ಎನ್ನುತ್ತದೆ ಉಪನಿಷತ್ತು. ಆನಂದವು ಬ್ರಹ್ಮನ ಸಹಜ ಗುಣ; ಎಲ್ಲಾ ಸಾಕ್ಷಾತ್ಕಾರವೂ ನಿಜವಾಗಿಯೂ ಈ ಆನಂದವೇ ಆಗಿದ್ದು, ಅವನ ಚೈತನ್ಯದಿಂದ ಬುಗ್ಗೆಯಂತೆ ಚಿಮ್ಮುವುದು. ತನ್ನಷ್ಟಕ್ಕೆ ತಾನೇ ಕೊನೆಯಿಲ್ಲದೆ ಹೆಚ್ಚುತ್ತಾ ಹೋಗಲು ಅಷ್ಟೇ ಹೊರತು ಬೇರೆ ಉದ್ದೇಶಗಳಿಲ್ಲ. ಆನಂದವೇ ಎಲ್ಲಾ ಜೀವನದ ರಹಸ್ಯವಾಗಿದ್ದು, ಯಾರು ಈ ಸತ್ಯವನ್ನು ತಮ್ಮೊಳಗೆ ಅರಿತುಕೊಳ್ಳುತ್ತಾರೋ ನಿಜವಾಗಿ ಅಸ್ತಿತ್ವಗಳೂ ಅವರೆಡೆಗೆ ಹೋಗಲು ಇಚ್ಛಿಸುತ್ತವೆ.

ಇದೇ ಅಮರತ್ವ ಅಥವಾ ಅಮೃತತ್ವದ ಸಾರಾಂಶವಾಗಿದ್ದು, ವೇದಾಂತಿಗಳ ಭಾವನೆಯಲ್ಲಿ ಮಾನವನ ಅದೃಷ್ಟ ಅಡಗಿದೆ. ಅಮರತ್ವವನ್ನು ಸಾವಿನ ನಂತರ ಎಲ್ಲಿಯೋ ಆಸ್ವಾದಿಸುವುದಲ್ಲ, ಆದರೆ ಇಲ್ಲಿಯ ಮತ್ತು ಈಗಲೇ, ಜೀವಂತ ಇರುವಾಗಲೇ, ಇಹೈವ ಸಂತಃ.

## ೩

ಉಪನಿಷತ್ತುಗಳು ಕೇವಲ ಬ್ರಹ್ಮನ ಜ್ಞಾನವನ್ನು ದೃಢಪಡಿಸುವುದಷ್ಟೇ ಅಲ್ಲದೆ, ಅದನ್ನು ತಿಳಿದುಕೊಳ್ಳುವ ದಾರಿಯನ್ನೂ ತೋರುತ್ತವೆ. ಅವು ಅನೇಕ ಸಾಧನೆಗಳನ್ನು, ಆಂತರಿಕ ಶಿಸ್ತುಗಳನ್ನು, ಅನ್ವೇಷಕರ ಬದಲಾಗುವ ಯೋಗ್ಯತೆಗಳಿಗನುಗುಣವಾಗಿ ಸೂಚಿಸುತ್ತವೆ. ಅವು ಸಾಮೀಪ್ಯಕ್ಕಾಗಿ ಬೇರೆ ಬೇರೆ ದಾರಿಗಳನ್ನು ಹಿಡಿದರೂ, ಬೇರೆ ಬೇರೆ ಬಾಗಿಲುಗಳ ಮೂಲಕ ಬಂದರೂ– ಎಲ್ಲವೂ ಒಬ್ಬ ಬ್ರಹ್ಮನಿರುವಲ್ಲಿಗೆ. ಹಾಗಿದ್ದರೂ ತುಂಬಾ ನೇರವಾದ ಮಾರ್ಗವೆಂದರೆ, ನಮ್ಮೊಳಗೆ ಅವನನ್ನು ಅನ್ವೇಷಿಸುವುದು, ಆಳವಾದ ಭಾವನೆಗಳ ಮುಖಾಂತರ, ಅಲ್ಲಿ ರಹಸ್ಯ ಚೈತನ್ಯದಲ್ಲಿ ಸ್ಥಾಪಿತವಾಗಿರುವುದು, ಹೃದಯದ ಗುಹೆಯಲ್ಲಿ ವಾಸವಾಗಿರುವುದು, ಸ್ವಯಂ ಪ್ರಕಾಶವಾಗಿರುವುದು, ಅನಾದಿ ದಿನಗಳಿಂದ. ಈ ಆತ್ಮವನ್ನು ವಾಕ್ಚಾತುರ್ಯದ ಬೋಧನೆಗಳಿಂದಾಗಲೀ, ಉನ್ನತ ವ್ಯಾಸಂಗದಿಂದಾಗಲೀ ಅಥವಾ ಹೆಚ್ಚು ಓದುವುದರಿಂದಾಗಲೀ ಗೆಲ್ಲುವುದು ಅಸಾಧ್ಯ ಎಂದು ದೃಢಪಡಿಸುತ್ತವೆ ಗ್ರಂಥಗಳು. ಯಾರೇ ಆಗಲಿ ಪ್ರಜ್ಞೆಯನ್ನು ಅದರ ಎಲ್ಲಾ ಗತಿಗಳಲ್ಲೂ ಶುದ್ಧೀಕರಿಸಿ ಗ್ರಹಣಶಕ್ತಿಯ ಬಾಗಿಲುಗಳನ್ನು ಒಳಮುಖವಾಗಿ ತಿರುಗಿಸಬೇಕು; ನಂಬಿಕೆ ಮತ್ತು ಸ್ಥಿರತೆಯಿಂದ ಅನ್ವೇಷಕನು ಏಕಾಂತದಲ್ಲಿ ತನ್ನೊಲಗೆ ಆಳವಾಗಿ ಮುನ್ನುಗ್ಗಬೇಕು, ಸುತ್ತಿಕೊಂಡಿರುವ ಹಲವಾರು ಕಗ್ಗಂಟುಗಳನ್ನು ಸಡಲಿಸಿಕೊಳ್ಳಬೇಕು, ಹುಲ್ಲಿನ ಎಲೆಯಿಂದ ನಾರನ್ನು ಬೇರ್ಪಡಿಸಿದಂತೆ ದೇಹದಿಂದ ಅದನ್ನು ಬೇರ್ಪಡಿಸಬೇಕು, ಮತ್ತು ಅವನ ದಯೆಗಾಗಿ ಕಾಯಬೇಕು. ಆತ್ಮವನ್ನು ಕೇವಲ ಪ್ರಯತ್ನ ಮಾತ್ರದಿಂದಲೇ ಗೆಲ್ಲಲು ಸಾಧ್ಯವಿಲ್ಲವೆಂದು

ದೃಢಪಡಿಸಲಾಗಿದೆ. ಈ ಆತ್ಮವು ನನ್ನ ದಯೆಯನ್ನು ಪಡೆದುಕೊಳ್ಳುವವರನ್ನು ಆಯ್ದುಕೊಳ್ಳುತ್ತದೆ ಮತ್ತು ಹಾಗೆ ಆಯ್ದುಕೊಂಡವರಿಗೆ ಮಾತ್ರ ಅದು ಸಂಪೂರ್ಣವಾಗಿ ಅನಾವರಣಗೊಂಡು, ಸಾಕ್ಷಾತ್ಕಾರಗೊಳ್ಳುತ್ತದೆ.

ಯಾರೇ ಆಗಲಿ ಒಳಗಿರುವ ದೈವಿಕ ಆತ್ಮದೊಂದಿಗಿನ ಅನನ್ಯತೆಯನ್ನು ದೇಹವು ಬೀಳುವ ಮುನ್ನವೇ ಸಾಧಿಸಿಕೊಳ್ಳಬೇಕು. ಇಲ್ಲದಿದ್ದರೆ, ಬೃಹತ್ತಾದ ಅಧಃಪತನವಾಗುವುದು. ಈ ವಿಶ್ವದಲ್ಲಿರುವುದೆಲ್ಲವೂ, ಇನ್ನೊಂದರಲ್ಲೂ ಇರುತ್ತದೆ. ಯಾವುದು ಇಲ್ಲಿಲ್ಲವೋ ಅದು ಬೇರೆಲ್ಲಿಯೂ ಇರಲು ಸಾಧ್ಯವಿಲ್ಲ. ನೀವು ಆತ್ಮದ ಸ್ವಾತಂತ್ರ್ಯವನ್ನು ಸಾಧಿಸಬೇಕು ಮತ್ತು ಅವನ ಉನ್ನತ ವಿಶ್ವಗಳಲ್ಲಿ ಒಂದಾಗಿ ಸೇರಲು ಅರ್ಹರಾಗುವ ಮೊದಲು ಅದರಲ್ಲಿ ಜೀವಿಸಬೇಕು. ಸ್ವತಂತ್ರ ಮನುಷ್ಯ ತನ್ನ ಆಂತರಿಕ ಬಿಡುಗಡೆಯ ಸಾಫಲ್ಯಕ್ಕಾಗಿ ಬದುಕಿನ ನಂತರದ ಕಾಲವನ್ನು ನೋಡುವುದಿಲ್ಲ. ಅದಕ್ಕೆ ಬದಲಾಗಿ ಅವನು ಈ ವಿಶ್ವದಲ್ಲಿ ತಾನೇ ಸಾಮ್ರಾಟನಾಗಿ, ತನ್ನೊಳಗೆ ಖುಷಿಪಡುತ್ತಾ, ತನ್ನಷ್ಟಕ್ಕೆ ತಾನೇ ಸಂಭಾಷಿಸುತ್ತಾ, ತನ್ನೊಳಗಿನ ಪರಮಸುಖವನ್ನು ಪಸರಿಸುತ್ತಾ ಆಧಿಪತ್ಯ ನಡೆಸುವನು. ಅವನು ಇನ್ನೆಂದಿಗೂ ಅಜ್ಞಾನದ ದ್ವಂದ್ವದಲ್ಲಿ ಸಿಲುಕಿ ವೇದನೆಯನ್ನು ಅನುಭವಿಸಲಾರ; ಸಂಪೂರ್ಣ ಜ್ಞಾನವನ್ನು ಅರಿತವರಿಗೆ ತಪ್ಪು ತಿಳುವಳಿಕೆ ಬರುವುದಾದರೂ ಎಲ್ಲಿಂದ? ದುಃಖವಾಗುವುದಾದರೂ ಯಾವುದರಿಂದ? ಅವನು ಯಾವುದಕ್ಕೆ ಹೆದರಬೇಕು? ಅವನು ಎಲ್ಲಿ ಹೊರಳಬೇಕು? ಅವನಿಗೆ ಎಲ್ಲವೂ ಬ್ರಹ್ಮ, ಎಲ್ಲವೂ ಅವನಲ್ಲಿಯೇ ಇದೆ. ಅವನು ಸುತ್ತಲಿರುವ ಜೀವಿಗಳಲ್ಲಿ ಒಂದಾಗಿರುವನು, ಕಾಣುವ ಸೂರ್ಯನಲ್ಲಿರುವ ದೇವನಲ್ಲೂ ಒಂದಾಗಿರುವನು, ಆತ್ಮದ ಅನಂತತೆಯಲ್ಲೂ ಒಂದಾಗಿರುವ ಅವನು ಚಿರಂತನ.

**ಅಡಿಟಿಪ್ಪಣಿಗಳು**

೧. ಅವ್ಯಕ್ತಾತ್ ತು ಪರಃ ಪುರುಷಃ

* * * *



# ೮. ಭಗವದ್ಗೀತೆ

ವೇದಗಳ ಶ್ಲೋಕಗಳಲ್ಲಿ ದಾಖಲಾಗಿರುವ ಆಧ್ಯಾತ್ಮಿಕ ಮತ್ತು ಮನೋವೈಜ್ಞಾನಿಕ ಅನುಭವದ ತಿರುಳನ್ನು ತೆಗೆದುಕೊಂಡು ಅದನ್ನು ಪುನಃ ಹೊಸದಾಗಿ ಸೂತ್ರ ರೂಪದಲ್ಲಿ ವ್ಯಕ್ತಗೊಳಿಸುವ ಕೆಲಸವನ್ನು ಉಪನಿಷತ್ತು ಮಾಡಿದರೆ, ಭಗವದ್ಗೀತೆಯೂ ವೇದಾಂತ ವಿಚಾರ ಮತ್ತು ಅನುಭವ ಹಾಗೂ ಆನಂತರದ ಹಲವು ಸಾಲುಗಳ ಅಭಿವೃದ್ಧಿಯ ಜೀವಂತ ಸಂವಾದ ಅಥವಾ ಸಂಯೋಗವನ್ನು ಪ್ರತಿನಿಧಿಸುತ್ತದೆ.

ಈ ಗ್ರಂಥವು ಮಹಾಭಾರತದ ಸಮಗ್ರ ಭಾಗವಾಗಿದ್ದು, ಬೃಹತ್ ಮಹಾಕಾವ್ಯದ ಹೆಗ್ಗುರುತಾಗಿದ್ದು, ಶಾಶ್ವತ ಆಧ್ಯಾತ್ಮಿಕ ತಾತ್ಪರ್ಯದ ಸಂಪೂರ್ಣ ಹೊದಿಕೆಯಾಗಿದೆ. ಪ್ರದರ್ಶನದ ಸ್ಥಳ ಕುರುಕ್ಷೇತ್ರ, ಜೀವನ ಸಮರದ ರಣರಂಗ. ಉಪದೇಶ ನೀಡುತ್ತಿರುವವನು ಬೇರಾರೂ ಅಲ್ಲ, ಮನುಷ್ಯನ ಅವತಾರದಲ್ಲಿರುವ ಭಗವಂತ. ಉಪದೇಶ ಪಡೆಯಲು ಕಾಯುತ್ತಿರುವವನು ವಿಕಸಿತವಾಗುತ್ತಿರುವ ಮನುಷ್ಯಕುಲದ ಕೆನೆಪದರದಂತಹ ಮಹತ್ವಾಕಾಂಕ್ಷೆಯ ಮಾನವ. ಮಾನವನ ಆತ್ಮವು ಸಂದಿಗ್ಧ ಪರಿಸ್ಥಿತಿಯಲ್ಲಿದ್ದು, ತಿಕ್ಕಾಟವನ್ನು ಎದುರಿಸಿ, ಸಂಕೀರ್ಣ ಸ್ವಭಾವದಿಂದ ಹೊರಬರಬೇಕಾದಂತಹ ಸಂದರ್ಭ. ಇಂತಹ ಸಂಪೂರ್ಣ ದಿಗ್ಭ್ರಮೆಯಲ್ಲಿರುವಂತಹ ಕ್ಷಣಗಳಲ್ಲಿ ಪೌರುಷವಂತನೂ, ಧೀರರಲ್ಲಿಯೇ ಅಗ್ರಗಣ್ಯನೂ ಆದ ಅರ್ಜುನನೇ ಗೊಂದಲದಲ್ಲಿ ಸಿಲುಕಿ ತನ್ನ ಸ್ವಂತ ಶಕ್ತಿ, ಸಾಮರ್ಥ್ಯಗಳಲ್ಲಿಯೇ ನಂಬಿಕೆಯನ್ನು ಕಳೆದುಕೊಂಡು ಶ್ರೀ ಕೃಷ್ಣನ ಎದುರು ಮಂಡಿಯೂರಿ ಕುಳಿತು ಜ್ಞಾನವನ್ನು ಉಳಿಸುವಂತೆಯೂ, ಶಕ್ತಿಯನ್ನು ನೀಡುವಂತೆಯೂ ಪ್ರಾರ್ಥಿಸುತ್ತಾನೆ. ಜೀವನವೆಂದರೇನು? ನಮ್ಮ ಪಯಣ ಎಲ್ಲಿಗೆ? ಮನುಷ್ಯ ಏನು? ಅವನನ್ನು ಏತಕ್ಕಾಗಿ ಮತ್ತು ಎಲ್ಲಿಗೆ ಸೆಳೆದೊಯ್ಯಲಾಗುತ್ತಿದೆ? ಅವನ ಹಣೆಬರಹದಲ್ಲಿ ಇರುವುದಾದರೂ ಏನು?

೨

ಈ ಲೋಕಗಳೆಲ್ಲವೂ ನನ್ನಿಂದಲೇ ಸೃಷ್ಟಿಯಾದಂತಹವು ಎನ್ನುತ್ತಾನೆ ಭಗವಂತ. ಹೀಗೆ ತಾನೇ ಸೃಷ್ಟಿಸಿದ ವಿಶಾಲವಾದ ವಿಶ್ವದೊಳಗೆ ಅವನು ಪ್ರವೇಶಿಸಿ, ಪ್ರತಿಯೊಂದು ವಿಧದಲ್ಲಿಯೂ ತಾನಾಗೆ ರೂಪಾಂತರಗೊಂಡು ಪ್ರತಿಯೊಂದು ಜೀವಿಯಲ್ಲಿಯೂ

ನಿವಾಸಿಯಾಗಿ ನೆಲಸುತ್ತಾನೆ. ಎಲ್ಲಾ ಜೀವಿಗಳು ಅವುಗಳ ಸ್ಥಾನಮಾನಗಳು ಮತ್ತು ಚಲನವಲನಗಳೆಲ್ಲವೂ ವಾಸ್ತವವಾಗಿ ಆಳಲ್ಪಡುತ್ತಿರುವುದು ಯಂತ್ರದ ಮೇಲೆ ಕುಳಿತಂತಿರುವ ಅವನ ಅಗಾಧವಾದ ಶಕ್ತಿ ಸಾಮರ್ಥ್ಯಗಳಿಂದ. ಈ ಅಸ್ಥಿರ ವಿಶ್ವಕ್ಕೆ ಒಂದು ದೈವಿಕವಾದ ಮಹತ್ವವನ್ನು ಮತ್ತು ವಾಸ್ತವಿಕತೆಯನ್ನು ನೀಡುತ್ತಿರುವುದು. ಅವನು ಇಲ್ಲಿ ಸ್ವತಃ ಸ್ಥಿತನಾಗಿದ್ದು ಕೊಡುತ್ತಿರುವ ನಿರ್ದೇಶನದಿಂದ, ಬದಲಾಗುತ್ತಿರುವ ಈ ವಿಶ್ವ ಮತ್ತು ಅದರ ಚಲನೆಗಳು: ಹೆಸರು ಮತ್ತು ರೂಪ, ಬಗೆಬಗೆಯ ಸೃಷ್ಟಿಗಳೆಲ್ಲವೂ ನಿಜವಾಗಿ ನೋಡಿದರೆ ಭಗವಂತನ ಚೈತನ್ಯದಿಂದುಂಟಾಗುವ ಸಾಕ್ಷಾತ್ಕಾರ.

ವೈವಿಧ್ಯಮಯವಾದ ಚಲನೆಯನ್ನು ಮೂಲತತ್ವವಾಗಿಟ್ಟುಕೊಂಡರೆ ಒಂದು ಸದೃಢವಾದ ಸ್ಥಿತಿ, ಒಂದು ಸಾನ್ನಿಧ್ಯ, ವ್ಯಾಪ್ತಿಯ ಭಾಗವಾಗಿರುವ ಚೈತನ್ಯ. ದೈವಿಕತೆಯ ವ್ಯಕ್ತಿತ್ವ ಹರಡುವುದನ್ನು ಕಾಣಬಹುದು. ಚೈತನ್ಯದ ಚಂಚಲವಾದ ಸಮಚಿತ್ತದ ಕ್ಷರ 'ಬ್ರಹ್ಮ', ಸ್ಥಿರವಾದ 'ಅಕ್ಷರ ಬ್ರಹ್ಮ'ನ ಮೂಲತತ್ವದ ಮೇಲೆ ಸಮರ್ಥವಾಗಿ ಎತ್ತಿ ಹಿಡಿಯಲ್ಪಟ್ಟಿರುತ್ತದೆ. ಅನಂತತೆ ಅಥವಾ ಅಪರಿಮಿತತೆಯ ಹೃದಯದಲ್ಲಿ ಪರಿಮಿತತೆಯು ಆಶ್ರಯ ಪಡೆಯುತ್ತದೆ. ಈ ಅನಂತವಾದ, ಸ್ಥಿರವಾದ ಚೈತನ್ಯವೇ ಕೋಟ್ಯಾಂತರ ಹೆಸರುಗಳಿಂದ ಮತ್ತು ರೂಪಗಳಿಂದ ವ್ಯಕ್ತಗೊಂಡು, ವ್ಯಾಪಿಸಿ ಅವುಗಳ ಎಲ್ಲಾ ಚಲನೆಗಳಲ್ಲೂ ನಿಷ್ಪಕ್ಷಪಾತವಾಗಿ ಬೆಂಬಲಿಸುತ್ತದೆ.

ಅದಾಗ್ಯೂ ಇದಿಷ್ಟೇ ಎಲ್ಲವೂ ಅಲ್ಲ. ಸ್ಥಿರ ಮತ್ತು ಅಸ್ಥಿರ, ವ್ಯಕ್ತಿಗತ ಮತ್ತು ವ್ಯಕ್ತಿಸಂಬಂಧವಿಲ್ಲದ ಎಲ್ಲದರ ಹಿಂದೆ ಪರಮೋನ್ನತ, ಪರಮಶ್ರೇಷ್ಠ ಪುರುಷನಾದ ಪುರುಷೋತ್ತಮನು ನಿಂತಿರುತ್ತಾನೆ. ಕ್ಷರ ಮತ್ತು ಅಕ್ಷರಗಳು ಕೇವಲ ಈ ಪರಮಶ್ರೇಷ್ಠ ಪುರುಷನ ಸಮಚಿತ್ತವಾಗಿದೆ. ಎಲ್ಲವೂ ಅವನಿಂದಲೇ ಉತ್ಪತ್ತಿಯಾದಂತಹವುಗಳಾಗಿವೆ; ಎಲ್ಲವೂ ಅಂತಿಮವಾಗಿ ಅವನ ಸ್ವಾಭಾವಿಕ ಶಕ್ತಿ, ಪ್ರಕೃತಿ ಅಥವಾ ಮಾಯೆಯ ಮೂಲಕ ಆಳಲ್ಪಡುತ್ತದೆ. ಅವನ ಮೂಲಭೂತ ಸ್ಥಾನಮಾನ ಉತ್ಕೃಷ್ಟವಾಗಿದ್ದರೂ ತನ್ನ ವಿಶ್ವವ್ಯಾಪ್ತಿಯಲ್ಲಿ ತಾನೇತಾನಾಗಿ ಹರಡಿ, ಪ್ರತಿಯೊಂದು ಜೀವಿಯಲ್ಲೂ ಅನನ್ಯವಾಗಿ ನೆಲೆಸುತ್ತಾನೆ, ಅದುವೇ ಅವನ ಪರಮಶ್ರೇಷ್ಠ ಪ್ರಕೃತಿಯ ಅನಂತ ಭಾಗವಾದ ಜೀವ.

ಈ ಅಸ್ತಿತ್ವದ ಸತ್ಯವನ್ನು ಮಾನವನು ಅರಿತುಕೊಳ್ಳಬೇಕು. ಜೀವನದ ಅರ್ಥವು ಅದು ಹೊಂದಿರುವ ಬಾಹ್ಯಚಹರೆಗಿಂತಲೂ ಹೆಚ್ಚು ಆಳವಾಗಿರುತ್ತದೆ. ಜನಿಸುವುದು, ಜೀವಿಸುವುದು, ನೋವು, ನಲಿವು, ನಿರೀಕ್ಷೆ ಮತ್ತು ದುಃಖದ ದಾರಿಯಲ್ಲಿ ಸಾವಿನಲ್ಲಿ ಕೊಚ್ಚಿಕೊಂಡು ಹೋಗುವುದಾಗಲಿ, ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ಹಾರಿಹೋಗುವುದಾಗಲಿ ಉದ್ದೇಶವಲ್ಲ. ಅದು ಅಜ್ಞಾನದಲ್ಲಿರುವ ಜೀವನದ ಗುರುತಾಗಿದ್ದು, ಯಾರೇ ಆಗಲಿ ಮಾನವ ಜಾಗೃತನಾಗಿ ತನ್ನ ದುರ್ಬಲ ವ್ಯಕ್ತಿತ್ವಕ್ಕಿಂತ



ಹೆಚ್ಚಿನ ಶಕ್ತಿ, ದೊಡ್ಡದಾದ ವಾಸ್ತವಿಕತೆಯಿದೆ ಎಂಬುದನ್ನು ಗುರುತಿಸಿಕೊಳ್ಳಬೇಕು. ವಾಸ್ತವಿಕವಾಗಿ ವಿಶ್ವವು ತನ್ನ ಸಮೃದ್ಧವಾದ ಬಲಗಳು, ಶಕ್ತಿಗಳು ಮತ್ತು ಚೈತನ್ಯಗಳಿಂದ ಕೂಡಿದ ದೇವರ ಸಾಕ್ಷಾತ್ಕಾರವಾಗಿದ್ದು, ಅಂತಿಮವಾಗಿ ಎಲ್ಲವೂ ಅವನಿಗೆ ಸೇರಿದ್ದು, ಎಲ್ಲವೂ ಅವನಲ್ಲಿಯೆ ನೆಲೆಸಿರುತ್ತವೆ. ಅವನು ಸರ್ವಶಕ್ತ ಮತ್ತು ಸರ್ವವ್ಯಾಪಿ. ಮನುಷ್ಯನಿಗೆ ಮಾತ್ರ ತನ್ನ ಪರಿಮಿತ ವ್ಯಕ್ತಿತ್ವದಿಂದ ಹೊರಬಂದು ಭಗವಂತನ ಉನ್ನತ ಚೈತನ್ಯದಲ್ಲಿರಲು ವಿಶ್ವಾಸ, ದೃಷ್ಟಿ ಮತ್ತು ಮನಸ್ಸಿರಬೇಕಲ್ಲದೆ ವೈಯಕ್ತಿಕ, ಸಾರ್ವತ್ರಿಕ ಹಾಗೂ ಉತ್ಕೃಷ್ಟ ಹೀಗೆ ಅವನ ಪ್ರತಿಯೊಂದು ಸ್ಥಾನಗಳನ್ನು ಹಂತಹಂತವಾಗಿ ಅರಿತುಕೊಳ್ಳಬೇಕು. ಸರ್ವಸಂಗ ಪರಿತ್ಯಾಗ ಮಾಡಿ ಸನ್ಯಾಸ ಸ್ವೀಕರಿಸುವುದರಿಂದ ಇದನ್ನು ಮಾಡಲಾಗುವುದಿಲ್ಲ. ಜೀವನದಲ್ಲಿ ದೇವರ ಕ್ರಿಯಾತ್ಮಕತೆಯನ್ನು ನೆರವೇರಿಸಿಕೊಳ್ಳುವ ಉದ್ದೇಶದಿಂದ ಇನ್ನೂ ಬೃಹತ್ತಾದ ಮತ್ತು ಹೆಚ್ಚು ಸಹಜವಾದ ದಾರಿಯನ್ನು ಆಯ್ದುಕೊಳ್ಳಬೇಕೆಂದು ಭಗವದ್ಗೀತೆ ಹೇಳುತ್ತದೆ. ಇದರ ದಿಕ್ಕಿನ ಕೊನೆಗೆ ಧರ್ಮಗ್ರಂಥವು ನಿರ್ದೇಶಿಸಿ, ವೃದ್ಧಿಸುವ ಶಿಸ್ತಿನ ವ್ಯಾಪಕ ವಿಧಾನವು ಗಮನಾರ್ಹವಾದ ಕೇವಲ ವಿವಿಧ ರೀತಿಯ ಮಾನವನ ಪ್ರಕೃತಿ ಸ್ವಭಾವಗಳಿಗಷ್ಟೆ ಅಲ್ಲದೆ, ಹಲವಾರು ಮೂಲಧಾತುಗಳು ಒಟ್ಟಿಗೆ ಸೇರಿ ಉಂಟುಮಾಡುವ ಮಾನವನ ವ್ಯಕ್ತಿತ್ವದ ವಿವರಣೆಯನ್ನು ನೀಡುತ್ತವೆ.

### ೩.

ದೇವರು ನಿಮಗೆ ವಹಿಸಿರುವ ಕೆಲಸವನ್ನು ಮಾಡಿರಿ. ನೀವು ಮಾಡಿದ ಕೆಲಸದಿಂದ ದೊರೆತ ಫಲವನ್ನು ಎಲ್ಲರ ಪ್ರಭುವಾದ ಅವನಿಗೆ ಕಾಣಿಕೆಯಾಗಿ ಅರ್ಪಿಸಿರಿ. ಆಸೆ, ಆಕಾಂಕ್ಷೆಗಳನ್ನು ಬಿಟ್ಟುಬಿಡಿ. ಸಮಾನತೆಯನ್ನು ಸಾಧಿಸಿ, ಮನಸ್ಸಿನಲ್ಲಿ ಅಥವಾ ಹೃದಯದಲ್ಲಿ ಈ ಕೆಲಸ ಅಥವಾ ಇನ್ಯಾವುದೇ ಕೆಲಸಕ್ಕಾಗಿ ಒಲವು ಬೇಡ; ಯಾವುದೇ ಕೆಲಸಗಳ ಫಲಿತಾಂಶಗಳಿಗೆ ಅಂಟಿಕೊಂಡಿರುವುದು ಬೇಡ, ಏಕೆಂದರೆ ಎಲ್ಲವೂ ಅವನಿಗೆ ಸೇರಿದ್ದಾಗಿದ್ದು ಸರ್ವಜ್ಞನಾದ ಅವನಿಗೆ ಹೇಗೆ ಬೇಕೋ ಹಾಗೆ ಮಾಡಿಕೊಳ್ಳುತ್ತಾನೆ. ಇದು ದೈವಿಕ ದುಡಿಮೆಯ ರೀತಿ.

ಸಾವಕಾಶವಾಗಿ ಕೆಲಸಗಾರನಾದ ನಿಮ್ಮಲ್ಲಿರುವ ಭ್ರಮೆ ಕಳಚಿ ಬೀಳುತ್ತದೆ. ಕೆಲಸ ಮಾಡುತ್ತಿರುವುದು ನೀವಲ್ಲ ಬದಲಿಗೆ ಸಾರ್ವತ್ರಿಕವಾದ ಒಂದು ಶಕ್ತಿ ಎಂಬುದು ನಿಮ್ಮ ಅರಿವಿಗೆ ಬರುತ್ತದೆ. ಈ ಉನ್ನತ ಶಕ್ತಿಯು ಕಾರ್ಯವನ್ನು ನಿರ್ವಹಿಸುವುದಲ್ಲದೆ, ತನಗೆ ಬೇಕಾದ ಸಾಧನಗಳ ಮೂಲಕ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತದೆ. ನೀವು ಕೇವಲ ವಹನಸಾಧನ, ಒಂದು ಸಲಕರಣೆ, ವಿಧಿಯಂತೆ ಅರಿವಿಲ್ಲದವರೂ ಮತ್ತು ಅಸಹಾಯಕರಾದರೂ ನೀವು ಬಯಸಿದರೆ ಮನಃಪೂರ್ವಕವಾಗಿಯೂ, ಪ್ರಜ್ಞಾಪೂರ್ವಕವಾಗಿಯೂ ಆಗಬಹುದು. ನೀವು ಶರಣಾಗತರಾಗುವುದನ್ನು ಕಲಿಯಿರಿ.

ನಿಮ್ಮ ಚಿತ್ತವು ಆತನ ಪರಮಶ್ರೇಷ್ಠ ಚಿತ್ತದೊಂದಿಗಿರುವುದನ್ನು ಗುರುತಿಸಿರಿ; ಮತ್ತು ವ್ಯಕ್ತಿತ್ವಕ್ಕೆ ಸಂಬಂಧವಿಲ್ಲದಂತೆ ಎಲ್ಲಾ ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದೈವಿಕ ಶಕ್ತಿಯನ್ನು ಹರಡುವ ಸರಳ ಉಪಕರಣವಾಗಿರಿ. ಈ ಸಾರ್ವತ್ರಿಕ ಪ್ರಜ್ಞೆಯು ಶಕ್ತಿಯಾಗುವುದರ ಬಗ್ಗೆ ಬೆಳೆಯುತ್ತಿರುವ ಜಾಗೃತಿ ಮತ್ತು ಅದಕ್ಕೆ ಸಂಪೂರ್ಣವಾಗಿ ಶರಣಾಗಿ ಮಣಿಯುವ ಚೈತನ್ಯವು ಅದರೊಂದಿಗೆ ಸಂಪೂರ್ಣವಾಗಿ ಗುರುತಿಸಿಕೊಂಡು ಉಚ್ಚ ಸ್ಥಾನಕ್ಕೆ ಬರುತ್ತದೆ. ಮುಂದಿನದೇ ಮಹತ್ವವಾದ ಹೆಜ್ಜೆ– ಜ್ಞಾನದ ಹಾದಿ.

ಆದರೆ ಈ ಗ್ರಹಿಕೆಯು ಪರಿಪೂರ್ಣವಾಗಬೇಕಾದರೆ, ವಿಶ್ವಶಕ್ತಿಯು ತಾನಾಗೆ ವ್ಯಕ್ತವಾಗಬೇಕು ಮತ್ತು ಪರಮಶ್ರೇಷ್ಠ ಭಗವಂತನಾದ ಪುರುಷೋತ್ತಮನ ಶಕ್ತಿಯಾಗಿ ಅರಿವಿಗೆ ಬರಬೇಕು, ಎಲ್ಲವನ್ನೂ ಮೀರದವನಾದರೂ, ಭಗವಂತನು ಎಲ್ಲವನ್ನೂ ಅವಳ ಮೂಲಕ ಅಂದರೆ ಅವನ ಮಾಯಾಶಕ್ತಿಯ ಮೂಲಕ ಸೃಷ್ಟಿಸುವನು ಮತ್ತು ಆಳುವನು. ಅವನು ಈಗ ಬಹಿರಂಗವಾಗಿ ನಿಮ್ಮ ಚೈತನ್ಯದ ಶಿಕ್ಷಕ ಮತ್ತು ಮಾಲಿಕ; ನಿಮ್ಮ ಮನಸ್ಸಿನ ಮತ್ತು ಆತ್ಮದ ಎಲ್ಲಾ ಗತಿ ಮತ್ತು ಸಾಮರ್ಥ್ಯಗಳು ಅವನೆಡೆಗೆ ಹರಿಯುತ್ತದೆ. ಮನಸ್ಸಿನ ಮತ್ತು ಜೀವನದ ಎಲ್ಲಾ ಕಟ್ಟಳೆಗಳು, ಎಲ್ಲಾ ಆದರ್ಶಗಳು ಅವನ ಪರಮಶ್ರೇಷ್ಠ ವ್ಯಕ್ತಿತ್ವದಲ್ಲಿ ಒಂದಾಗಿ ಸೇರಿಹೋಗುತ್ತವೆ. ನಿಮ್ಮನ್ನು ನೀವೇ ಅವನಿಗೆ ಅರ್ಪಿಸಿಕೊಂಡು, ನಿಮ್ಮ ಮನಸ್ಸನ್ನು ಅವನ ಮನಸ್ಸಿನಲ್ಲಿ ವಿಲೀನಗೊಳಿಸುವುದನ್ನು ಅತ್ಯುನ್ನತ ಧರ್ಮವೆಂದಷ್ಟೆ ಅಲ್ಲ, ಬಹಳ ತೀಕ್ಷ್ಣವಾದ ಭಾವಪರವಶತೆ ಎಂದೇ ತಿಳಿಯಲಾಗಿದೆ. ಪ್ರೇಮದ ದಾರಿಯ ದ್ವಾರಗಳು ತೆರೆದುಕೊಳ್ಳುತ್ತವೆ. ನಿಮ್ಮ ಚಿತ್ತವು ದುಡಿಮೆಯ ದೀರ್ಘ ಪಥದಲ್ಲಿ ಶುದ್ಧೀಕರಿಸಲ್ಪಡುತ್ತದೆ ಮತ್ತು ನಿಮ್ಮ ಮನಸ್ಸು ಜ್ಞಾನದ ಹಾದಿಯಲ್ಲಿ ಏಳಿಗೆ ಹೊಂದಿ ಪ್ರಕಾಶಗೊಳಿಸಲ್ಪಡುತ್ತದೆ ಮತ್ತು ಈಗ ಶರಣಾಗತವಾದ ಹೃದಯದ ಪ್ರೇಮ ಮತ್ತು ಸಂತೋಷದ ಪ್ರವಾಹದಲ್ಲಿ ಮಿಂದೆದ್ದು ತನ್ನ ಏಕೈಕ ಮತ್ತು ಪರಿಪೂರ್ಣ ದೇವರನ್ನು ಕಂಡುಕೊಂಡಿರುವುದರಿಂದ ನೀವು ಅವನ ಸ್ವಂತದವರಾಗಿರುತ್ತೀರಿ. ನೀವು ಅವನಲ್ಲಿ ಜೀವಿಸಿರುತ್ತೀರಿ. ಅವನಲ್ಲಿ ಪ್ರೀತಿಯನ್ನು ಕಾಣುತ್ತೀರಿ. ಅವನ ಲೀಲೆಗಳಿಂದ ಆನಂದ ಹೊಂದುತ್ತೀರಿ.

ಮಾನವ ತನ್ನೊಳಗೇ ಭೂಮಿ ಮತ್ತು ಸ್ವರ್ಗಗಳು ಒಂದುಗೂಡಿದಂತೆ ಕಲ್ಪಿಸಿಕೊಂಡು ತನ್ನೊಳಗಿನ ಆಧ್ಯಾತ್ಮಿಕ ಅರಿವು ಮತ್ತು ಹೊರಗಿನ ಜೀವನ ಮತ್ತು ಕ್ರಿಯೆಗಳ ನಡುವೆ ಬೆಳೆಯುವ ಐಕ್ಯತೆಯು ಹಾಗೂ ಪ್ರತಿಯೊಂದೂ ಇನ್ನೊಂದನ್ನು ಸಮೃದ್ಧಗೊಳಿಸುತ್ತಾ, ಪ್ರತಿಯೊಂದೂ ಇನ್ನೊಂದಾಗಿ ಅರಳುತ್ತಾ ಇರಬೇಕು, ಇದೇ ದಿವ್ಯವಾದ ಭಗವದ್ಗೀತೆ ಅವನಿಗೆ ನೀಡುವ ಪ್ರಧಾನ ಸಂದೇಶ. ಸತ್ಯ ಹಾಗೂ ಸಾಮಾನ್ಯ ಜ್ಞಾನಗಳ ಇತರ ಹಲವಾರು ರತ್ನಗಳಿದ್ದು– ಕೆಲವು ಹೊಸತು, ಕೆಲವು ಹಳತು. ಆದರೆ ಎಲ್ಲವನ್ನು ಹೊಸದಾಗಿ ಮತ್ತು ಜೀರ್ಣೋದ್ಧಾರಗೊಂಡ ರೂಪದಲ್ಲಿ



ಪ್ರಸ್ತುತಪಡಿಸಲಾಗಿದೆ. ಭಾರತೀಯ ಆಧ್ಯಾತ್ಮಿಕ ಗ್ರಂಥದಲ್ಲಿ ಇವುಗಳನ್ನು ಯಥಾರ್ಥವಾದ ನಿರೂಪಣೆಯೊಂದಿಗೆ ಉದಾರವಾಗಿ ಹೊರಚೆಲ್ಲಲಾಗಿದೆ. ಆದರೆ ಇಲ್ಲಿ ಅವುಗಳನ್ನೆಲ್ಲಾ ಪರಿಶೀಲಿಸುವುದು ನಮ್ಮ ಉದ್ದೇಶಕ್ಕೆ ಮೀರಿದುದಾಗಿದೆ. ನಾವು ನೋಡ ಹೊರಟಿದ್ದು ಭಗವದ್ಗೀತೆಯನ್ನು, ಅದು ಎಷ್ಟು ಶಕ್ತಿಶಾಲಿಯೆಂದು ನೋಡಿದ್ದಾಗಿದೆ– ವೇದ ಮತ್ತು ಉಪನಿಷತ್ತುಗಳಂತೆ– ಶ್ರೀ ಅರವಿಂದೋರವರ ಮೂಲಭೂತ ಬೋಧನೆಗಳನ್ನು ಸಮರ್ಥಿಸುವುದಲ್ಲದೆ, ದೇವರ ಸತ್ಯವನ್ನೂ, ಮನುಷ್ಯ ಮತ್ತು ಪ್ರಕೃತಿಯು ವಿಕಾಸ ಹೊಂದುತ್ತಾ ದೈವಿಕ ಸಾಕ್ಷಾತ್ಕಾರದಲ್ಲಿ ಐಕ್ಯವಾಗುವುದನ್ನು ದೃಢಪಡಿಸುತ್ತದೆ.

* * * *